"ಜನಪದ ಕಥನಗೀತೆಗಳು ಮತ್ತು ಹೆಣ್ಣು"

(ಕನ್ನಡ ಎಂ.ಫಿಲ್ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಮಾರ್ಗದರ್ಶಕರು:
ಡಾ: [illegible]

ಸಂಶೋಧನಾ ವಿದ್ಯಾರ್ಥಿ :
[illegible]

ಕರ್ನಾಟಕ ಸಂಘ (ರಿ), ಮುಂಬೈ.
[illegible] ಶ್ರೀಕಂಠ[illegible] ಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾಲಯದ [illegible] [illegible])

೨೦೦೭-೨೦೦೮

513

"ಜನಪದ ಕಥನಗೀತೆಗಳು ಮತ್ತು ಹೆಣ್ಣು"

(ಕನ್ನಡ ಎಂ.ಫಿಲ್ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಮಾರ್ಗದರ್ಶಕರು :
ಡಾ|| ಲಿಂಗರಾಜಯ್ಯ

ಸಂಶೋಧನಾ ವಿದ್ಯಾರ್ಥಿ :
ಪ್ರಭಾವತಿ ಎಂ.ಎ.

ಕರ್ನಾಟಕ ಸಂಘ (ರಿ), ಮಂಡ್ಯ,
ಎಂ.ಎಲ್. ಶ್ರೀಕಂಠೇಶ ಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

೨೦೦೭-೨೦೦೮

ಮಾರ್ಗದರ್ಶಕರ ಘೋಷಣಾ ಪತ್ರ

ಪ್ರಭಾವತಿ ರವರು ''ಜಾನಪದ ಕಥನಗೀತೆಗಳು ಮತ್ತು ಹೆಣ್ಣು'' ಎಂಬ ಶೀರ್ಷಿಕೆಯ ಈ ಎಂ.ಫಿಲ್ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ಬೇರೆ ಯಾವುದೇ ವಿಶ್ವ ವಿದ್ಯಾಲಯದ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಮಾರ್ಗದರ್ಶಕರು

ದಿನಾಂಕ : 23-10-2008
ಸ್ಥಳ : ಬೆಂಗಳೂರು

(ಡಾ|| ಲಿಂಗರಾಜಯ್ಯ)
ಮುಖ್ಯಸ್ಥರು ಕನ್ನಡ ವಿಭಾಗ
ವಿವೇಕಾನಂದ ಪದವಿ ಕಾಲೇಜು
ರಾಜಾಜಿನಗರ, ಬೆಂಗಳೂರು

ಅಭ್ಯರ್ಥಿಯ ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶ ಗೌಡ ಸಂಶೋಧನಾ ಕೇಂದ್ರದಲ್ಲಿ 2007-08ನೇ ಸಾಲಿಗೆ ಪ್ರಭಾವತಿ, ಎಂ.ಫಿಲ್ ಅಭ್ಯರ್ಥಿಯಾದ ನಾನು ಪ್ರವೇಶ ಪಡೆದಿರುತ್ತೇನೆ. ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು ''ಜನಪದ ಕಥನಗೀತೆಗಳು ಮತ್ತು ಹೆಣ್ಣು'' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ|| ಲಿಂಗರಾಜು ಬೆಳಕೆರೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವಾಗಲೀ, ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ದಿನಾಂಕ : 23.10.2008

ಸ್ಥಳ : ಸಾಗರ

ಸಹಿ

ಪ್ರಭಾ

(ಪ್ರಭಾವತಿ)

ಸಂಶೋಧನಾ ವಿದ್ಯಾರ್ಥಿ

ಪರಿವಿಡಿ

1. ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

2. ಜನಪದ ಸಾಹಿತ್ಯ ಮತ್ತು ಮಹಿಳೆ

3. ಜನಪದ ಕಥನ ಕಾವ್ಯ ಮತ್ತು ದುರಂತದ ಪರಿಕಲ್ಪನೆ

4. ಜನಪದ ಕಥನ ಕಾವ್ಯ ಮತ್ತು ಪ್ರತಿಭಟನೆಯ ನೆಲೆಗಳು

5. ಜನಪದ ಕಥನ ಕಾವ್ಯ ಮತ್ತು ಸುಖಾಂತದ ಪರಿಕಲ್ಪನೆ

6. ಉಪಸಂಹಾರ

7. ಪರಾಮರ್ಶನ ಗ್ರಂಥಗಳು

ಜನಪದ ಕಥನ ಗೀತೆಗಳು ಮತ್ತು ಹೆಣ್ಣು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ:

ಪೀಠಿಕೆ:

ಮಾನವನ ಬದುಕು ಎಂದಿಗೂ ನಿಗೂಢ ಮತ್ತು ಕೌತುಕವಾದದ್ದು. ಅನಾದಿಕಾಲದಿಂದ ಇಂದಿನವರೆಗೂ ಅತ್ಯಂತ ಆಸಕ್ತಿಯಿಂದ ನಡೆದ, ನಡೆಯುತ್ತಿರುವ ಅಧ್ಯಯನ, ಸಂಶೋಧನೆಗಳೇ ಈ ಮಾತಿಗೆ ಸಾಕ್ಷಿಯಾಗಿದೆ. ಆಧುನಿಕ ತಿಳುವಳಿಕೆ ಹೆಚ್ಚಿದಂತೆಲ್ಲಾ ಇನ್ನೂ ಆಳವಾದ ಮತ್ತು ಸೂಕ್ಷ್ಮವಾದ ಅಧ್ಯಯನದ ಸಾಧ್ಯತೆ ಇಮ್ಮಡಿಗೊಂಡಿದೆ. ಅನೇಕ ಸ್ಥೂಲ ವಿಷಯಗಳು ಸೂಕ್ಷ್ಮತೆಗಳನ್ನು ಪಡೆದುಕೊಳ್ಳುತ್ತಾ ಆಸಕ್ತಿಯನ್ನು ಕೆರಳಿಸುತ್ತಾ ಹಲವು ಸಾಧ್ಯತೆಗಳಿಗೆ ಇಂಬುಕೊಟ್ಟಿದೆ. ಅಂತೆಯೇ ಸೂಕ್ಷ್ಮ ಅಧ್ಯಯನಕ್ಕೆ ಸಮಾಜ ವಿಜ್ಞಾನ, ಮಾನವಿಕ ಶಾಸ್ತ್ರಗಳು ಅಪಾರ ಸಾಮಗ್ರಿಯನ್ನು ಒದಗಿಸುತ್ತಿವೆ. ಅಂತೆಯೇ ಸಾಹಿತ್ಯ ಮತ್ತು ಜಾನಪದ ಅಧ್ಯಯನ ಭಾರತದ ಮಟ್ಟಿಗೆ 18ನೇ ಶತಮಾನದ ನಂತರ ಸಾಕಷ್ಟು ವ್ಯಾಪಕವಾದ ಸಂಶೋಧನೆಗೆ ಅವಕಾಶವಾಗಿದೆ. ಇದಕ್ಕೆ ಚಾರಿತ್ರಿಕೆ ಹಿನ್ನಲೆಗಳು ಇವೆ. ಪೂರಕವೆಂಬಂತೆ ನಿರ್ದಿಷ್ಟ ವಿಷಯವೊಂದರ ಆಂತರಿಕ ಸಂಬಂಧಗಳ ಜಾಡು ಹಿಡಿದು ಅಂತರ್ ಶಿಸ್ತಿನ ಅಧ್ಯಯನಕ್ಕೂ ಅವಕಾಶವಾಗಿದೆಯೆಂಬುದು ನಿರ್ವಿವಾದ. ಈ ನೆಲೆಯಲ್ಲಿ ಸಾಹಿತ್ಯ, ಜನಪದ, ಕಲೆ, ಧರ್ಮ, ಚರಿತ್ರೆ, ಸಮಾಜ ವಿಜ್ಞಾನ, ಭಾಷಾಶಾಸ್ತ್ರ ಮುಂತಾದ ಶಾಸ್ತ್ರಗಳ ಅರಿವು ಅಧ್ಯಯನಕ್ಕೆ ಬಹಳ ಮುಖ್ಯವೆನಿಸಿದೆ. ಅಲ್ಲದೆ ಇತಿಹಾಸ, ಧರ್ಮಶಾಸ್ತ್ರ, ಅರ್ಥಶಾಸ್ತ್ರ ಮಾನವಿಕ ಶಾಸ್ತ್ರಗಳಿಗೆ ವಿಜ್ಞಾನ, ತಂತ್ರಜ್ಞಾನಗಳಂಥ ವಿಷಯಗಳು ತೀರಾ ಅಗತ್ಯವೆನಿಸಿ, ಪೂರಕರವಾಗಿ ಕಂಡುಬರುತ್ತವೆ. ಈ ನೆಲೆಯಲ್ಲಿ ಮನುಷ್ಯನ ಬದುಕನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡುವುದು ಈ ಕಾಲಮಾನಕ್ಕೆ ಅನಿವಾರ್ಯವೆನಿಸಿದೆ. ಧರ್ಮ, ಸಮಾಜ ಸಂಸ್ಕೃತಿ, ಕಲೆ, ಇತಿಹಾಸ, ಮುಂತಾದ ಕ್ಷೇತ್ರಗಳಿಗೆ ಸಹಜವಾಗಿಯೇ ವಿಸ್ತರಿಸಿಕೊಂಡಿರುವ ಕಾರಣದಿಂದಾಗಿ ಯಾವುದೇ ಆಧ್ಯಯನದ ವಿಷಯವನ್ನು ನಾವು

ಅದರ ಬಹುಮುಖ ಸ್ವರೂಪದ ನೆಲೆಗಳನ್ನು ಕಂಡುಕೊಳ್ಳುವುದಕ್ಕೆ ಅಂತರ್ ಸಂಬಂಧಗಳ ಅಧ್ಯಯನ ಬಹುಮುಖ್ಯವಾಗುತ್ತದೆ.

ವಿಶ್ವದ ಮಾನವ ಕುಲದ ಚರಿತ್ರೆಯಲ್ಲಿ ಪ್ರಧಾನವಾಗಿರುವ ಹೆಣ್ಣಿನ ಬದುಕು ದಾಖಲಾದದ್ದು ತುಂಬಾ ಕಡಿಮೆಯೇ. ಆದರೆ ಗಂಡಿನ ಪ್ರತಿಷ್ಠೆ, ಸ್ವಾಭಿಮಾನ, ಅಹಂಕಾರ, ಗೌರವ, ಅವಮಾನ ಬಹುಮಾನಗಳ ಚಿತ್ರಣಗಳಲ್ಲಿ ಆಕಸ್ಮಿಕವೆಂಬಂತೆ ಪರೋಕ್ಷವಾಗಿ ಹೆಣ್ಣಿನ ಬದುಕಿನ ಚಿತ್ರಗಳು ಪುರಾಣ, ಮಹಾಕಾವ್ಯ, ಚಿತ್ರಕಲೆ, ಶಿಲ್ಪಕಲೆ ಮುಂತಾದುವುಗಳಲ್ಲಿ ಆನುಷಂಗಿಕವಾಗಿ ವರ್ಣಿತಗೊಂಡಿದೆ. ಅದು ಮಾತ್ರವೇ ಇತಿಹಾಸದಲ್ಲಿ ಹೆಣ್ಣಿನ ಜೀವನದ ವೈವಿಧ್ಯಮಯ ಚಿತ್ರಣವಾಗಿ ಉಳಿದು ಬಂದಿದೆ ಎನ್ನಬೇಕು. ಹೀಗೆ ಇದುವರೆಗೆ ದೊರೆತ ಲಿಖಿತ ದಾಖಲೆಗಳಲ್ಲಿ ಹೆಣ್ಣಿನ ಜೀವನ ಸಮೃದ್ಧವೂ, ಸುಖಕರವೂ, ಸಂತೋಷವೂ ಆಗಿರುವುದು ಬಹು ವಿರಳ. ವ್ಯವಸ್ಥೆಯ ಒಳಗೆ ಬಂಧಿಯಾಗಿ ಅಮಾನುಷ ರೀತಿಯಲ್ಲಿ ಬದುಕಿರುವುದೇ ಹೆಚ್ಚು. ಈ ನೆಲೆಯಲ್ಲಿ ಇಂದು ಸಮಾಜ, ಸಾಹಿತ್ಯ, ಸಂಸ್ಕೃತಿ, ಕಲೆಗಳನ್ನು ಅಧ್ಯಯನ ಮಾಡುವ ಸಂದರ್ಭಗಳಲ್ಲಿ ಈ ಬಗೆಯ ನಿರ್ಲಕ್ಷಿತ ಹೆಣ್ಣಿನ ಜೀವನವನ್ನು, ಅದರ ವಿವಿಧ ಮುಖಗಳನ್ನು ಖಚಿತವಾಗಿ ಗುರುತಿಸುವ ಅಧ್ಯಯನದ ಸಾಧ್ಯತೆಗಳು ಅಗತ್ಯವೆನ್ನಿಸುತ್ತದೆ.

ಇದು ಜಾಗತೀಕರಣದ ಪರಿಣಾಮಗಳ ವಿಶಿಷ್ಟಕಾಲಘಟ್ಟ. ನಮ್ಮ ಭೌದ್ಧಿಕ ನೆಲೆಗಳನ್ನು ಮೇರೆ ಮೀರಿ ವಿಸ್ತರಿಸುತ್ತಿರುವ ಆಧುನಿಕ ಜಗತ್ತು ಒಂದು ಕಡೆ; ಸಾವಿರಾರು ವರ್ಷಗಳ ಭಾವನಾತ್ಮಕ ಸ್ಮೃತಿ ಸಂಸ್ಕೃತಿಗಳ, ಸಂಪ್ರದಾಯಗಳ, ಗ್ರಾಮೀಣ ಜನರ, ಅದರಲ್ಲೂ ಗ್ರಾಮೀಣ ಸ್ತ್ರೀಯರ ಒಟ್ಟು ಬದುಕು ಅಧ್ಯಯನಾರ್ಹವಾದುದು. ಇವರ ಬದುಕನ್ನು ನಮ್ಮ ಹಿಂದಿನ ಪುರುಷ ಸಮಾಜದ ಸ್ಥಾಪಿತ ಮೌಲ್ಯಗಳು ಆಳುತ್ತಿವೆ. ಅನೇಕ ಸಂದರ್ಭಗಳಲ್ಲಿ ಪುರುಷ ನೆಲೆಯ ನಿರ್ದೇಶನಗಳನ್ನು ಬಹಿಷ್ಕರಿಸಿದ್ದುದು ಅನೇಕ ಸಂದರ್ಭಗಳಲ್ಲಿ ಕಂಡು ಬರುತ್ತದೆ. ಸ್ತ್ರೀಯರು ಬಹಿಷ್ಠೆಯರಾಗುವ (ಗರ್ಭಧಾರಣೆ, ಬಾಣಂತಿ, ಮುಟ್ಟು) ಕಾರಣಕ್ಕಾಗಿ ಅವರನ್ನು ಅಪವಿತ್ರರು ಅಪರಿಶುದ್ಧರು, ಪುರುಷರಿಗಿಂತ ಕೀಳು ಎಂದು ತಾತ್ವಿಕವಾಗಿ ಪರಿಗಣಿಸಿದ್ದಾರೆ. ಈ ಕಾರಣದಿಂದಾಗಿ ಸ್ತ್ರೀಯರು ವಿಶೇಷ ಸಂದರ್ಭಗಳಲ್ಲಿ ಕೆಲವು ಚಟುವಟಿಕೆಗಳಲ್ಲಿ, ಧಾರ್ಮಿಕ ಪೂಜಾ ವಿಧಿಗಳಲ್ಲಿ ಭಾಗವಹಿಸುವುದಕ್ಕೆ ಪ್ರತಿಬಂಧಕವಿದ್ದು, ಆಕೆಯ

ಸ್ವಾತಂತ್ರ್ಯ ಕುಂದುವಂತಾಯಿತು. ಇಷ್ಟೇ ಅಲ್ಲದೆ ಇವರನ್ನು ಅನಾಗರಿಕ, ಅಪರಾಧಿ, ಅಜ್ಞಾನಿ, ಕೀಳು ಎಂದೆಲ್ಲ ಕಾಣತೊಡಗಿದರು. ಹೀಗಾಗಿ ಇಂತಹ ಬದುಕಿನ ಚಿತ್ರಣಗಳು ಇಂದು ಬೇರೆ ಬೇರೆ ಕಾರಣಗಳಿಂದಾಗಿ ತೀವ್ರಗಮನಸೆಳೆಯುತ್ತಿವೆ ಮತ್ತು ವಿಶಿಷ್ಟ ಅಧ್ಯಯನಕ್ಕೆ ಒಳಗಾಗುತ್ತಿವೆ. ಹಾಗಾಗಿ ಅಂತಹ ಸೂಕ್ಷ್ಮ ಸಾಮಾಜಿಕ ವಿನ್ಯಾಸಗಳನ್ನು ಚರ್ಚಿಸುವುದೇ ಈ ಹೊತ್ತಿನ ತುರ್ತು ಕೂಡಾವಾಗಿದೆ.

ಪ್ರತಿಯೊಂದು ಸಮುದಾಯವೂ ತನ್ನದೇ ಆದ ಬದುಕಿನ ವಿಧಾನಗಳನ್ನು ರೂಢಿಸಿಕೊಂಡಿರುತ್ತದೆ. ಇದು ಅನಾದಿಕಾಲದ ಸೃಷ್ಟಿಯೇನಲ್ಲ. ಬದಲಿಗೆ ಕಾಲದ ಪ್ರಕ್ರಿಯೆಯಲ್ಲಿ ಭಿನ್ನ ಸಮುದಾಯಗಳೊಂದಿಗೆ ಭಿನ್ನ ಪ್ರಕೃತಿಯ ನೆಲಗಳೊಂದಿಗೆ ಮಥಿಸಿ ಸೃಜಿಸಿಕೊಂಡ ಆಲೋಚನಾ ವಿಧಾನವಾಗಿರುತ್ತವೆ. ಇದು ವೈಶಿಷ್ಟ್ಯಪೂರ್ಣವೂ ಹಾಗೂ ಭಿನ್ನವೂ ಆಗಿರುತ್ತದೆ. ಇವು ಸಾಮುದಾಯಿಕ ನಂಟು ಹಾಗೂ ನೆಲೆಸಿದ ಪಾರಿಸರಿಕ ಪ್ರಭಾವಲಯದ ಪ್ರಜ್ಞೆಯೊಳಗೆ ಏಕೀಭವಿಸಿಕೊಂಡಿವೆ. ಹೆಣ್ಣು ಏಕೆ ತುಳಿಯಲ್ಪಟ್ಟಳು? ಅಥವಾ ಕೆಳಕ್ಕೆ ಜಾರಲ್ಪಟ್ಟಳು ? ಈ ಕರಾಳ ವ್ಯವಸ್ಥೆಯ ಹಿಂದಿನ ಸೂತ್ರಧಾರರು ಯಾರು ? ಇವುಗಳನ್ನು ನಿಯಂತ್ರಿಸುತ್ತಿರುವವರಾರು ? ಈ ಎಲ್ಲಾ ಪ್ರಶ್ನೆಗಳಿಗೆ ಅರ್ಥ ಹುಡುಕತೊಡಗಿದರು. ಮತ್ತು ಹೆಣ್ಣಿನ ಬದುಕನ್ನು ಕೇಂದ್ರೀಕರಿಸಿಕೊಂಡು ಭಿನ್ನನೆಲೆಗಳಿಂದ ಅಭ್ಯಸಿಸತೊಡಗಿದರು.

ಮುಖ್ಯ ಕಾಲಘಟ್ಟದ ಹೊಸ್ತಿಲಲ್ಲಿ ಇಂದು ಇಡೀ ಜಗತ್ತಿನ ಗ್ರಾಮೀಣ ಸಮುದಾಯಗಳು ನಿಂತಿವೆ. ಏಕೆಂದರೆ ಆಧುನಿಕ ಜಗತ್ತಿನ ನಿರಂತರ ದಾಹ ಹಾಗೂ ಇನ್ನೂ ಆಳದಲ್ಲಿ ಉಳಿದಿರುವ ಪರಂಪರೆಯ ಬೇರುಗಳ ಮಿಸುಕಾಟ ಇವೆರಡನ್ನೂ ಏಕಕಾಲದಲ್ಲಿಯೇ ಹೊಂದುವ ತಲ್ಲಣಕ್ಕೆ ಸಮುದಾಯಗಳು ಇಂದು ಒಳಗಾಗಿವೆ. ಪ್ರತಿ ಸಮುದಾಯಗಳ ಸಂಸ್ಕೃತಿಯ ಒಳತೋಟಿಯನ್ನು ತಡವಬೇಕಾದುದು ಅವರ ಪುರಾಣ, ಕಲೆ, ಸಾಹಿತ್ಯ, ನೃತ್ಯ, ಧರ್ಮ ಶಾಸ್ತ್ರಗಳ ನೆರವಿನಿಂದ ಅಲ್ಲ. ಅದಕ್ಕೆ ಬದಲಾಗಿ ಅವರ ಒಟ್ಟು ಜೀವನ ವಿಧಾನ. ಅದಕ್ಕೆ ಪೂರಕವಾದ ಕಲೆ, ಸಾಹಿತ್ಯ, ನಂಬಿಕೆ, ಆಚರಣೆ, ಸಂಪ್ರದಾಯಗಳ ಹಿಂದೆ ಪ್ರಮುಖ ಪಾತ್ರವಹಿಸಿರುವ ಆರ್ಥಿಕ-ಸಾಮಾಜಿಕ, ಚಾರಿತ್ರಿಕ ಸಂಬಂಧಗಳಿವೆ. ಏಕೆಂದರೆ ಆಧುನಿಕ ಜಗತ್ತಿನ ಎಲ್ಲಾ ಬಗೆಯ ಬಿಕ್ಕಟ್ಟು ಹಾಗೂ ತಲ್ಲಣಗಳಿಗೆ ಮುಖಾಮುಖಿಯಾಗಿ

ನಿಲ್ಲುವ ಶಕ್ತಿಯನ್ನು ಕೊಡುವುದೇ ಈ ಸಾಮಾಜಿಕ ಆರ್ಥಿಕ ಮಾರ್ಗಗಳು. ಒಂದು ಸಮುದಾಯದಲ್ಲಿ ಆರ್ಥಿಕವಾಗಿ ಪ್ರಬಲಳಾಗಿರುವ ಹೆಣ್ಣಿನ ಆಲೋಚನಾ ಕ್ರಮಗಳೇ ಬೇರೆ. ಆರ್ಥಿಕವಾಗಿ ದುರ್ಬಲಳಾಗಿರುವ ಹೆಣ್ಣಿನ ಆಲೋಚನಾ ಕ್ರಮಗಳೇ ಬೇರೆ. ಆದರೆ ಅಂತಿಮವಾಗಿ ಎಲ್ಲಾ ಸ್ತ್ರೀಯರೂ ಶೋಷಿತರೇ ಎಂಬುದನ್ನು ನಾವು ಮರೆಯುವಂತಿಲ್ಲ. ಶೋಷಣೆಯ ಕರಾಳ ಕೂಪದೊಳಗೆ, ಜೀವಂತಿಕೆಯ ಅಪಹರಣಕ್ಕೆ ಇಂತಹ ಅಧ್ಯಯನಗಳು ಮಾರ್ಗಸೂಚಿಕೆಯಾಗಿ ಹಾಗೂ ಸಾಂತ್ವನದ ಕಲ್ಪನೆಗಳೂ ಕೂಡ ಇಲ್ಲಿ ಸಾಕಾರಗೊಂಡಿವೆ.

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ 'ಜನಪದ ಕಥನಗೀತೆ' ಗಳ ಅದ್ಯಯನದಿಂದ ಜನಪದ ಹೆಣ್ಣಿನ ಜೀವನ ಜಗತ್ತನ್ನು ಗುರ್ತಿಸಬಹುದಾಗಿದೆ. ಈ ಹಿನ್ನಲೆಯಲ್ಲಿ ನಾನು ನನ್ನ ಅಧ್ಯಯನಕ್ಕೆ ಪ್ರಾತಿನಿಧಿಕವಾಗಿ ಒಟ್ಟು ಹತ್ತು ಪದ್ಯಗಳನ್ನು ಆಯ್ಕೆಮಾಡಿಕೊಂಡು ಅವುಗಳ ಮೂಲಕ ಜನಪದ ಹೆಣ್ಣಿನ ಸೂಕ್ಷ್ಮ ಸಂವೇದನೆಯನ್ನು ಅರಿಯುವ ಸಣ್ಣ ಪ್ರಯತ್ನ ಮಾಡಿದ್ದೇನೆ. ಜನಪದ ಹೆಣ್ಣಿನ ಬಾಳು ಪುರೋಹಿತಶಾಹಿ ಅಥವಾ ಯಜಮಾನ ಸಂಸ್ಕೃತಿಗೆ ಕಟ್ಟುಬಿದ್ದು ಪ್ರತಿ ಹಂತದಲ್ಲೂ ಹೆಣ್ಣು ಹೀಗೆ ನಲುಗಿ ಹೋಗಿದ್ದಾಳೆ. ಅದರ ಹಿಂದಿರುವ ವ್ಯವಸ್ಥೆಯ ಕೈವಾಡಗಳೇನು? ಅದು ಹೇಗೆ ಜನಪದ ಸ್ತ್ರೀಯರ ಜೀವನದ ಮೇಲೆ ಅಚ್ಚಳಿಯದ ಪ್ರಭಾವನ್ನು ಬೀರಿದೆ ಎಂಬ ಬಗೆಗೆ ನಾನು ಆಯ್ಕೆ ಮಾಡಿಕೊಂಡಿರುವ ಕಥನ ಗೀತೆಗಳ ಹಿನ್ನಲೆಯಲ್ಲಿ ಆಲೋಚಿಸಿದ್ದೇನೆ. ಇಲ್ಲಿ ಬರುವ ಕಥನಗೀತೆಗಳಲ್ಲಿ ಶೋಷಿತ ಮುಖದಲ್ಲಿ ಮಾತ್ರ ಹೆಣ್ಣು ಚಿತ್ರಿತವಾಗಿಲ್ಲ ಬದಲಾಗಿ ಶೋಷಕ ಮತ್ತು ಶೋಷಣೆ ಎರಡೂ ಮುಖದಲ್ಲೂ ಅವಳ ವ್ಯಕ್ತಿತ್ವ ಅನಾವರಣಗೊಂಡಿದೆಯೆಂದು ನನ್ನ ಭಾವನೆ. ಪುರೋಹಿತ ಅಥವಾ ಯಜಮಾನ ಸಂಸ್ಕೃತಿಯ ಹಿಡಿತ ಮೇಲ್ನೋಟಕ್ಕೆ ಕಂಡು ಬರುವುದಿಲ್ಲ. ಬದಲಾಗಿ ಧರ್ಮ, ದೇವರು, ನಂಬಿಕೆ, ಪದ್ಧತಿ, ಸಂಪ್ರದಾಯಗಳು ಈ ಬಗೆಯ ಭಾವನಾತ್ಮಕ ವಿಚಾರಗಳ ಮೂಲಕ ಅನಕ್ಷರಸ್ಥ ಸಮುದಾಯದ ಬದುಕನ್ನು ಆವರಿಸಿಕೊಂಡಿರುವಂತೆ ಕಂಡು ಬರುತ್ತದೆ.

ಸಾಹಿತ್ಯದ ಅಂಶಗಳು ಜನಪದರ ಕಾವ್ಯ ಸೃಷ್ಟಿಯ ಪ್ರತಿಭಾ ಶಕ್ತಿಗೆ ಹಿಡಿದ ಕೈಗನ್ನಡಿಯಂತಿವೆ. ಒಂದು ಬದುಕು ಪುರುಷ ಮತ್ತು ಸ್ತ್ರೀ ವ್ಯಕ್ತಿತ್ವಗಳ ಮೂಲಕವೇ ಪರಸ್ಪರ ರಚನೆಗೊಂಡಿರುತ್ತವೆ. ಆದರೆ

ಕಥನಗೀತೆಗಳಲ್ಲಿ ಪರಸ್ಪರ ಪೂರಕ ವಾತಾವರಣವಿಲ್ಲದೆ ಪರಸ್ಪರ ವಿರುದ್ಧ ನೆಲೆಯಲ್ಲಿ ಕಟ್ಟಿಕೊಡುತ್ತವೆ. ಪುರುಷ ಸ್ತ್ರೀಯನ್ನು ಪೂರ್ಣವಾಗಿ ನಿರ್ಬಂಧಿಸುತ್ತಾನೆ. ಈ ನಿರ್ಬಂಧಿಸುವಂಥ ಕೆಲವು ಕಥನ ಕವನಗಳನ್ನು ಈ ಪ್ರಬಂಧದ ವ್ಯಾಪ್ತಿಗೆ ತೆಗೆದುಕೊಂಡಿದ್ದೇನೆ.

ಪಟ್ಟಭದ್ರ ಹಿತಾಸಕ್ತಿಯನ್ನು ಮೀರಿ ಪ್ರತಿಭಟನಾತ್ಮಕ ನೆಲೆಯಲ್ಲಿ ಬದುಕನ್ನು ಹುಡುಕಿಕೊಳ್ಳುವ ಪಾತ್ರಗಳು ಕೆಲವು ಕಥನ ಗೀತೆಗಳಲ್ಲಿವೆ. ಹೀಗೆ ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ಮೂಡಿಬಂದಿರುವ ಕಥನ ಗೀತೆಗಳು ಜನಪದ ಬದುಕಿನ ಹಲವು ಮುಖಗಳನ್ನು ಪರಿಚಯಿಸುತ್ತವೆ. ಆದ್ದರಿಂದ ಈ ಹಲವು ಮುಖಗಳ ಜಾಡು ಹಿಡಿದು ಮನುಷ್ಯನ ವ್ಯಕ್ತಿತ್ವವನ್ನು ಪರಿಚಯಿಸುವ ಉದ್ದೇಶವನ್ನು ಈ ಪ್ರಬಂಧದಲ್ಲಿ ಮಾಡಿರುತ್ತೇನೆ.

ಜನಪದ ಸಾಹಿತ್ಯ ಮತ್ತು ಮಹಿಳೆ

ಸಾಹಿತ್ಯ ಮನುಷ್ಯ ಜೀವನದ ಉತ್ಪನ್ನ. ಲಲಿತ ಕಲೆಗಳಲ್ಲಿ ಅತ್ಯಂತ ಪರಿಣಾಮಕಾರಿಯಾದುದು. ಮನುಷ್ಯ ತನ್ನ ಭಾವನೆಗಳನ್ನು ವಿಚಾರಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವ ಮುಖ್ಯ ಮಾಧ್ಯಮ. ಅಂತೆಯೇ ಮನುಷ್ಯನ ಅನುಭವಗಳನ್ನು ಕಲಾತ್ಮಕ ಅಭಿವ್ಯಕ್ತಿಯಾಗಿಸಿದ್ದು ಶಿಷ್ಟಸಾಹಿತ್ಯವಾದರೆ, ಯಾವ ಸಾಹಿತ್ಯವನ್ನು ಉದ್ದೇಶಪೂರ್ವಕವಾಗಿ ಕಲಾತ್ಮಕಗೊಳಿಸದೆ ಸಹಜಾಭಿವ್ಯಕ್ತಿಗೊಳ್ಳುವುದೋ ಅದು ಜನಪದ ಸಾಹಿತ್ಯವೆನಿಸಿಕೊಳ್ಳುತ್ತದೆ.

ಭಾರತದಂತಹ ದೇಶದಲ್ಲಿ ವೇದೋಪನಿಷತ್ತುಗಳಿಂದ ಹಿಡಿದು ಪ್ರಸ್ತುತ ಅಭಿಜಾತವೆನಿಸಿದ ಸಾಹಿತ್ಯದವರೆಗಿನ ಮನುಕುಲದ ಚಿತ್ರಣ, ಅಂತೆಯೇ ಅನಕ್ಷರಸ್ಥ ಆದಿವಾಸಿ ಅಲೆಮಾರಿ ಮತ್ತು ಬುಡಕಟ್ಟು ಸಮಾಜಗಳು ತಲೆಮಾರುಗಳಿಂದ ಮೌಖಿಕವಾಗಿ ಪರಂಪರೆಯಲ್ಲಿ ಉಳಿದುಬಂದ ಜನಪದ ಸಾಹಿತ್ಯದಲ್ಲಿ ದಾಖಲುಗೊಂಡ ಜೀವನ ವಿಧಾನಕ್ಕೂ ಪರಸ್ಪರ ವಿಭಿನ್ನ ಸ್ವರೂಪಗಳನ್ನು ಗುರುತಿಸಬಹುದು. ಇಲ್ಲಿ ಮುಖ್ಯವಾಗಿ ಪುರುಷ ಪ್ರಧಾನ ವ್ಯವಸ್ಥೆ ಮತ್ತು ಮಾತೃ ಪ್ರಧಾನ ಸಮಾಜ ವ್ಯವಸ್ಥೆಗಳ ಮೂಲ ಆಶಯಗಳನ್ನು ಗುರುತಿಸುವುದೂ ಸಾಧ್ಯ.

ಈ ನೆಲೆಯಲ್ಲಿಯೇ ಭಾರತೀಯ ಬಹುತ್ವದ ಪರಿಕಲ್ಪನೆಗಳ ಸೂಕ್ಷ್ಮತೆಗಳನ್ನು ಗಮನಿಸಬೇಕು. ಇತಿಹಾಸದ ಕಾಲ ಗರ್ಭದಲ್ಲಿ ಆರ್ಯ ಸಮಾಜದ ಪಿತೃಪ್ರಧಾನ ಸಂಸ್ಕೃತಿ ಭಾರತದ ಮೂಲನಿವಾಸಿಗಳೆನಿಸಿದ ದ್ರಾವಿಡ ಸಂಸ್ಕೃತಿಯ ಮಾತೃನೆಲೆಯ ಸಾಮಾಜಿಕ ನೆಲೆಗಳು ನಿಧಾನಕ್ಕೆ ಮರೆಯಾದವು. ಶ್ರೇಷ್ಠ ಕನಿಷ್ಟವೆಂಬ ಭಾವನೆಯನ್ನು ಪ್ರಜ್ಞಾಪೂರ್ವಕವಾಗಿ ಸಮಾಜದಲ್ಲಿ ಬಿತ್ತಿ ಅದನ್ನು ಸಾಮಾಜೀಕರಣಗೊಳಿಸಲಾಯಿತು. ಮಾತ್ರವಲ್ಲದೆ ಪ್ರಜ್ಞಾಪೂರ್ವಕವಾಗಿ ಬೌದ್ಧಿಕ ದಾರಿದ್ರ್ಯತನವನ್ನು ವೈದಿಕೇತರ ಜನ-ಜಾತಿಗಳಲ್ಲಿ ಮೂಡಿಸಿರುವುದು ಭಾರತ ಇತಿಹಾಸದ ದುರಂತವೆನ್ನಬೇಕು. ಈ ಬಗೆಯ ವಾತಾವರಣದಲ್ಲಿ ಧರ್ಮ, ದೇವರು, ವಿಧಿ, ಆಚರಣೆ, ನಿಷೇಧಗಳೆಂಬ ಭಾವನಾತ್ಮಕ ಸಂಗತಿಗಳು ಅನಕ್ಷರಸ್ಥ ಜನಪದರಲ್ಲಿ ಮೂಡಿಸಿದ ಭಾವನೆಗಳೇ ಅವರ ಕಥೆ, ಗಾದೆ, ಲಾವಣಿ, ಗೀತೆ, ಕಾವ್ಯಗಳಲ್ಲಿ

ಗುರುತಿಸಬಹುದು. ಅಂತೆಯೇ ವೈದಿಕ ಧರ್ಮದ ಕಟ್ಟುಪಾಡುಗಳು ವಿಧಿ-ನಿಷೇಧಗಳು ಜಾತಿ-ಮತಧರ್ಮಗಳ ಕಲ್ಪನೆ ಪರಸ್ಪರ ಕೊಡುಕೊಳ್ಳುವ ಸಂಬಂಧ ನಡೆದಿದೆ. ಮುಂದುವರೆದು ವೈದಿಕ ಮತಾಚರಣೆಯ ಸಂಗತಿಗಳು ತೀವ್ರವಾಗಿ ಜನಪದರ ಮೇಲೆ ಪ್ರಭಾವ ಬೀರಿವೆ. ಅಂತಹ ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿದ್ದೆ ಯಜಮಾನ ಸಂಸ್ಕೃತಿ. ಈ ಯಜಮಾನ ಸಂಸ್ಕೃತಿಯ ಜೊತೆಗೆ ಇಲ್ಲದ ಪ್ರತಿರೋಧದ ನೆಲೆಯಾಗಿಯೂ ಜನಪದ ಅಭಿವ್ಯಕ್ತಿ ದಾಖಲುಗೊಳ್ಳುತ್ತದೆ.

ಮಾನವ ಲೋಕದ ಶೇಕಡ ಅರ್ಧ ಭಾಗವನ್ನು ವ್ಯಾಪಿಸಿಕೊಂಡಿರುವ ಹೆಣ್ಣು ಇಡೀ ಜಗತ್ತಿನಲ್ಲಿ ಉಳಿದರ್ಧ ಲೋಕದ ಗಂಡಿನಂತೆ ಸಮಾನತೆಯನ್ನು ಪಡೆಯಲಾಗಿಲ್ಲ. ಅದರಲ್ಲೂ ಭಾರತದಲ್ಲಿ ವರ್ಣ ಪ್ರಾಧಾನ್ಯತೆ ಆಚರಣೆಯಲ್ಲಿರುವ ಬಹು ಸಮಜಾದಲ್ಲಿ ಹೆಣ್ಣಿನ ಜೀವನ ಅತ್ಯಂತ ಶೋಚನೀಯವಾಗಿಯೇ ಇದೆ. ಶ್ರೇಷ್ಠ ಎನ್ನಿಸಿಕೊಂಡ ಬ್ರಾಹ್ಮಣ ಸಮಾಜದ ಹೆಣ್ಣು ಕೂಡ ಪುರುಷ ಪ್ರಧಾನ ಸಮಾಜದ ತೊತ್ತಳ ತುಳಿತಕ್ಕೆ ಒಳಗಾಗಿದ್ದಾಳೆ. ಕೆಳ ಮಧ್ಯಮವರ್ಗದ ಜಾತಿ ಸಮಾಜದಲ್ಲಂತೂ ವಿಪರೀತವಾದ ಶೋಷಣೆ ನಡೆಯುತ್ತಿದೆ. ಈ ಬಗೆಯ ಹೆಣ್ಣಿನ ಚಿತ್ರಣಗಳು ಮೂಡಿ ಬಂದ ಕೆಲ ಸಂಗತಿಗಳನ್ನು ಗುರುತಿಸಿಕೊಳ್ಳಬಹುದು.

ಈ ನೆಲದ ಮೂಲಸಂಸ್ಕೃತಿಯಾಗಿ ಹರಿದದ್ದು ದ್ರಾವಿಡ ಸಂಸ್ಕೃತಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿಗೆ ಹೆಚ್ಚಿಗೆ ಸ್ಥಾನಮಾನವಿತ್ತು. ಕಲಾನಂತರದಲ್ಲಿ ಆರ್ಯರ ದಾಳಿ ಹಾಗೂ ಅವರ ಸಂಸ್ಕೃತಿಯ ಪ್ರಭಾವದಲ್ಲಿ ಹೆಣ್ಣು ಅಸ್ಪೃಶ್ಯಳಾದಳು. ಇದಕ್ಕೆ ಸಾಕಷ್ಟು ನಿದರ್ಶನಗಳಿವೆ.

ನಸ್ತ್ರೀ ಸ್ವಾತಂತ್ರ್ಯಮರ್ಹತಿ (ಮನು)
ಅವಳು ಎಲ್ಲ ಕೆಡುಕಿನ ಬೇರು (ಮಹಾಭಾರತ)
ಅವಳು ಚಂಚಲೆ, ಖಡ್ಗದಂತೆ ಹರಿತವಾದವಳು
ಬಿರುಗಾಳಿಯಂತೆ ಅಸ್ಥಿರಳು (ರಾಮಾಯಣ)
ಸ್ತ್ರೀಯು ಪುರುಷನಿಗೆ ಏನನ್ನೂ ಕಲಿಸಲಾರಳು.
ಜಗತ್ತಿನಲ್ಲಿ ಪಾಪವನ್ನು ತಂದವಳೇ ಹೆಣ್ಣು
ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ
ಅವರ ಮುಕ್ತಿಗೆ ಉಪಾಯವೇ ಇಲ್ಲ. [7] (ಸೇಂಟ್ ಪಾಲ್)

[illegible]

ಹೀಗೆ ಹೆಣ್ಣು ಕಾಲದಿಂದ ಕಾಲಕ್ಕೆ ಪುರುಷ ಪ್ರಧಾನ ಸಮಾಜದಲ್ಲಿ ಕೀಳಾಗಿ, ಅಸ್ಪೃಶ್ಯಳಾಗಿ, ಮಹಾಸತಿಯಾಗಿ, ದೇವತೆಯಾಗಿ, ಭೋಗದ ವಸ್ತುವಾಗಿ, ಒಡವೆಯಾಗಿ, ಬಸವಿಯಾಗಿ, ದೇವದಾಸಿಯಾಗಿ, ಸೂಳೆಯಾಗಿ ಶೋಷಣೆಗೊಳಗಾಗಿದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಇಷ್ಟೆಲ್ಲಾ ಶೋಷಣೆಯ ನಡುವೆಯೂ ಹೆಣ್ಣು ಶಿಷ್ಟಸಾಹಿತ್ಯಕ್ಕಿಂತ ಜನಪದ ಸಾಹಿತ್ಯದಲ್ಲಿ ಹೆಚ್ಚು ಕ್ರಿಯಾಶೀಲಳಾಗಿ ಕಾಣುತ್ತಾಳೆ. ಅಲ್ಲದೆ ಪ್ರಗತಿಪರ ಆಲೋಚನೆಗಳಿಗೆ ಕಾರಣಳಾಗಿದ್ದಾಳೆ. ಶಿಷ್ಟಸಾಹಿತ್ಯ ಪುರುಷರಿಂದ ನಿರ್ಮಿತವಾದದ್ದಾರೆ, ಜನಪದ ಸಾಹಿತ್ಯ ಹೆಚ್ಚಾಗಿ ಹೆಣ್ಣಿನಿಂದಲೇ ನಿರ್ಮಿತವಾದದ್ದಾಗಿ ಕಂಡು ಬರುತ್ತದೆ. 'ಕವಿರಾಜ ಮಾರ್ಗ ' ಕಾರ ಪ್ರಸ್ತಾಪಿಸಿದಂತೆ ಓವನಿಗೆ, ಒನಕೆ ವಾಡುಗಳೆಲ್ಲ ಹೆಂಗಸರ ಹಾಡುಗಳೇ ಆಗಿವೆ.

ಜನಪದ ಸಾಹಿತ್ಯ ಕಂಡಂತೆ ಹೆಣ್ಣು ತೌರಿನ ಹಾಗೂ ಗಂಡನ ಮನೆಯನ್ನು ಬೆಳಗುವ ದೀಪವಾಗಬೇಕು. ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಕೀರ್ತಿ ತರುವಂತಳಾಗಿರಬೇಕು. ಕುಟುಂಬದಲ್ಲಿ ಹೆಣ್ಣು ಶೀಲವಂತೆಯಾಗಿ, ಗುಣವಂತೆಯಾಗಿ, ನೀತಿವಂತೆಯಾಗಿ, ಸಹನಾಮಯಿಯಾಗಿ, ಗಂಡನ ಮನೆಯವರೆಲ್ಲರ ಸೇವೆಗೆ ಸದಾ ಸಿದ್ಧಳಾಗಿರಬೇಕು. ಅದೇ ಹೆಣ್ಣಿನ ಧರ್ಮ ಎಂದು ಧರ್ಮದ ಹೆಸರಿನಲ್ಲಿ ಬಂಧಿಸಿ ಬಾಯಿ ಕಟ್ಟಿಸಿದೆ.

ಹೆಣ್ಣಿಗೆ ಗಂಡನ ಮನೆಯಲ್ಲಿ ಯಾವ ಸ್ವಾತಂತ್ರ್ಯವೂ ಇಲ್ಲ. ಗಂಡು ತನಗೆ ಬೇಕಾದಂತೆ ಸ್ವತಂತ್ರನಾಗಿದ್ದು ಹೆಣ್ಣನ್ನು ಹಲವು ರೀತಿಯ ಬಂಧನಗಳಿಗೆ ಒಳಪಡಿಸುತ್ತಾನೆ. ಹೆಣ್ಣು ತವರು ಮನೆಯಿಂದಲೂ ಹಕ್ಕನ್ನು ಕಳೆದುಕೊಳ್ಳುತ್ತಾಳೆ. 'ಹೆಣ್ಣು ಹುಟ್ಟಿದ ಕೂಡಲೇ ಪರರ ಮನೆಯ ಸಿರಿದೇವಿ' ಯಾಗುತ್ತಾಳೆ. ಮದುವೆ ಮಾಡಿಕೊಟ್ಟ ಕೂಡಲೇ ತವರುಮನೆಗೆ 'ಎರವು' ಆಗುತ್ತಾಳೆ.[೨] ಒಟ್ಟಿನಲ್ಲಿ ಹೆಣ್ಣಾದವಳಿಗೆ ತವರಿನವರೂ ಬುದ್ಧಿವಾದ ಹೇಳುವವರೇ, ಗಂಡನ ಮನೆಯಲ್ಲೂ ಬುದ್ಧಿ ಹೇಳುವವರೆ. ಗಂಡನ ಮನೆ ಹಾಗೂ ತೌರಿನ ಮನೆ ಎರಡು ಕಡೆಯಿಂದ ಶೋಷಣೆಗೊಳಗಾಗಿದ್ದಾಳೆ. ಹೆಣ್ಣಿನ ವೈಯಕ್ತಿಕ ನೋವು ನಲಿವುಗಳಿಗೆ ಸ್ಪಂದಿಸುವವರೇ ಇಲ್ಲ. ಒತ್ತಾಯದ ಹಿನ್ನಲೆಯಲ್ಲಿ ಅಪಮೌಲ್ಯವನ್ನು ಮೌಲ್ಯವೆನ್ನುತ್ತ ಹೆಣ್ಣನ್ನು ಹುಟ್ಟುತ್ತಲೇ ಅಸ್ಪೃಶ್ಯಳನ್ನಾಗಿ ಮಾಡಿ ಇಲ್ಲದ ನಿರ್ಬಂಧಗಳನ್ನು ಹೇರಿದೆ. ಹೆಣ್ಣಿಗೆ

ಒಂದು ನೀತಿ, ಗಂಡಿಗೆ ಒಂದು ನೀತಿ. ಇದು ಪುರುಷ ಪ್ರಧಾನ ಸಮಾಜ ಎಲ್ಲಿಂದ ಪ್ರಾರಂಭವಾಯಿತೋ ಅಂದಿನಿಂದಲೂ ಈ ತಾರತಮ್ಯ ಮುಂದುವರೆದುಕೊಂಡು ಬಂದಿದೆ ಮಗ ಎಲ್ಲೇ ಹೋದರೂ, ಯಾವಾಗ ಬಂದರೂ ಪ್ರಶ್ನಿಸುವುದಿಲ್ಲ. ಎಲ್ಲಿ ನಿಂತರೂ ಎಲ್ಲೇ ಕುಂತರೂ ಕೇಳುವವರಿಲ್ಲ. ಆದೇ ಹೆಣ್ಣಿಗೆಗಾದರೆ ಎಲ್ಲದಕ್ಕೂ ನಿಷೇಧ, ಮನೆಯ ಮುಂದಾಗಲೀ, ಬಾಗಿಲಲ್ಲಿಯಾಗಲೀ ನಿಲ್ಲುವಂತಿಲ್ಲ. ಕಂಡ ಕಂಡಲ್ಲಿ ನಗುವಂತಿಲ್ಲ. ''ಮಲ್ಲಿಗೆ ಹೂವೆ ಇಲ್ಯಾಕೆ ನಿಂತಿದ್ದೆ ಎಲ್ಲಾರ ಕಣ್ಣು ನಿನ ಮ್ಯಾಲ, ದೃಷ್ಟಿ ಸೋಕ್ಯಾವು ಒಳಗೋಗ್ಗ'' ಎಂದು ತಾಯಿಯ ಕಟ್ಟುನಿಟ್ಟಿನ ಉಪದೇಶ ಪ್ರಾರಂಭವಾಗುತ್ತದೆ.

ಗುಂಡ ಮಾರಿಯ ಹೆಣ್ಣ ಚಂಡು ಹೂವಿನ ಬಣ್ಣ
ಕಂಡ ಕಂಡಲ್ಲಿ ನಗಬ್ಯಾಡ, ಎಲೆ ಮಗಳ
ಬರಬಾರದಪವಾದ ಬರತಾವ ೩

ಕನ್ನಡಿ ಕೈತಪ್ಪಿ ಹನ್ನೆರಡು ಚೂರಾಗಿ
ಹೆಣ್ಣಿನ ಮನವು ಎರಡಾಗಿ : ಬಾಳಿದರ
ಹೆಣ್ಣಾಗಿ ಹುಟ್ಟಿ ಫಲವೇನ ೪

ಇವು ತಾಯಿಯಿಂದ ಬಂದ ಉಪದೇಶಗಳಾದರೆ ಇನ್ನು ಅಣ್ಣನ ಉಪದೇಶ

ಬಾಳ್ವೇದಾಗಿದ್ದರ ಬಾತಂಗಿ ಎಂಬುವರು
ಬಾಳ್ವೇವ ಗೆಟ್ಟು ಮತಿಗೆಟ್ಟು : ತಿರುಗಿದರ
ಒಡಹುಟ್ಟಿದಣ್ಣ ದುಸುಮಾನ ೫

ಹೀಗೆ ಒಬ್ಬರಾದ ಮೇಲೆ ಒಬ್ಬರು ಒಂದಾದ ಮೇಲೊಂದು ಉಪದೇಶ ಮಾಡುತ್ತಿದ್ದರೆ ಆ ಎಳೆ ವಯಸ್ಸಿನ ಹೆಣ್ಣುಗಳು 'ಸೀರೆ ಉಡಲು ಅರಿಯದವು' ಇನ್ನೂ ಋತುಮತಿಯಾಗದ, ಬುದ್ಧಿ ಬೆಳವಣಿಗೆಯಾಗದ, ಆಟವಾಡಿಕೊಂಡಿರಬೇಕಾದ ಮಕ್ಕಳಿಗೆ ಮದುವೆ ಮಾಡಿ ಇಂಥ ಬುದ್ಧಿಮಾತುಗಳನ್ನು ಕಟ್ಟುಕಟ್ಟಳೆಗಳನ್ನು ನೀತಿ ನಿಯಮಗಳನ್ನು ಹೇರಿದರೆ ಇನ್ನು ಗಂಡನ ಮನೆಗೆ ಕಾಲಿಡದ ಈ ಪುಟ್ಟಬಾಲೆಯ ಪರಿಸ್ಥಿತಿ ಏನಾಗಿರಬೇಡ. ಹೆಣ್ಣು ಎಂದಾಕ್ಷಣ ನಿರ್ಲಕ್ಷ್ಯ ಮಾಡಿ ಹೆಣ್ಣು ಮನೆಯಲ್ಲಿದ್ದು ಕಸ ಮುಸುರೆ ಮಾಡುವವಳು ಮಾತ್ರ ಎಲ್ಲರ ಸೇವೆಗೆಂದೇ ಹುಟ್ಟಿದವಳು ಎನ್ನುವ ರೀತಿಯಲ್ಲಿ ಕಾಣುವುದು ಇಂಥ ವಿಚಾರಗಳನ್ನು ಪುಟ್ಟ ಮನಸ್ಸಿನಲ್ಲಿ ತುಂಬುವುದರಿಂದಲೇ ಹೆಣ್ಣಿಗೆ

ತಾನು ಹೆಣ್ಣಾಗಿ ಹುಟ್ಟಿದ್ದೇ ತಪ್ಪು ಎನ್ನುವ ಭಾವನೆ ಮೊಳಕೆಯೊಡೆಯುತ್ತದೆ. ಕನಸು ಕಾಣುವ ಮನಸು ಮುರುಟಿ ಕಮರಿ ಹೋಗುತ್ತದೆ. ಗಂಡನ ಮನೆಗೆ ಹೋಗಿ ಪಡುವ ಕಷ್ಟದ ಅರಿವಿಗಿಂತ ಎಲ್ಲಿ ತನ್ನ ಮನೆತನಕ್ಕೆ ಕುಂದು ತರುತ್ತಾಳೋ ಎಂಬ ಆತಂಕದಿಂದ ಮಗಳಿಗೆ ಎಲ್ಲಾ ರೀತಿಯ ಬುದ್ಧಿವಾದವನ್ನು ಹೇಳುತ್ತಾಳೆ. ಮಗಳ ಕಷ್ಟಕ್ಕಿಂತ ತನ್ನ ಮನೆತನದ ಹೆಸರು ಉಳಿಸವ್ವ ಎಂದು ದೈನ್ಯಳಾಗಿ ಬೇಡಿಕೊಂಡಂತೆ ಆಕೆಯ ಕಣ್ಣೀರು ಹರಿಯುತ್ತದೆ. ಬಹುಶಃ ಎಲ್ಲಾ ತಾಯಂದಿರ ಅಪೇಕ್ಷೆಯೂ ಇದೇ ಆಗಿರುತ್ತದೆಯೇನೋ ಯಾಕೆಂದರೆ ಮಗಳು ಸರಿಯಾಗಿ ಸಂಸಾರ ಮಾಡಿದಿದ್ದರೆ 'ನೂಲಿನಂತೆ ಸೀರೆ ತಾಯಿಯಂತೆ ಮಗಳು' ಎನ್ನುವ ಅಪವಾದ ತಾಯಿಗೆ ಬರುತ್ತದೆ ಅದಕ್ಕಾಗಿ ಜನಪದ ಸ್ತ್ರೀಯರಿಗೆ ಇಂಥ ಮೌಲ್ಯಗಳೇ ಹೆಚ್ಚಾಗಿರುತ್ತವೆ. ಹೀಗಾಗಿ ಹೆಣ್ಣು ಉದ್ದಕ್ಕೂ ಕಷ್ಟ ಪರಂಪರೆಯನ್ನು ಅನುಸರಿಸುತ್ತಾಳೆ.

ತವರು ಮನೆಯಿಂದ ಗಂಡನ ಮನೆಗೆ ಹೋಗುವ ಮುದ್ದಿನ ಮಗಳಿಗೆ ತಾಯಿ ಹೇಳುವ ಬುದ್ಧಿಮಾತುಗಳಿವು. ' ಅತ್ತಿಗುತ್ತರವ ಕೊಡಬ್ಯಾಡ ' ಎಂದು ಹೇಳುತ್ತಾ -

ಅತ್ತೆ ಮನೆಗೆ ಹೋಗುವಾಗ

> ಅತ್ತೆಯಮನಿಯಾಗ ಮುತ್ತಾಗಿ ಇರಬೇಕ
> ಹೊತ್ತಾಗಿ ನೀಡಿದರ ಉಣಬೇಕ : ತವರವ
> ಉತ್ತಮರ ಹೆಸರ ತರಬೇಕು [೬]
>
> ಅತ್ತಿ ಉತ್ತಮಳನ್ನು ಮಾವ ಮಲ್ಲಿಗಿ ಅನ್ನು
> ಮುತ್ತಿನ ಸರವೆನ್ನು ಪತಿಯ : ನನ ಮಗಳೆ ಮಾತಿನಾಗುಂಟು ಸರುವೆಲ್ಲ.
> ಅತ್ತಿಯ ಮನಿಯಾಗ ಮುತ್ತಿನ್ಹಂಗಿರಬೇಕ
> ಹೊತ್ತಾಗಿ ನೀಡಿದರ ಉಣಬೇಕ : ತವರವರ
> ಉತ್ತಮರ ಹೆಸರು ತರಬೇಕು [೭]

ಮಗಳಿಂದ ತವರಿನ ಹೆಸರು ಉಳಿಯಬೇಕೆಂದು ಅಪೇಕ್ಷಿಸುತ್ತಾಳೆ.

ಗಂಡನ ಮನೆಯೇ ದೇವರ ಗುಡಿ, ಗಂಡನೇ ದೇವರೆಂದು ನಂಬಿ ತಾಯಿ ಹೇಳಿದ್ದನ್ನೇ ಅನುಸರಿಸಿ ಗಂಡನ ಮನೆಯಲ್ಲಿ ಬಾಳುವೆ ನಡೆಸುವ ಹೆಣ್ಣಿಗೆ ಅಲ್ಲಿಯ ವಾತಾವರಣ ದಿಗಿಲುಹುಟ್ಟಿಸುತ್ತದೆ. ಯಾವುದಕ್ಕೂ ಎದುರಾಡದೆ ಬಂದದ್ದನ್ನೆಲ್ಲಾ ಮೌನವಾಗಿ ಸಹಿಸಿಕೊಳ್ಳುವ, ಪರರ ಸುಖಸಂತೋಷಕ್ಕೆ ತನ್ನ

ಸುಖವನ್ನು ತ್ಯಾಗಮಾಡುವ ಸದ್ಗೃಹಿಣಿಯಾಗಿ ಬಾಳುತ್ತಾಳೆ. ಕುಟುಂಬದ ಉದ್ಧಾರಕ್ಕಾಗಿ, ಸಮಾಜದ ಉದ್ಧಾರಕ್ಕಾಗಿ ತಾನು ಗರತಿಯಾಗಿ ಬಾಳಬೇಕೆಂದು ತನ್ನ ಗಂಡ, ಮಕ್ಕಳು, ನೆರೆಹೊರೆ, ಹೊಲಗದ್ದೆ ಇವುಗಳೇ ಸಕಲ ಸೌಭಾಗ್ಯಳೆಂದು ತಿಳಿದು ಒಂದು ಯಂತ್ರದಂತೆ ದಿನವಿಡೀ ಹಗಲು ರಾತ್ರಿಯನ್ನದೆ ದುಡಿಯುತ್ತಾಳೆ. ಗಂಡನ ಶ್ರೇಯಸ್ಸಿಗಾಗಿ ದೇವರಲ್ಲಿ ಪ್ರಾರ್ಥಿಸುತ್ತಾಳೆ, ಕಸ, ಮುಸರೆ, ಹಾಲು, ಹೈನು, ಅಡುಗೆ, ಪಾತ್ರೆ, ಬಟ್ಟೆಬರೆ ಆಳು, ಕಾಳು ಎಲ್ಲಾ ಕೆಲಸಗಳನ್ನು ನಿಭಾಯಿಸುತ್ತಾಳೆ.. ಇಷ್ಟೆಲ್ಲಾ ಕೆಲಸಗಳನ್ನು ನಿಬಾಯಿಸುವ ಈಕೆ ಅತ್ತೆಮಾವಂದಿರಿಗೆ ಅಂಜಬೇಕು. ಅತ್ತಿಗೆ ನಾದಿನಿಯರನ್ನು ಸಂತೋಷಪಡಿಸಬೇಕು ನೆರೆಹೊರೆಯವರಿಗೆ ಹೊಂದಿಕೊಳ್ಳಬೇಕು. ಹೀಗಿದ್ದೂ ಕ್ಷುಲ್ಲಕ ವಿಷಯಕ್ಕೆ ಕಿಡಿಕಿಡಿ ಮಾಡುವ ಅತ್ತೆ ತಾಯಿಯ ಕೈಗೊಂಬೆಯಾಗಿರುವ ಗಂಡ, ಹುಲಿಯಂಥ ಯಾವ ಇವರನ್ನೆಲ್ಲ ಕಂಡು ಗಂಡನ ಮನೆಯವ್ವ 'ಗುಂಡು ಗಾರಿಯ ಮುಳ್ಳು ಕುಂಡರಗೋಡರ ನಿಲಗೊಡರ'

ಹುಚ್ಚನಂತ ಗಂಡ ಹುಲಿಯಂತ ಮೈದೂನ
ದತ್ತೂರೆವ್ವ ನನ್ನ ನೆಗಿಯಾಣಿ : ಕೈಯಾಗ
ಹ್ಯಾಂಗೀಸಿ ಬರಲೇ ಹಡೆದವ್ವ[೯]
ಸುಡುವ ಬೆಂಕೀಗೆ ಎಣ್ಣೆಯ ಕೊಡನೇಯ್ದು
ಕುಂಬಳ ಕಾಯೋಯ್ದು ಕುಡಗೋಲಿಗೆ ಕೊಟ್ಟಂತೆ
ಎಂಥವರಿಗೆ ಕೊಟ್ಟೆ ಹಡದವ್ವ[೯]

ಈ ಬಗೆಯಾಗಿ ಕೊರಗಿ ಸೋತು ಸುಣ್ಣವಾಗುತ್ತಾಳೆ. ಅತ್ತೆ ಎಂದೂ ತಾಯಿಯಾಗಲಾರಳು ಎಂಬ ಮಾತು ದಿಟವಾಗುತ್ತದೆ. ಪರರ ಮನೆಯ ಹೆಣ್ಣು ತಮ್ಮ ಸೇವೆಗೆಂದೇ ಬಂದವಳೆಂದು ತಮ್ಮ ಅಧಿಕಾರವನ್ನು ಅಸಹಾಯಕಳಾದ ಸೊಸೆಯ ಮೇಲೆ ತೋರಿಸುತ್ತಾಳೆ. ಅತ್ತೆ, ಮಾವ, ಭಾವ, ಗಂಡ, ನಾದಿನಿ ಹೀಗೆ. ಎಲ್ಲರೂ ಒಂದಲ್ಲ ಒಂದು ರೀತಿಯಿಂದ ತಮ್ಮ ಅಧಿಕಾರವನ್ನು ಚಲಾಯಿಸುವವರೇ ಆಗಿದ್ದಾರೆ. ತಾಯಿಯ ಹೇಳಿದ ಬುದ್ಧಿಮಾತನ್ನೇ ನಂಬಿ ತೌರಮನೆಗೆ ಹೆಸರು ತರಲು ಬಂದ ಕಷ್ಟವನ್ನೆಲ್ಲಾ ಸಹಿಸಿಕೊಳ್ಳುತ್ತಾಳೆ. ಆದರೂ ಗಂಡನ ಮನೆಯವರ ಇಂಥ ವರ್ತನೆಗಳು ಹಿಡಸದಾದಾಗ ಸಿಡಿದೆದ್ದು.

ಅತ್ತಿಯ ಮನಿಯಾಗ ಅರವತ್ತು ಗಂಗಾಳ
ಬೆಳಗತೇನತ್ತಿ ಬೈ ಬ್ಯಾಡ : ತವರವರು
ಸರ ಮುತ್ತು ಮಾಡಿ ಸಲುವ್ಯಾರ[೧೦]

ಹೀಗೆಂದು ತನ್ನ ನೋವನ್ನು ತೋಡಿಕೊಂಡರೆ ಸರಮತ್ತುಗಳನ್ನೊಯ್ದು ಸಾಲ ಬೂದಿಗೆ ಹಾಕ, ಹೊರಬಾರ ಹೆಂಡಿ ಹೆಡಗೀರು ಎಂದು ದರ್ಪ ತೋರಿದ ಅತ್ತಿಗೆ

ಹೆಂಡ್ಡೆಡಗಿ ಹೊರಲಾಕ ಬಡವರ ಮಗಳೇನ
ಮುಂದಿನೂರಾಗ ತವರವರು : ಕೇಳಿದರ
ಮುಂಜಾನೆ ತೊತ್ತು ಖಳವ್ಯಾರ [೧೧]

ಎಂದು ಧೈರ್ಯದಿಮದ ಉತ್ತರ ಕೊಡುತ್ತಾಳೆ. ಮದುವೆಯಂಬ ಪವಿತ್ರ ಬಂಧನ ಹೆಣ್ಣಿನ ಸ್ವಾತಂತ್ರ್ಯವನ್ನು ಬಂಧಿಸಿಡುವ ಬಂಧನವಾಗಿದೆ. ಕೈಲಾಸದಂಥ ತವರನ್ನು ಗಂಗಾದೇವಿಯಂಥ ತಾಯಿಯನ್ನು ಬಿಟ್ಟು ಗಂಡನ ಮನೆಯ 'ಗಂಡು ಗಾರೆಯ ಮುಳ್ಳಿನಲ್ಲಿ' ಬಾಳುವಂತೆ ಮಾಡುತ್ತದೆ. ಈ 'ಮಹಿಳೆಯ ಪಾಲಿಗೆ ಮದುವೆ ಭಯಾನಕವೇ ಆಗಿದೆ'. [೧೨ (ಉದ್ಧೃತ)]

ಗಂಡನೇ ದೇವರೆಂದು ನಂಬಿ ಬಂದ ಹೆಣ್ಣಿಗೆ ಸುಖ ದುಃಖದಲ್ಲಿ ಪಾಲುದಾರನಾಗಬೇಕಾದ ಗಂಡನೇ ಸ್ವಾರ್ಥಿಯಾಗಿ ತನ್ನ ಸುಖವೇ ಹೆಚ್ಚೆಂದು ಭಾವಿಸಿ ಹೆಂಡತಿಯನ್ನು ತನ್ನ ಮನೆಯ ದಾಸಿಯಂತೆ ನಡೆಸಿಕೊಳ್ಳುತ್ತಾನೆ ಇದಕ್ಕಿಂತ ಕ್ರೂರವಾದ ಶಿಕ್ಷೆ ಹೆಣ್ಣಿಗೆ ಬೇಕೆಂದಿಲ್ಲ. ಆದರೂ ವಿನಮ್ರಳಾಗಿ ಬೇಡುತ್ತಾಳೆ.

ಸಿಟ್ಟು ಮಾಡುವಿರೇನು ಸಿರಯರು ನನ ಮ್ಯಾಲೆ
ಕಟ್ಟಿಕೊ ಬ್ಯಾಡ್ರಿ ವೈಮನಸ : ಹಡೆದವರು
ಕೊಟ್ಟು ಹೋಗ್ಯಾರ ನಿಮ್ಮನಿಗೆ [೧೩]

ಗಂಡನ ಹಿಂಸೆ ನಿಲ್ಲದೆ ಮತ್ತಷ್ಟು ಹೆಚ್ಚಿದಾಗ

ಉಂಡುಟ್ಟರು ಸೇರ ಮಂಡೆ ಬಾಚರು ಸೇರ
ಗಂಡನಲ್ಲ ಕಾಣೋದುನ್ಯಾದ : ಹೊಟ್ಟೆಲೆ
ಕೆಂಡದಂತೆ ಮಾಡೋ ರಘುರಾಮ [೧೪]

ಎಂದು ಸಿಟ್ಟಿನಿಂದ ಹರಿಹಾಯುತ್ತಾಳೆ. ಅಷ್ಟೇ ಅಲ್ಲ ಕಾಚಿನದರಷ್ಟು, ಅಡಕೀಯ ಒಗರೆಷ್ಟು, ಸೇರಬಲ್ಲೊಳ್ಳಿ ಸೆದಿಯಷ್ಟು ನನಗೂಡ ಮಾತಾಡದವರ ಬಿಗುವೆಷ್ಟು, ಸರಿಬಾರದವರ ಒಗೆತನ ಮಾಡಿದರ ಇರಬಲ್ಲೇನು ನಾ ಬದುಕಿ ? ಎಂದು ದುಃಖಿಸಿ ತಾಯಿಯನ್ನು ನೆನೆದು ಹಂಬಿಲಿಸುತ್ತಾಳೆ.

ತಾಯಿ ಬಂದಾಗ ತನ್ನ ದುಃಖವನ್ನು ತೋಡಿಕೊಳ್ಳುತ್ತಾಳೆ. ಆದರೆ ಹೆತ್ತವರಿಗೆ ಮನೆ ಮಗಳ ಕಷ್ಟಕ್ಕಿಂತ ಮನೆಯ ಮನೆತನದ ಮರ್ಯಾದೆಯೇ ಮುಖ್ಯವಾಗಿ ಕಾಣುತ್ತದೆ. ಹೀಗಾಗಿ ತಾಯಿ ಮಗಳಿಗೆ ಬುದ್ದಿಮಾತನ್ನು ಅರುಹುತ್ತಾಳೆ. ಪಾಂಡವರಂಥವರು ಕಲ್ಲ ಕಡಬ ಮಾಡಿ ಮುಳ್ಳು ಸಾಂವಿಗಿ ಮಾಡಿ ತಿಂದು, ವನವಾಸ ಕಳೆದದ್ದನ್ನು ನೆನಪಿಸಿ ತಾಳ್ಮೆಯಿಂದ ಇರುವಂತೆ ಹೇಳುತ್ತಾಳೆ. 'ಮನೆತನ ದೊಡ್ಡದು ಕಣ್ಣಿಗೆ ಹಬ್ಬುವಷ್ಟು ಹೊಲ ಇದೆ' ಹೊಂದಿಕೊಂಡು ಬಾಳಬೇಕೆಂದಾಗ,

ತ್ವಾಡೊಳ್ಳೇದವ್ವ ಬಳಗ ಗೊರಚಿ ಪಲ್ಯ
ಸೀರೊಳ್ಳೇದವ್ವ ಸೆರಗಿಲ್ಲ : ಪುರುಷ
ಮನಪಾಡು ನೋಡೆ ರಿಣ ಇಲ್ಲ [೧೫]

ಎಂದು ಮಗಳು ಹೇಳಿಕೊಂಡು ದುಃಖಿಸಿದಾಗ ತಾಯಿಗೆ ನಿಜಸ್ಥಿತಿಯ ಅರಿವಾಗಿ ಮಲ್ಲಿಗಿಯಂಥಾ ಮಗಳನ್ನು ಪೂರ್ವಪರ ತಿಳಿದುಕೊಳ್ಳದೆ ಗುಡ್ಡದ ಕಲ್ಲಿಗೆ ಧಾರೆ ಎರದೆನಲ್ಲ ಎಂದು ಪಶ್ಚಾತಾಪ ಪಡುತ್ತಾಳೆ. ಆದರೆ ಕಾಲ ಮಿಂಚಿ ಹೋಗಿದೆ. ಚಿಂತಿಸಿ ಫಲವಿಲ್ಲ. ತಾಯಿಯೂ ಏನೂ ಮಾಡಲಾರದ ಅಸಹಾಯಕಳು.

ಹೆಣ್ಣಿಗೆ ಗಂಡನ ಮನೆ ಒಂದು ಸೆರೆಮನೆಯಿದ್ದಂತೆ. ಗಟ್ಟಿಯಾಗಿ ಉಸಿರುಬಿಡುವಷ್ಟು ಸ್ವಾತಂತ್ರ್ಯವಿಲ್ಲದಂತೆ ಮಾಡಿರುತ್ತದೆ. ಗಂಡನಿಗೊಂದು ನ್ಯಾಯ ಹೆಂಡತಿಗೊಂದು ನ್ಯಾಯ. ಗಂಡ ಹೇಗೇ ಇರಲಿ ಏನೇ ಮಾಡಲಿ, ಏನೇ ಅನ್ನಲಿ ಅದನ್ನೆಲ್ಲ ತಾಳ್ಮೆಯಿಂದ ಸಹಿಸಿಕೊಂಡೇ ಬದುಕುತ್ತಾಳೆ. ಗಂಡ ಬೇರೊಬ್ಬಳ ಜೊತೆ ಚಕ್ಕಂದವಾಡುವುದನ್ನು ಕಣ್ಣಾರ ಕಂಡವರು ಬಂದು 'ನಿನಗಂಡ ಅಲ್ಲೊಬ್ಬಳ ಕೂಡ ನಗುತ್ತಿದ್ದ' ಎಂದು ಹೇಳಿದಾಗಲೂ ಎಳ್ಳಷ್ಟು ವಿಚಲಿತಳಾಗದೆ ಕೋಪಿಸಿಕೊಳ್ಳದೆ

ನಕ್ಕರೆ ನಗಲೆವ್ವ ನಗಿ ಮುಖದ ಕಾದೀನಿ
ನಾ ಮುಚ್ಚಿ ಮುಡಿದ ಪರಿಮಳದ : ಆಹುವ
ಅವಳೆಂದು ಗಳಿಗಿ ಮುಡಿಯಲಿ [೧೫]
ಗಂಡ ಪಂಡಿರಾಯ ರಂಡೀಯ ಮಾಡಿದರ
ಭಂಡ ಮಾಡವರ ಮಗಳಲ್ಲ : ಕೊರಳಾನ
ಗುಂಡು ಬೇಡಿದರ ಕೊಡುವೇನ [೧೮]

ಹೀಗೆ ಹೇಳುತ್ತಾಳೆಂಧರೆ, ಗಂಡನ ಚೆಲ್ಲಾಟವನ್ನು ನೋಡಿಯೂ ನೋಡದ ಹಾಗೆ ಬದುಕಬೇಕಾದ ಪರಿಸ್ಥಿತಿ ಅವಳರು. ಇದು ಸಹನೆಯಿಂದ ಸಹಿಸಿಕೊಂಡದ್ದಳಲ್ಲ, ವಿರೋಧಿಸಿದರೆ ಪ್ರತಿಭಟಿಸಿದರೆ ಗಂಡನ ಮನೆ ಬಿಟ್ಟು ಹೋಗುವ ಪರಿಸ್ಥಿತಿ ಬರುತ್ತದೋ ಎಂಬ ಅಂಜಿಕೆ.

ನೀರಿಗೆ ಹೋದ ಸೊಸಿ ತಡವಾಗಿ ಬಂದಳೆಂದು ಸೊಸೆಯ ಶೀಲವನ್ನೇ ಶಂಕಿಸಿ ತವರಿಗೆ ಅಟ್ಟುವ ಕ್ರೂರಿ ಅತ್ತೆ, ದಂಡಿಗೆ ಹೋದ ಗಂಡ ತಾನು ಬರುವಷ್ಟರಲ್ಲಿ ಹೆಂಡತಿ ಬಸುರಿಯಾಗಿದ್ದಾಳೆಂದು ಕೈ ಹಿಡಿದ ಧರ್ಮಪತ್ನಿಯನ್ನೇ ಕುಲಟೆಯೆಂದು ಕೊಂದು ಹಾಕುವ ಕಟುಕ ಗಂಡ, ಇಲ್ಲ ಸಲ್ಲದ ಆರೋಪ ಹೊರಿಸಿ ಸಮಾಜದೆದುರು ಅತ್ತಿಗೆಯ ಮಾನ ತೆಗೆಯುವ ಹೀನ ನಾದಿನಿ, ಭಾವಂದಿರು, ಸಮಾಜದ ಹಿತಕ್ಕಾಗಿ ತನ್ನ ಗೌರವ ಪ್ರತಿಷ್ಠೆಯ ಉಳಿವಿಗಾಗಿ ಸೊಸೆಯನ್ನು ಒಂದು ಮಾತೂ ಕೇಳದೆ ತಮ್ಮ ತೀರ್ಮಾನವೇ ಅಂತಿಮವೆಂದುಕೊಂಡು ಮೂಢನಂಬಿಕೆಗೆ ಬಲಿಯಾಗಿ ಸೊಸೆಯನ್ನು ಕೆರೆಗೆ ಆಹುತಿ ನೀಡುವ ಸ್ವಾರ್ಥಿ ಮಾವ, ತವರಿನ ಮರ್ಯಾದೆಯೇ ಮುಖ್ಯವೆಂದು ಮಗಳ ಕಷ್ಟಕ್ಕೆ ಒಗೊಡದ ತಂದೆ ತಾಯಿಯರ, ಗಂಡನ ಮನೆಯ ಹಿಂಸೆಯನ್ನು ತಾಳಲಾರದೆ ಪ್ರಾಣ ರಕ್ಷಣೆಗಾಗಿ ತವರಿಗೆ ಹೋದರೆ ಹೆಂಡತಿಯ ಗುಲಾಮನಾಗಿ ತಂಗಿಯನ್ನು ತಿರಸ್ಕಾರದಿಮದ ಕಾಣುವ ಅಣ್ಣ ಹೀಗೆ ಒಂದೇ ಎರಡೇ ಬಾಳಿನುದ್ದಕ್ಕೂ ದುಃಖವನ್ನು ಅನುಭವಿಸಿದವಳು. ಹೀಗೆ ಕಷ್ಟಗಳನ್ನು ಅನುಭವಿಸಿ ನಲುಗಿ ರೋಸಿ ಹೋಗಿ ಸಿಡಿದೆದ್ದು ಪ್ರತಿಭಟಿಸಿದ ಹೆಣ್ಣುಗಳೂ ಇಲ್ಲದಿಲ್ಲ.

ನೀರಿಗೆ ಹೋದ ಸೊಸಿಯೇ ಇಟ್ಟೊತ್ತು ಹೇಂಗಾಯ್ತು
ಯಾರಲ್ಲಿ ನಿನ್ನ ತಡದೀರು.[೧೭]

ಎಂದು ನೀರಿಗೆ ಹೋದ ಸೊಸೆ ತಡವಾಗಿ ಬಂದಿದ್ದಕ್ಕೆ ಶಂಕಿಸಿ ಕೇಳಿದಾಗ ಅವಳ ಅನುಮಾನಕ್ಕೆ ತಕ್ಕಂತೆ ಕಟುವಾಗಿಯೇ ಸೊಸೆ ಉತ್ತರ ಕೊಡುತ್ತಾಳೆ.

ನಿಮ್ಮಂಗಿರುವಂಗೆ ನೀವೆ ನೀರಿಗೋಗ್ಬಂಗೆ
ನಿಮ್ಮ ಯಾರಲ್ಲಿ ತಡೆದೀರು ಅತ್ಯತ್ತಮ್ಮ
ಗಿಣಿಮಿಂದು ನೀರ ಕಣಿಕಿತ್ತೆ[೧೮]

ಹೀಗೆ ನಿಜವಾದ ಕಾರಣ ಹೇಳಿದರೂ ನಂಬದ ಅತ್ತೆಯರು ಸೊಸೆಯನ್ನು ಸಂಶಯಿಸಿ ಮಗನಿಗೆ ಇನ್ನೊಂದು ಹೆಣ್ಣು ತರಬಹುದೆಂಬ ಧೈರ್ಯದಿಂದ ಸೊಸೆಯನ್ನು ಮನೆಯಿಂದ ಹೊರಹಾಕುತ್ತಾರೆ. ಮಗನಿಗೆ 'ಬಿಟ್ಟುಬಿಡವಳ ಬಸವೀಯ' ಎಂದು ಆಜ್ಞೆ ಮಾಡುತ್ತಾಳೆ. ಇಂಥ ಸಂದರ್ಭದಲ್ಲಿ ಸೊಸೆಯಾದವಳು ಏನು ತಾನೆ ಮಾಡಿಯಾಳು. ಅಸಹಾಯಕ ಹೆಣ್ಣು ಗೆಲ್ಲುವಳೇ ? ಇಲ್ಲಿ ಬರುವ ಯಾವ ಹೆಣ್ಣಿಗು ನ್ಯಾಯ ಸಿಕ್ಕಿಲ್ಲ. ಪಡಬಾರದ ಕಷ್ಟವನ್ನು ಉಂಡವರೇ! ಹೆಣ್ಣಾಗಿ ಹುಟ್ಟುವುದೇ ಕಷ್ಟಗಳನ್ನು ಅನುಭವಿಸಲಿಕ್ಕೆ ಎಂಬಂತೆ ಸಮಾಜ ಒಂದು ಚೌಕಟ್ಟು ಹಾಕಿ ಬಂಧಿಸಿದೆ. ಚೌಕಟ್ಟನ್ನು ಎಂದೂ ಮೀರಿ ನಡೆಯುವಂತಿಲ್ಲ.

'ಕೊಟ್ಟಹೆಣ್ಣು ಕುಲಕ್ಕೆ ಹೊರಗೆ ಎಂದು ಹೇಳುವ ಸಮಾಜದಲ್ಲಿ ಗಂಡನ ಮನೆಯೇ ಸ್ವರ್ಗ, ಗಂಡನೇ ದೇವರೆಂದು ನಂಬಿ ಬಂದ ಹೆಣ್ಣಿನ ಸುಖ-ದುಃಖಗಳಲ್ಲಿ ಪಾಲುದಾರನಾಗಬೇಕಾದ ಗಂಡನ ಮನೆ ಸುಖಕೊಡುವುದಕ್ಕಿಂತ ಹೆಚ್ಚಾಗಿ ದುಃಖ ಕೊಟ್ಟದ್ದೆ ಹೆಚ್ಚೆನ್ನಬೇಕು. ತಾನು ಹೆಣ್ಣಾಗಿ ಹುಟ್ಟಿದ ಒಂದೇ ಒಂದು ತಪ್ಪಿಗಾಗಿ ಈ ಎಲ್ಲ ಸಂಕೋಲೆಗಳೂ ತನ್ನನ್ನು ಆವರಿಸಿರುವುದನ್ನು ಗುರುತಿಸಿಕೊಳ್ಳುತ್ತಾಳೆ. ಯಾವುದಕ್ಕೂ ಎದುರಾಡದೆ ಬಂದದ್ದನ್ನೆಲ್ಲಾ ಮೌನವಾಗಿ ಸಹಿಸಿಕೊಳ್ಳುವ ಪರರ ಸುಖಸಂತೋಷಗಳಲ್ಲಿ ತನ್ನ ಸುಖವನ್ನು ತ್ಯಾಗಮಾಡುವ ಹೆಣ್ಣಾಗಿರಬೇಕು. ಅಷ್ಟೇ ಅಲ್ಲ ಶೀಲ, ಚಾರಿತ್ರ್ಯ, ಪಾತಿವ್ರತ್ಯಗಳನ್ನು ಸದಾ ಕಾಪಾಡಿಕೊಂಡಿರಬೇಕು. ಇಂಥ ಪತಿವ್ರತಾ ಸ್ತ್ರೀಯರಿಂದ ಜನಪದ ಸಾಹಿತ್ಯ ತುಂಬಿ ಹೋಗಿದೆ. ಶೀಲ ಪಾತಿವ್ರತ್ಯಗಳಿಗೆ ನಮ್ಮ ಸಂಸ್ಕೃತಿಯಲ್ಲಿ ಕೊಟ್ಟಷ್ಟು ಬೆಲೆಯನ್ನು ಜಗತ್ತಿನ ಬೇರಾವ ಸಂಸ್ಕೃತಿಯಲ್ಲೂ ಕೊಟ್ಟಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಎಲ್ಲ ತಪ್ಪಿಗೂ ಹೆಣ್ಣೆ ಹೊಣೆಗಾರಳಾಗುತ್ತಾಳೆ. ಮಕ್ಕಳಾಗದಿದ್ದರೆ ಹೆಣ್ಣಿಗೆ ಮೋಕ್ಷವಿಲ್ಲ ಎನ್ನುವ ಮೂಢನಂಬಿಕೆ ಹೆಣ್ಣನ್ನು ಕಂಗೆಡಿಸಿ ಅದಕ್ಕೆ ಹೆಣ್ಣೆ ಹೊಣೆಗಾರಳು ಆಕೆಯಲ್ಲೇ ದೋಷವಿದೆ ಎಂದು ಭಾವಿಸಿ ಇಡೀ ಕುಟುಂಬ, ಸಮಾಜ ಅಷ್ಟೇ ಏಕೆ ಒಡಹುಟ್ಟಿದವರಿಂದಲೂ ಆಕ್ಷೇಪಣೆಗೆ, ನಿಂದನೆಗೆ ಒಳಗಾಗುತ್ತಾಳೆ. ಮಕ್ಕಳಾಗದಿದ್ದಕ್ಕೆ ಕಾರಣ ಹೆಣ್ಣೋ ಗಂಡೋ ಗೊತ್ತಿಲ್ಲ. ಸೊಸೆ /ಹೆಂಡತಿ ಬೇಡವಾಗಿದ್ದರೆ ಆಕೆಗೆ 'ಬಂಜೆ' ಎಂಬ ಪಟ್ಟಕಟ್ಟಿ ಆಕೆಯನ್ನು ಮನೆಯಿಂದ ಹೊರಹಾಕುವುದೋ ಅಥವಾ ಮಗನಿಗೆ ಇನ್ನೊಂದು

ಮದುವೆ ಮಾಡುವ ಹುನ್ನಾರವೋ ನಡೆದಿರುತ್ತದೆ. ಬಂಜೆತನ ಆಕೆಗೆ ಶಾಪವಾಗಿ ಕಾಣುತ್ತದೆ. ಕಂಡ ಕಂಡ ದೇವರಿಗೆ ಮೊರೆ ಹೋಗುತ್ತಾಳೆ.

ಕಂದನ ಕೊಡು ಶಿವನ ಬಂಧನ ಬಿಡಲಾರೆ
ಹಂಗಿನ ಬಾನ ಉಣಲಾರೆ : ಮರ್ತದಾಗ
ಬಂಜೆಂಬ ಶಬುದ ಹೊರಲಾರೆ.[೧೯]

'ಬಂಜೆ' ಎನ್ನುವ ಅಪಾವಾದದ ನಿವಾರಣೆಗಾಗಿ ಧರ್ಮಕಾರ್ಯಗಳನ್ನು ಮಾಡುತ್ತಾಳೆ. ಪೂಜೆ ಪುನಸ್ಕಾರ ಮಾಡುತ್ತಾಳೆ. ತನ್ನನ್ನೇ ಬಲಿಕೊಟ್ಟುಕೊಳ್ಳುವ, ಮಗುವನ್ನೇ ಬಲಿಕೊಡುವ ಹರಕೆ ಹೊತ್ತುಕೊಳ್ಳುತ್ತಾಳೆ ಎಂದರೆ ಬಂಜೆಯಾದವಳ ದಾರುಣ ಸ್ಥಿತಿ ಸಮಾಜ ಆಕೆಯನ್ನು ಕಂಡಿರುವ ರೀತಿ ಕಣ್ಣುಮುಂದೆ ಕಟ್ಟುತ್ತದೆ. ಹೆಣ್ಣಿನ ಜನ್ಮವೇ ಬೇಡ ಎಂದು ನೊಂದು

ಹೆಣ್ಣು ಆಗುವುದಕ್ಕಿಂತ ಮಣ್ಣು ಆಗುದು ಲೇಸು
ಮಣ್ಣಿನ ಮ್ಯಾಲ ಮರವಾಗಿ : ಇದ್ದರ
ಬಂದವರಿಗೆಲ್ಲ ನೆರಳವ್ವ[೨೦]

ಎಂದು ಹೀಗೆ ಹೇಳಬೇಕಾದರೆ ಆಕೆಯ ಮನಸ್ಸು ಎಷ್ಟು ರೋಸಿಹೋಗಿರಬೇಕು. ನಿಸ್ಸಹಾಯಕಳಾಗಿ ಬೆಂದಿರಬೇಕು. ಇಂಥ ನೋವನ್ನು ಹೇಗೆ ಉಂಡಿರಬೇಕೆಂದು ! ದಿಗಿಲಾಗುತ್ತದೆ.

ನಮ್ಮ ದೇಶದ ಸಂಸ್ಕೃತಿಯಲ್ಲಿ ಗಂಡ ಸತ್ತ ನಂತರ ವಿಧವೆಯರಾಗಿ ಬಾಳುವುದಕ್ಕೆ ಹೆದರಿ ತಮ್ಮನ್ನು ಚಿತೆಗೆ ಒಡ್ಡಿಕೊಂಡಿದ್ದಾರೆಯೇ ಹೊರತು ಪತಿಯ ಮೇಲಿನ ಪ್ರೀತಿಯಿಂದಾಗಲಿ ಅಥವಾ ತನಗೆ ಮುಕ್ತಿ ಸಿಗುತ್ತದೆಂದಾಗಲಿ ಅಲ್ಲ. ಚಿಕ್ಕ ವಯಸ್ಸಿನಲ್ಲೇ ವಿಧವೆಯಾಗುವವರ ಗೋಳು ಹೇಳತೀರದು. ಎಲ್ಲರ ಬಾಯಿಗೂ ಗ್ರಾಸವಾಗಿ ಬರ್ಬರ ಬದುಕನ್ನು ನಡೆಸಬೇಕಾದ ಬಾಳಿಗೆ ಹೆದರಿ ಕಂಗಲಾಗಿ ಕೊಂಡ ಹೋಗುವ ನಿರ್ಧಾರ ಮಾಡಿದಂತಿದೆ. ಆಕೆ ಇಂಥ ಕಷ್ಟಗಳನ್ನು ಕಂಡು ತನ್ನ ಬದುಕು ಇಂಥದ್ದೇ ಆಗಬಾರದೆಂದು

ಗಂಡ ಸಾಯೋಕ್ಕಿಂತ ಮುಂಡ್ಯಾಗೋಕಿಂತ
ಕಂಡೋರ ಮನೆಯ ಕಸನಾಕಿ : ಸಾಯೋಕಿಂತ
ಕೊಂಡವನ್ನೊದೆ ಕಡುಲೇಸು[೨೧]

ಎಂದು ಹೇಳುವ ಈ ಹೆಣ್ಣು ಗಂಡ ಬದುಕಿದ್ದಾಗಲೇ ಅನುಭವಿಸಿದ ನೋವೇ ಸಾಕು ಗಂಡ ಸತ್ತ ಮೇಲೆ ಸಮಾಜದಲ್ಲಿ ಒಂದು ಕಸವಾಗಿ, ನಾಯಿಗಿಂತ ಕಡೆಯಾಗಿ ಎಲ್ಲರ ದೃಷ್ಟಿಯಲ್ಲಿ ಪಾಪಿಷ್ಟಳಾಗಿ ಬದುಕುವುದಕ್ಕಿಂತ ದಾರಿಗಾಣದೆ

ಉರಿಯಾಗ ಬೆಂದೇನ ಕೆರಿಯಾಗ ಮುಳಗೇನ
ತಿರುಗುವ ಗಾಣಕ್ಕೆ ಸಿರವ : ಕೊಟ್ಟೇನ
ಸ್ಥಿರವಾಗಿ ಮರ್ತ್ಯ ಗೆದ್ದೇನೆ ''

ಹೆಣ್ಣು ಬದುಕಿದ್ದಾಗ ಎಂದೂ ಸುಖ ಕಂಡಂತೆ ಕಾಣುವುದಿಲ್ಲ. ಉರಿಯ ನೋವನ್ನು ನೀರಿನಲ್ಲಿ ಮುಳುಗುವ ನೋವನ್ನು ತಿರುಗುವ ಗಾಣಕ್ಕೆ ಹೂಡಿ ತಿರುಗುವ ನೋವನ್ನು ಬೇಕಾದರೂ ಸಹಿಸಿಕೊಂಡೇನು ಆದರೆ ಗಂಡನ ಮನೆಯ ಹಿಂಸೆಯ, ಕಷ್ಟದ ನೋವನ್ನು ಸಹಿಸಲಾರೆ ಅದಕ್ಕೆ ಪರಿಹಾರ ಶಾಶ್ವತವಾಗಿ ಈ ಮರ್ತ್ಯವನ್ನೆ ಗೆಲ್ಲುವುದು. ಈ ನೋವಿಗಿಂತ ಬೆಂಕಿಯಲ್ಲಿ ಬೇಯುವ ಸಾವೇ ಸುಖವೆಂದು ಭಾವಿಸಿದಂತಿದೆ. ಒಂದು ಕಷ್ಟದಿಂದ ಪಾರಾಗಲು ಕೊಂಡವೇರುವುದು ಇನ್ನೊಂದು ಜನರ ದೃಷ್ಟಿಯಲ್ಲಿ 'ಮಹಾಸತಿ' ಯಾಗಿ ದೇವತೆಯಾಗಿ ಉಳಿಯುವುದು. ಈ ಎರಡು ದೃಷ್ಠಿಯಿಂದ ಆಕೆ ಶಾಶ್ವತವಾಗಿ ಗಂಡನ ಮನೆಯ ಕಷ್ಟದಿಂದ ಪಾರಾಗಲು ಈ ಮಾರ್ಗ ಹಿಡಿದಿರಬೇಕು ಎನಿಸುತ್ತದೆ.

ಜನಪದರಲ್ಲಿ ಹೆಣ್ಣು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವಲ್ಲಿ ವಿಫಲಳಾಗಿರಲು ಕಾರಣ ಪುರುಷ ಪ್ರಧಾನ ಸಮಾಜದ ಮೌಲ್ಯಗಳು ಅವಳನ್ನು ಬಂದಿಸಿಟ್ಟದ್ದು. ಗರತಿಯಾಗಿ ಬಾಳಬೇಕು. 'ಅತ್ತೆ ಮಾವರಿಗಂಜಿ, ಸುತ್ತೇಳು ನೆರೆಗಂಜಿ ' ಇರಬೇಕು ಎಂದು ಬರೀ ಅಂಜಿ ಅಂಜಿ ನಡೆಯುವಂತೆ ಮಾಡಿದರೇ ಹೊರತು ಆಕೆಯ ವ್ಯಕ್ತಿತ್ವಕ್ಕಾಗಲೀ ಆಕೆಯೂ ಗಂಡನ ಮೆನಯ ಸದಸ್ಯರಲ್ಲಿ ಒಬ್ಬಳು ಎಂಬ ಪ್ರೀತಿ ತೋರಿಸಿದಂತೆ ಎಲ್ಲು ಕಂಡು ಬರುವುದಿಲ್ಲ. ಇಲ್ಲೋ ಅಲ್ಲೋ ಒಂದೊಂದು ಕಡೆ ಇದ್ದರೂ ಮನೆಯ ಯಾರೊಬ್ಬರಿಂದಲಾದರೂ ನೋವನ್ನು ಅನುಭವಿಸಲೇಬೇಕಿತ್ತು. ಇಷ್ಟೆಲ್ಲಾ ನೋವು, ಕಷ್ಟಗಳ ನಡುವೆಯೂ ಗಂಡನ ಮನೆಯ ಗರತಿಯಾಗಿ, ಗಂಡನಿಗೆ ಒಳ್ಳೆ ಹೆಂಡತಿಯಾಗಿ ಅತ್ತೆಗೆ ಉತ್ತಮ ಸೊಸೆಯಾಗಿ, ಹೆತ್ತ ಮನೆಗೆ ಕೀರ್ತಿ ತರುವ ಮಗಳಾಗಿ ನಾದಿನಿಗೆ ಪ್ರೀತಿಯ ಅತ್ತಿಗೆಯಾಗಿ ಸಮಾಜಕ್ಕೆ

ಒಳ್ಳೆಯ ಹೆಣ್ಣಾಗಿ ಬಾಳುವುದಕ್ಕೆ ತನ್ನದೇ ಆದ ಒಂದು ಅಸ್ತಿತ್ವವನ್ನು ಕಂಡುಕೊಳ್ಳಲು ಎಲ್ಲರಿಗೂ ಎಷ್ಟೆ ಹೊಂದಿಕೊಂಡು ಬಾಳಿದರೂ ಹೆಣ್ಣಿನ ಮೇಲಿನ ಅಪವಾದ ಸಂಶಯ ತಪ್ಪಲಿಲ್ಲ.

ಬಿರುಗಾಳಿಯ ಹೊಡೆತಕ್ಕೆ ಸಿಕ್ಕ ತರಗೆಲೆಯಂತೆ ಹೆಣ್ಣಿನ ಜೀವನ ಅಸ್ತವ್ಯಸ್ತವಾಯಿತು. ಇನ್ನು ಬಡತನದಲ್ಲಿದ್ದವರನ್ನು ಶೋಷಿಸುವ ಪರಿ ಮಾತಿಗೆ ನಿಲುಕದು.

ಬಡವರು ಸತ್ತರೆ ಸುಡಲಿಕ್ಕೆ ಸೌದಿಲ್ಲೊ
ಒಡಲ ಬೆಂಕೀಲಿ ಹೆಣ ಬೆಂದೂ : ದೇವರೆ
ಬಡವರಿಗೆ ಸಾವ ಕೊಡಬ್ಯಾಡ [೨೨]
ಹೀಗೆ ಈ ಪದ್ಯ ಶೋಷಣೆಯ ತೀವ್ರತೆಯನ್ನು ಸೂಚಿಸುತ್ತದೆ.

ಸಾಂಪ್ರದಾಯಿಕ ಮೌಲ್ಯದ ಬಿಗಿಕಟ್ಟಿನಲ್ಲಿ ತಲೆರೋಸಿ ತನ್ನಿಚ್ಛೆಯಂತೆ ಬದುಕುವ ಎದೆಗಾರಿಕೆಯನ್ನು ತೋರಿಸುವ ಹೆಣ್ಣು ಮಕ್ಕಳೂ ಇದ್ದಾರೆ. ಆದರೆ ಅಲ್ಲಿಯೂ ಪುರುಷರ ಲಂಪಟತನ, ಮುಗ್ಧ ಕನಿಕರಗಳು ಆ ಕ್ರಿಯೆಯನ್ನು ನಿರ್ಬಂಧಿಸುತ್ತವೆ. ಸಾಮಾಜಿಕ ಮೌಲ್ಯಗಳ ವಿರುದ್ಧ ವೈಯಕ್ತಿಕ ಮೌಲ್ಯವನ್ನು ಎತ್ತಿ ಹಿಡಿಯುವ ಪ್ರಸಂಗ ಜನಪದ ಸಾಹಿತ್ಯದಲ್ಲಿ ಅಪರೂಪವೆಂದೇ ಹೇಳಬಹುದು. 'ನುಚ್ಚಾಯ್ತು ನೀರ ಹೋಳೆಯಾಗ ' ಎಂಬ ಕಥನಗೀತೆ, ' ಸಂಗ್ಯಾ-ಬಾಳ್ಯಾ ' ನಂಥ ಸುಪ್ರಸಿದ್ಧ ಬಯಲಾಟಗಳು ಮಾತ್ರ ಸಿಗುತ್ತವೆ.

ಜನಪದ ಸಾಹಿತ್ಯದಲ್ಲಿ ವ್ಯಕ್ತವಾಗುವ ಮೌಲ್ಯಗಳು ಸಾಮಾಜಿಕ ದೃಷ್ಟಿಕೋನದಿಂದಲೇ ನಿರ್ಧರಿಸಲ್ಪಟ್ಟಿರುತ್ತವೆ. ಇಲ್ಲಿ ವ್ಯಕ್ತಿಗಿಂತ ಸಮಾಜವೇ ಮುಖ್ಯವಾಗಿರುತ್ತದೆ. ಹಾಗಾಗಿ ಹೆಣ್ಣು ತನವನ್ನೆಲ್ಲ ವೈಯಕ್ತಿಕ ಸುಖವನ್ನು ಹತ್ತಿಕ್ಕಿಕೊಂಡು ಸಮಾಜದ ಹಿತಕ್ಕಾಗಿ ತನ್ನ ಬದುಕನ್ನೇ ಅರ್ಪಿಸಿ ಬಾಳಿನ ಸಾರ್ಥಕತೆಯನ್ನು ಪಡೆದುಕೊಂಡವಳು. ಹೀಗಾಗಿ ಜನಪದ ಕಥನ ಗೀತೆಯಲ್ಲಿ ಅನೇಕ ಹೆಣ್ಣುಮಕ್ಕಳು ನೀರಾಗಿ ಹರಿದಿದ್ದಾರೆ. ಕೆರೆಗೆ ಹಾರವಾಗಿದ್ದಾರೆ. ಗುಡಿ ಕೋಟೆಗಳಿಗೆ ಆತ್ಮಾರ್ಪಣೆ ಮಾಡಿಕೊಂಡಿದ್ದಾರೆ, ಸಹಗಮನಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ ಹಿರಿಯರು ಕೊಂಡವೇರುವುದು ಬೇಡವೆಂದರೂ ಕೇಳದೆ, 'ಕಿಚ್ಚು ಕೊಡದಿದ್ದರೆ ಕಿತ್ತು ಕೊಂಬೆನು ನಾಲಿಗೆ ' ಎಂದು ಹಠ ಹಿಡಿದವರಿದ್ದಾರೆ. ಭಾಗೀರತಿ, ಈರೋಬಿ, ನಾಗವ್ವ ಕೆಂಚವ್ವ ಉತ್ತರದೇವಿ, ಹಿರಿದಿಮ್ಮಿ ಹೀಗೆ ಅನೇಕರು ಸಾವಿನಲ್ಲೆ ತಮ್ಮ ಸುಖವನ್ನು ಕಂಡುಕೊಂಡ ಮಹಾಸತಿಯರು.

ಜನಪದರಲ್ಲಿ ಹೆಣ್ಣು ಕಣ್ಣಾಗಿ ಬಾಳಬೇಕಾದವಳು ಹೀಗೆ ಹುಣ್ಣಾಗಿ ಬಾಳ ಬೇಕಾಯಿತು. ಜನಪದ ಹೆಣ್ಣುಮಕ್ಕಳು ಅಬಲೆಯರಲ್ಲ ಸಬಲೆಯರೇ. ಆದರೆ ಸಾಮಜಿಕ ಚೌಕಟ್ಟು ಅವರನ್ನು ಅಬಲೆಯರನ್ನಾಗಿ ಮಾಡಿದೆ. ಪುರುಷ ಪ್ರಧಾನ ಸಮಾಜ ಇಂಥ ವ್ಯವಸ್ಥೆಯನ್ನು ಬಹಳ ಜೋಪಾನ ಮಾಡಿಕೊಂಡು ಬಂದಂತಿದೆ. ಹೆಣ್ಣು ಹಡೆದವ್ವ ಆಕೆಯ ಪ್ರೀತಿಯ ಪರಿಮಿತಿಯನ್ನ ಈ ಗಂಡು ಕುಲ ಇನ್ನು ತಿಳಿದಂತಿಲ್ಲ. ಜನಪದ ಹೆಣ್ಣಿನ ನೋವು ನಲಿವುಗಳನ್ನು ಕೌಟುಂಬಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ವೈಯಕ್ತಿಕವಾಗಿ, ನೈತಿಕವಾಗಿ ಹೀಗೆ ಹಲವು ನೆಲೆಗಳಲ್ಲಿ ಕಾಣಬಹುದು. ತಾಯಿಯಾಗಿ, ಮಗಳಾಗಿ, ಹೆಂಡತಿಯಾಗಿ, ಅತ್ತೆಯಾಗಿ, ಅಜ್ಜಿಯಾಗಿ ತನ್ನ ಜವಾಬ್ದಾರಿಯನ್ನು ಚಾಚೂ ತಪ್ಪದೆ ನಿಭಾಯಿಸಿದ್ದಾಳೆ. ಹೆಣ್ಣು ಕೇವಲ ಗರತಿಯಷ್ಟೆ ಅಲ್ಲ ''ಕುರಿತೋದದೆಯಂ ಕಾವ್ಯಪ್ರಯೋಗ ಪರಿಣತರು ಪರಿರ್ಣಮತಿಗಳ್' ಎನ್ನುವಂತೆ ಓದು ಬರಹ ಕಲಿಯದ ಮಹಾಜಾಣೆಯರು. ಬುದ್ಧಿವಂತೆಯರು, ಆದರೆ ಆಕೆ ತನ್ನತನವನ್ನು ಕಂಡುಕೊಳ್ಳಲು ವ್ಯವಸ್ಥೆ ಅವಕಾಶ ಮಾಡಿಕೊಡಲೇ ಇಲ್ಲ. ಕಥೆಗಳಲ್ಲಾಗಲಿ, ಒಗಟು, ಗಾದೆಗಳು, ಕಾವ್ಯಗಳಲ್ಲಿ ಸುಖದ ಚಿತ್ರಣ ಕಂಡುಬರುವುದು ವಿರಳಾತಿವಿರಳ. ಹೆಣ್ಣಿನ ಸಂಕಟದ ದನಿ ಗೀತೆಗಳಲ್ಲಿ ದಾಖಲಾಗಿರುವುದನ್ನು ಮಾತ್ರ ಕಾಣಬಹುದು. ಗಂಡರಸ ಹಾಡಿಗಿಂತ ಹೆಂಗಸರ ಹಾಡುಗಳೇ ಹೆಚ್ಚಾಗಿ ದೊರೆಯುತ್ತವೆ. ಇವೆಲ್ಲವೂ ಆಕೆಯ ಕಷ್ಟವನ್ನೇ ಹೆಚ್ಚಾಗಿ ಪ್ರತಿಧ್ವನಿಸುತ್ತವೆ. ಇಂತಹ ಕಥೆ, ಹಾಡು, ಒಗಟು, ಗಾದೆಗಳ ಮೂಲಕವೇ ತನ್ನ ಒಳಗಿನ ಬೇಗುದಿಯನ್ನು ಹೊರಚೆಲ್ಲಿದ್ದಾಳೆ. ಹೀಗೆ ಜನಪದ ಸಾಹಿತ್ಯ ಪ್ರಕಾರಗಳ ಮೂಲಕ ಹೆಣ್ಣಿನ ನೋವು ನಿರಾಸೆಗಳು ಅಭಿವ್ಯಕ್ತಗೊಂಡಿವೆ.

ಅಡಿ ಟಿಪ್ಪಣಿಗಳು:

ಜನಪದ ಸಾಹಿತ್ಯ ಮತ್ತು ಮಹಿಳೆ

೧. ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ - ವೈ.ಬಿ.ಹಿಮ್ಮಡಿ, ಪುಟ - ೫

೨. ಜನಪದ ಸಾಹಿತ್ಯದಲ್ಲಿ ಸ್ತ್ರೀಸಂವೇದನೆ ಮತ್ತು ಕುಟುಂಬ ವ್ಯವಸ್ಥೆ - ಶಾಂತಿನಾಯಕ್
ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ - ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ-೨೦೦

೩. ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ - ವೈ.ಬಿ.ಹಿಮ್ಮಡಿ, ಪುಟ-೫೨

೪. ಅದೇ, ಪುಟ-೫೨

೫. ಅದೇ, ಪುಟ-೫೨

೬. ಅದೇ, ಪುಟ-೫೨

೭. ಅದೇ, ಪುಟ-೫೨

೮. ಅದೇ, ಪುಟ-೫೨

೯. ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ : ವಿವಿಧ ಲೇಖಕರು, ಜನಪದ ಸಾಹಿತ್ಯದಲ್ಲಿ ಸ್ತ್ರೀವೇದನೆ ಮತ್ತು ಕುಟುಂಬ ವ್ಯವಸ್ಥೆ - ಶಾಂತಿ ನಾಯಕ್

೧೦. ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ - ವೈ.ಬಿ.ಹಿಮ್ಮಡಿ, ಪುಟ ೩೮

೧೧. ಅದೇ, ಪುಟ ೩೮

೧೨. ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ - ವಿವಿಧ ಲೇಖಕರು, ಪುಟ-೨೦೩

೧೩. ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ - ವೈ.ಬಿ.ಹಿಮ್ಮಡಿ, ಪುಟ ೩೮

೧೪. ಅದೇ, ಪುಟ ೩೮

೧೫. ಅದೇ, ಪುಟ ೩೮

೧೬. ಅದೇ, ಪುಟ ೫೪

೧೭. ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ - ವಿವಿಧ ಲೇಖಕರು, ಪುಟ-೧೦೯

೧೮. ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ - ವಿವಿಧ ಲೇಖಕರು, ಪುಟ-೧೦೯

೧೯. ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ - ವೈ.ಬಿ.ಹಿಮ್ಮಡಿ, ಪುಟ ೫೦

೨೦. ಅದೇ, ಪುಟ ೫೦

೨೧. ಜನಪದ ಖಂಡಕಾವ್ಯಗಳು - ಜೀ.ಶಂ.ಪರಮಶಿವಯ್ಯ, ಪುಟ ೧೪

೨೨. ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ - ವೈ.ಬಿ.ಹಿಮ್ಮಡಿ, ಪುಟ ೫೧

೨೩. ಅದೇ, ಪುಟ ೪೯

ಕನ್ನಡ ಜನಪದ ಕಥನ ಗೀತೆಗಳು ಮತ್ತು ದುರಂತದ ಪರಿಕಲ್ಪನೆ

ಭಾರತೀಯ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಜ್ಞಾನ ವಿಜ್ಞಾನಗಳು ಪರಂಪರೆಯಿಂದಲೂ ಧರ್ಮದ ತಳಹದಿಯನ್ನು ಹೊಂದಿವೆ. ವೇದಗಳ ಕಾಲದಿಂದಲೂ ಈ ಬಗೆಯ ಧಾರ್ಮಿಕ ಆವರಣದ ನೆಲೆಗಳನ್ನು ನಿಚ್ಚಳವಾಗಿ ಗುರುತಿಸಲು ಸಾಧ್ಯ. ತಪೋ ಭೂಮಿ! ಕರ್ಮಭೂಮಿ! ಎಂದೆಲ್ಲಾ ಈ ನೆಲವನ್ನು ಹಾಡಿ ಹೊಗಳುತ್ತಾ ಬರಲಾಗಿದೆ. ಅಂತೆಯೇ ಇಲ್ಲಿಯ ಯಾವುದೇ ಚಿಂತನೆ ಹೊರಡುವುದೇ ಅಂತಹ ಧಾರ್ಮಿಕ ಆಶಯಗಳನ್ನು ಪಡೆದುಕೊಂಡು.

ಇಲ್ಲಿ ಮಾನವ ಮಾಡುವ ಯಾವುದೇ ಕಾರ್ಯವು ಪಾಪ-ಪುಣ್ಯಗಳ, ಧರ್ಮ-ಅಧರ್ಮಗಳ ಸಿದ್ಧ ಮಾದರಿಯ ತಿಳುವಳಿಕೆಯೊಂದು ಥುತ್ತನೆ ಪ್ರವೇಶ ಮಾಡುತ್ತದೆ. ಈ ಬಗೆಯ ವಿಚಾರಗಳು ನಮ್ಮವರ ಆಲೋಚನೆಯನ್ನು, ಪ್ರಜ್ಞೆಯನ್ನು ಬೆಳೆಸಿ ಅರಿವಿನ ಭಾಗವಾಗಿಸಿದೆ. ಅತಿ ಮಾನುಷ ಕಲ್ಪನೆಗಳು, ದೈವಶಕ್ತಿಯ ಸ್ವರೂಪ, ಸ್ವರ್ಗ-ನರಕಗಳ ಭಯ, ಪಾಪ-ಪುಣ್ಯಗಳ ಪ್ರಜ್ಞೆ ಭಾರತೀಯನೊಬ್ಬನ ಮನೋಭೂಮಿಯನ್ನು ಬಾಲ್ಯದಿಂದಲೇ ರೂಪಿಸುತ್ತವೆ. ಆದ್ದರಿಂದ ಅವನ ಯೋಜನೆ, ಯೋಚನೆಗಳು ಸಹಜವಾಗಿಯೇ ಧರ್ಮಾಧರ್ಮಗಳ ಸುಳಿಯಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಈ ಬಗೆಯ ಮನಸ್ಸುಗಳು ಇಲ್ಲಿ ಸೃಷ್ಟಿಗೊಂಡಿರುವುದನ್ನು ಗುರುತಿಸಬಹುದು. ಅಂತೆಯೇ ಒಂದು ಬಗೆಯ ಭಾವನಾತ್ಮಕ ಜಗತ್ತಿನಲ್ಲಿ ಒಳಿತು ಕೆಡುಕುಗಳನ್ನು ಮೌಲ್ಯಗಳನ್ನಾಗಿ ಒಪ್ಪಿಕೊಂಡಿರುವುದು ಮುಖ್ಯ ಸಂಗತಿ. ಇಂಥ ಪರಿಸರವೊಂದು ಇಲ್ಲಿ ನೆಲೆಯೂರಿದೆ.

ಈ ಬಗೆಯ ಪರಿಭಾವನೆಗಳು ನಮ್ಮ ಕಲೆ, ಸಾಹಿತ್ಯ ಸಂಸ್ಕೃತಿಯಲ್ಲಿಯೂ ದಾಖಲಾಗುತ್ತಾ ಆಚರಣೆಗೊಳ್ಳುತ್ತಾ ನಂಬಿಕೆಯ ವಲಯದಲ್ಲಿ ಉಳಿದು ಬಂದಿದೆ. ಸಾಕ್ಷರತೆ, ಸಮಾಜವೆನ್ನಿಸಿದ ವೈಧಿಕ ಸಮಾಜ ರೂಪಿಸುವ ಸಾಮಾಜಿಕ, ಧಾರ್ಮಿಕ ಸಾಂಸ್ಕೃತಿಕ ಮೌಲ್ಯಗಳು ಭಾರತದಂತಹ ಸಮಾಜಗಳಲ್ಲಿ ಆಳವಾಗಿ ಬೇರೂರಿದೆ. ಆದರೆ, ಈ ಬಗೆಯ ಮೌಲ್ಯಗಳು ಮೇಲು ನೋಟಕ್ಕೆ ಸರಿಯೆಂದು ಕಂಡು ಬಂದರೂ ಆಳದಲ್ಲಿ ಅಸಮಾನತೆಯನ್ನು ಶೋಷಣೆಯನ್ನು ವ್ಯವಸ್ಥಿತವಾಗಿ ಪ್ರಾಯೋಜಿಸಿದ ಹುಸಿ

ಮೌಲ್ಯಗಳೂ ಇಲ್ಲದಿಲ್ಲ. ಮೇಲು ಸ್ತರದಲ್ಲಿ ಶಾಂತಿಯನ್ನು ನೆಮ್ಮದಿಯನ್ನು,ತಾಳ್ಮೆಯನ್ನು ಸಹನೆಯನ್ನು ಸಾರ್ವಕಾಲಿಕ ಮೌಲ್ಯಗಳಾಗಿಸಿ ಅವುಗಳನ್ನು ಪಾಪ-ಪುಣ್ಯದ, ಧರ್ಮ ಕರ್ಮದ ಸೋಗುಗಳಲ್ಲಿ ಒಪ್ಪಿಸಲಾಗಿದೆ. ಬಹುಸಂಖ್ಯಾತ ಅನಕ್ಷರಸ್ಥ ಬ್ರಾಹ್ಮಣೇತರ ಸಮಾಜಗಳನ್ನು ಬೌದ್ಧಿಕ ಗುಲಾಮಗಿರಿಗೆ ತಳ್ಳಲಾಗಿದೆ. ಹೀಗೆ ಒಳಗಾದ ಜನ ತಾವು ಶೋಷಣೆಗೆ ಒಳಗಾಗುತ್ತಿದ್ದೇವೆ ಎಂಬ ಅರಿವುಂಟಾಗದಂತೆ ಕತ್ತಲಲ್ಲಿಡಲಾಗಿದೆ. ಅಂತೆಯೇ ಹೀಗೆ ರೂಪಿಸಲಾದ ಹುಸಿ ಮೌಲ್ಯಗಳನ್ನು ಅನಕ್ಷರ ಸಮಾಜದಲ್ಲಿ ಪ್ರಾಯೋಜಿಸಲಾಗಿದೆ ಎಂಬುದು ಸುಳ್ಳಲ್ಲ.

ಪ್ರಾಚೀನ ಕಾಲದಿಂದಲೂ ದೇವರು, ಧರ್ಮ, ನಂಬಿಕೆ, ಆಚರಣೆ, ಸಂಪ್ರದಾಯಗಳ ಮೂಲಕ ವರ್ಣ, ವರ್ಗ, ಜಾತಿ, ಮತ, ಪಂಥಗಳ ಹೆಸರಿನಲ್ಲಿ ಸಮಾಜವನ್ನು ಒಡೆದು ಆಳಲಾಗಿದೆ. ಆರ್ಥಿಕವಾಗಿ ದುರ್ಬಲಗೊಳಿಸಿ ಸಾಮಾಜಿಕವಾಗಿ ಕೀಳಾಗಿಸಿ, ಹೀನ ಸಂಸ್ಕೃತಿಯೆಂದು ಕಡೆಗಣಿಸಿ, ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲಾಗಿದೆ. ಸ್ತ್ರೀಗೆ ಮಡಿ-ಮೈಲಿಗೆಗಳ ತಪ್ಪು ಕಲ್ಪನೆಗಳನ್ನು ಹೊರಿಸಿ ಹಿಂಸಿಸಲಾಗಿದೆ. ಅವಳನ್ನು ಅಮಾನವೀಯವಾಗಿ ನಡೆಸಿಕೊಳ್ಳಲಾಗಿದೆ. ಭೋಗದ ವಸ್ತುವಿನಂತೆ ಬಳಸಿಕೊಳ್ಳಲಾಗಿದೆ. ಈ ಬಗೆಯ ಅಸಮಾನತೆ, ಶೋಷಣೆಗೊಳಗಾಗಿರುವುದು ಜಂಭೂದ್ವೀಪದ ಭರತಖಂಡವೆಂಬ ಪುಣ್ಯಭೂಮಿಯಲ್ಲಿ ಎಮಬುದನ್ನು ನಾವು ಗಮನಿಸಬೇಕು.

ಭಾರತದ ಸಾಹಿತ್ಯ ಸಂಸ್ಕೃತಿಗಳಲ್ಲಿ ರಕ್ತಪಾತ, ಸಾವು ನೋವುಗಳೆಂಬ ದುರಂತದ ಕಲ್ಪನೆ ತುಂಬಾ ಕಡಿಮೆ ಎಂಬುದನ್ನು ಒಪ್ಪುವುದಿಲ್ಲವೆಂದೂ ನಮ್ಮ ಸಂಸ್ಕೃತಿಗೆ ಅದು ಒಗ್ಗದ ಸಂಗತಿ ಎಂದೆಲ್ಲ ಹೇಳಲಾಗುತ್ತದೆ. ಆದರೆ ಇಲ್ಲಿ ಮುಖ್ಯ ಪ್ರಶ್ನೆ ಎದುರಾಗುವುದು ಯಾರ ಸಾವು ಆಗಬಾರದು ? ಯಾರ ರಕ್ತ ಚೆಲ್ಲಬಾರದು ? ಯಾರು ಹಾಗೆ ಕೊಲೆಯಲ್ಲಿ ಕೊನೆಯಾಗಬಾರದು ? ಎಂಬ ಅಂಶವನ್ನು ಪರಿಶೀಲಿಸಬೇಕು. ಕಥಾನಾಯಕನಾದವನು, ರಾಜನಾದವನು, ದೇವರೆಂದು ಪೂಜಿತನಾಗುವವನು, ಸಮಾಜದ ಉದ್ಧಾರ ಮಾಡುವ ಮುಖಂಡನು ಸಾವು, ನೋವು, ದುರಂತಗಳಲ್ಲಿ ಅಂತ್ಯವಾಗಬಾರದೆಂದು ವ್ಯಾಖ್ಯಾನಿಸಲಾಗಿದೆ.

ಆದರೆ, ಪ್ರತಿನಾಯಕ, ರಾಜನಲ್ಲದವನು, ಸಾಮಾನ್ಯ ಮನುಷ್ಯನ ಸಾವು ಸಾವಾಗಿ ಕಾಣಲಿಲ್ಲ, ದುರಂತವೆನಿಸಲಿಲ್ಲ. ಇದು ಇಲ್ಲಿಯ ನ್ಯಾಯ, ಇಂತಹ ಆಲೋಚನೆಗಳೆಲ್ಲ ಪುರೋಹಿತಶಾಹಿಯ, ಯಜಮಾನ ಸಂಸ್ಕೃತಿಯ ಆಲೋಚನೆಗಳೇ. ಆದುದರಿಂದ ನಮ್ಮ ಸಾಹಿತ್ಯ, ಸಂಸ್ಕೃತಿಗಳನ್ನು ಹೊಸ ಓದಿಗೆ, ಮರುವ್ಯಾಖ್ಯಾನಕ್ಕೆ ಒಳಪಡಿಸಬೇಕಾಗಿದೆ.

ಆದ್ದರಿಂದ ಜನಪದ ಸಾಹಿತ್ಯ ನೈಜ ಬದುಕಿನ ದಾಖಲೆಗಳಾಗಿ, ನಿತ್ಯ ಜೀವನದ ಸತ್ಯ ಕಥೆಗಳಾದ್ದರಿಂದ ಕಡಿಮೆ ಪ್ರಮಾಣದಲ್ಲಾದರೂ ಅವರ ಬದುಕಿನ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಇಂದಿಗೂ ಕೇವಲ ದೈಹಿಕ ಹಿಂಸೆಯನ್ನು ಸಾವುನೋವುಗಳನ್ನು ಮಾತ್ರವೇ ದುರಂತವೆಂದು ಪರಿಗಣಿಸುವುದಿದೆ. ಆದರೆ ಮಾನಸಿಕ ಆಘಾತಗಳು, ಮಾನಸಿಕ ಹಿಂಸೆಗಳೂ ಸಹ ದುರಂತದ ಪರಿಕಲ್ಪನೆಯ ವ್ಯಾಪ್ತಿಗೆ ಒಳಪಡಬೇಕು.

ಕನ್ನಡ ಜಾನಪದದಲ್ಲಿ ಸಿಂಹಪಾಲು ಹೆಣ್ಣುಮಕ್ಕಳ ಸಾಹಿತ್ಯವೇ ಇದೆ. ಮತ್ತು ಶತಮಾನಗಳಿಂದ ಗಂಡುಕುಲ ಸ್ತ್ರೀಯನ್ನು ಅತ್ಯಂತ ಶೋಚನೀಯ ಸ್ಥಿತಿಯಲ್ಲಿಟ್ಟಿರುವುದು ವಾಸ್ತವ. ಹಾಗೆ ವ್ಯವಸ್ಥೆಯ ಬಂಧಿಯಾದ ಹೆಣ್ಣಿನ ಮನಸ್ಸಿನ ಸೂಕ್ಷ್ಮ ಲೋಕವೆಂದು ಜನಪದ ಕಥನಗೀತೆಗಳಲ್ಲಿ ದಾಖಲಾಗಿದೆ. ಅವಳ ನೋವು, ನಿರಾಸೆ, ದುಃಖದುಮ್ಮಾನ, ಆಸೆ-ಆಕಾಂಕ್ಷೆಗಳು, ಬೇಕು-ಬೇಡಗಳು, ತುಂಬಾ ಅರ್ಥಪೂರ್ಣವಾಗಿ ಸಂವೇದಿಸಲ್ಪಟ್ಟಿವೆ. ಆದ್ದರಿಂದ ಕೇವಲ ಆಶಯ ವರ್ಗಗಳ ಕಲ್ಪನೆಗಿಂತ ಮುಖ್ಯವಾಗಿ ಕನ್ನಡ ಜನಪದ ಕಥನಗೀತೆಗಳ ಮತ್ತು ಸೂಕ್ಷ್ಮವಾದ ಒಳಜಗತ್ತು. ಅದು ಶೋಷಣೆಗೆ ಒಳಗಾಗುವುದು ವ್ಯವಸ್ಥೆಯಲ್ಲಿ ದನಿಕಳೆದುಕೊಂಡು ಅಸಹಾಯಕಳಾಗಿ ತನ್ನ ಕೊರಳೊಡ್ಡುವ ಹತ್ತು ಹಲವು ಬಗೆಗಳಲ್ಲಿ ಅವಳ ಬದುಕು ಭವಿಷ್ಯಗಳನ್ನು ಗುರುತಿಸುವುದು ಸಾಧ್ಯವಿದೆ.

ಕಥನ ಗೀತೆಯ ಈ ಯಜಮಾನ ವರ್ಗ ತನ್ನನ್ನು ವಿಮರ್ಶಿಸಿಕೊಳ್ಳುವ ಯಾವ ಪ್ರಯತ್ನವನ್ನು ಮಾಡಿಲ್ಲ. ಎನರು ಕೂಡ ಈ ವ್ಯವಸ್ಥೆಯ ಟೀಕೆಯನ್ನು ಮಾಡಿಲ್ಲ. ಈ ಜನರಿಂದ ಯಜಮಾನ ವರ್ಗ ಪರಾಕು ಹೇಳಿಸಿಕೊಂಡು ಬದುಕಿ ಬಂದಿದೆ. ಆದ್ದರಿಂದ ಅದು ಗಟ್ಟಿಗೊಂಡಿದೆ. ಹಾಗಾಗಿ ಚಲಿಸುವ

ಜನರಿಗೆ ಹಿಂಸೆಯಾಗುವುದರ ಜೊತೆಗೆ ತನಗೆ ತಾನೇ ಹಿಂಸೆಯಾಗಿದೆ. ಸ್ತಬ್ಧಗೊಂಡ ಕೆಳವರ್ಗ ಮಾತು ಕಳಕೊಂಡು ಮೂಕವಾಗಿದೆ. ಇದು ಕೂಡ ತನಗೆ ತಾನೆ ಹಿಂಸೆಯನ್ನು ಹೇರಿಕೊಂಡಂತೆ. ಆದ್ದರಿಂದ ಈ ಯಜಮಾನ ವರ್ಗದ ಹಿಂಸೆಯನ್ನು ವಿವರಿಸಲು ಆ ವರ್ಗದಲ್ಲಿರುವ ಹೆಣ್ಣನ್ನು ಕುರಿತ ಅಭಿವ್ಯಕ್ತಿಯ ಕಡೆಗೆ ಹೋಗಬೇಕಾಗಿದೆ.[೧]

ಯಾವುದೇ ಸಾಹಿತ್ಯ ಆಯಾ ಕಾಲದ ಸಾಮಾಜಿಕ ಜೀವನದ ದಾಖಲೆಯಾದ್ದರಿಂದ, ಆಗಿನ ಸ್ಥಿತಿಗತಿಯನ್ನು ಮಾನವೀಯವಾದ ಆಲೋಚನೆಗಳನ್ನು ಅವು ಬಿತ್ತರಿಸುತ್ತವೆ. ದುಃಖಾಂತ ಜನಪದ ಕಥನಗೀತೆಗಳು ಈ ದೃಷ್ಟಿಯಿಂದ ಹೆಚ್ಚು ಗಮನ ಸೆಳೆಯುತ್ತವೆ. ಅಲೆಮಾರಿ ಜೀವನದಲ್ಲಿ ಆಹಾರದ ಅಭಾವವಿದ್ದ ಕಾರಣ ಹುಟ್ಟಿದ ಹೆಣ್ಣುಮಕ್ಕಳನ್ನು ನಿರ್ದಯವಾಗಿ ಕೊಲ್ಲುತ್ತಿದ್ದ ಪ್ರವೃತ್ತಿಯನ್ನೇ ಆನಂತರವೂ ಮುಂದುವರಿಸಿದ ಲಕ್ಷಣಗಳು ಸುಧಾರಿತ ಸಮಾಜದಲ್ಲಿಯೂ ಕಂಡುಬರುತ್ತದೆ. ಇದು ಆಶ್ಚರ್ಯವಾಗಿ ಕಂಡು ಬಂದರೂ ವಾಸ್ತವಿಕ ಸಂಗತಿ. ಇಂದಿಗೂ ಅದು ಬೇರೆ ಬೇರೆ ರೂಪಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವುದು ನಾಗರಿಕ ಸಮಾಜದಲ್ಲಿನ ಒಂದು ವಿಪರ್ಯಾಸ. ಸುಖದ ಪಾಲು ಬಂದಾಗ ಗಂಡಸಿಗೆ ಪೂರ್ಣಪಾಲಾದರೆ, ದುಃಖದಪಾಲು ಬಂದಾಗ ಹೆಣ್ಣಿಗೆ ಪೂರ್ಣಪಾಲು ಎಂಬುದು ನಮ್ಮ ಸಮಾಜದಲ್ಲಿ ಉದ್ದಕ್ಕೂ ಕಂಡು ಬರುತ್ತಿರುವ ನ್ಯಾಯ.[೨]

ಕೆಲವು ಘಟನೆಗಳಿಗೆ ನಿರ್ದಿಷ್ಟ ಕಾರಣ ಬೇಕೆಂದಿರುವುದಿಲ್ಲ. ತೀರಾ ಚಿಕ್ಕ ಘಟನೆಯೂ ವಿಕೋಪಕ್ಕೆ ಹೋಗಿ, ಇಡೀ ಬದುಕೇ ದುರಂತಗೊಳ್ಳುವುದುಂಟು.[೩] ಅಂಥದೊಂದು ದುರಂತಕ್ಕೊಳಗಾದವಳು ಉತ್ತರ ದೇವಿ ಕಾವ್ಯದ 'ಉತ್ತರದೇವಿ'. ನೀರಿಗೆ ಹೋದ ಉತ್ತರದೇವಿ ತಡವಾಗಿ ಬಂದದ್ದೇ ಅತ್ತೆಯ ಸಂಶಯಕ್ಕೆ ಕಾರಣವಾಗಿ ಅತ್ತೆ ಉತ್ತರದೇವಿಯ ಮೇಲೆ ತನ್ನ ಯಜಮಾನಿಕೆಯ ಅಹಂನ್ನು ದರ್ಪವನ್ನು ತೋರಿಸುತ್ತಾಳೆ. ನೀರಿಗೆ ಹೋಗಿ ತಡವಾಗಿ ಬಂದದ್ದೇಕೆ ಎಂಬ ಅತ್ತೆಯ ಪ್ರಶ್ನೆಗೆ ಉತ್ತರದೇವಿ ಕೊಟ್ಟ ಉತ್ತರ ಅಸಂಬದ್ಧವೆನಿಸುತ್ತದೆ ಹಾಗೂ ಅನುಮಾನಾಸ್ಪದವಾಗುತ್ತದೆ.

ಉತ್ತರದೇಶದ ಮಳೆಹೂದು ಕೆರೆತುಂಬಿ
ಬಸುಳೆ ಮುಳ್ಳಾಡಿ ಅಡಗಿದ್ದೆ[೪]

ಹೀಗೆ ಹೇಳಿದ್ದು ಅತ್ತೆಯ ಕೋಪಕ್ಕೆ ಹಾಗೂ ಸಂಶಯಕ್ಕೆ ಕಾರಣವಾಗುತ್ತದೆ.

ಬಸುಳೆಗೆ ಮುಳ್ಳುಂಟೆ ಬದನಗೆ ಚಪ್ಪರುಂಟೆ
ಸೊಸೆಯಮ್ಮ ನಿನ ಮಾತು ನಿಜವುಂಟೆ ?
ಕತ್ತೆಗೆ ಕೋಡುಂಟೆ ಎತ್ತಿಗೆ ಮಾತುಂಟೆ
ಅತ್ತೆಮ್ಮ ನಿಮಮಾತು ನಿಜವುಂಟೆ [೫]

ಹೀಗೆ ಅತ್ತೆ ಸೊಸೆಯರಿಬ್ಬರಿಗೂ ಮಾತಿಗೆ ಮಾತು ಬೆಳೆದು ದೊಡ್ಡ ಕಾಳಗವೇ ನಡೆಯುತ್ತದೆ. ಸೊಸೆಯ ಶೀಲವನ್ನೇ ಶಂಕಿಸಿ, ಸತ್ಯವೇನೆಂದು ತಿಳಿದುಕೊಳ್ಳುವ ವ್ಯವಧಾನವೂ ಇಲ್ಲದೆ ಉತ್ತು ಬಂದ ಮಗನಿಗೆ ಉಣಲಿಕ್ಕಿ

ಉತ್ತರದೇವೆಂಬೊ ಸೊಸೆ ಬೇಡ ಕಂದಯ್ಯ
ಬಿಟ್ಟುಬಿಡವಳ ಬಸವೀಯ [೬]

ಎಂದು ಆಜ್ಞೆ ಮಾಡುತ್ತಾಳೆ. ಮಗ ಇದಕ್ಕೆ ಸಮ್ಮತಿಸದಿದ್ದಾಗ ಮತ್ತೊಂದು ಲಗ್ನ ಮಾಡಿಸುವುದಾಗಿ ಹೇಳಿ ಬಿಡುವಂತೆ ಒತ್ತಾಯಿಸುತ್ತಾಳೆ. ಇಲ್ಲಿ ಮಗ ಮೂಕ ಬಸವಣ್ಣ , ತಾಯಿಯ ಮಾತಿಗೆ ಕಟ್ಟು ಬಿದ್ದು ಕೈಹಿಡಿದ ಹೆಂಡತಿಯನ್ನೆ ಬಿಡುತ್ತಾನೆ. ಗಂಡನೇ ಇದಕ್ಕೆ ಸಮ್ಮತಿಸಿದ ಮೇಲೆ ಇನ್ನು ತನಗೆ ನ್ಯಾಯವಾದರೂ ಹೇಗೆ ಸಿಕ್ಕಿತೆಂದು ದುಃಖಿಸಿ ಪುಟ್ಟ ಮಗುವನ್ನು ಎತ್ತಿಕೊಂಡು ಅಪ್ಪಕೊಟ್ಟ ಎಮ್ಮೆಯನ್ನು ಹೊಡಕೊಂಡು ಮಂದಲಚುಕ್ಕಿ ಬೆಳಕಿನಲ್ಲಿ ಸ್ತ್ರೀಲೋಕದ ಅನಂತ ದುಃಖವನ್ನು ಪ್ರತಿಬಿಂಬಿಸುವ ಪ್ರತೀಕವಾಗಿ ಹೊರಡುತ್ತಾಳೆ. ತನ್ನ ತೌರಿನಲ್ಲಾದರೂ ತನಗೆ ಆಶ್ರಯ ಸಿಕ್ಕೀತೆಂದು ಹೋದ ಉತ್ತರೆಗೆ ಎಲ್ಲಾ ಬಾಗಿಲುಗಳು ಮುಚ್ಚಿದ್ದವು. ಅವರವರ ಇಚ್ಛಾನುಸಾರ ಸುಖನಿದ್ರೆಯಲ್ಲಿದ್ದ ಅಪ್ಪ ಅಣ್ಣ ದೊಡ್ಡಪ್ಪ ಅಕ್ಕ ತಂಗಿ ಇವರ್‍ಯಾರಿಗೂ ಉತ್ತರದೇವಿಯ ದುಃಖದ ಕೂಗು ಕೇಳಿಸಲೇ ಇಲ್ಲ. ಅವರೆಲ್ಲರ ಕಿವಿ ಕಿವುಡಾಗಿ, ಕಣ್ಣು ಕುರುಡಾಗಿದ್ದವು. ಉತ್ತರ ದೇವಿಯ ಕರೆಗೆ ಯಾರೂ ಓಗೊಡಲಿಲ್ಲ. ಅಪ್ಪನರರಮನೆಗೆ ಹೊಗಿ ದೈನ್ಯಳಾಗಿ ಅಸಹಾಯಕಳಾಗಿ 'ನನ್ನಪ್ಪನನಗೆ ಕದ ತೆಗೆಯೊ ' ಎಂದಾಗ

ಹಾಸಿಗೆ ಹಾಸ್ಯಾವೆ ದೀಪಲಾಲ್ಯೆಸವೆ
ನಿಮ್ಮವ್ವೆ ತೋಳಲ್ಲಿ ಒರಗವಳೆ - ಉತ್ತರದೇವಿ
ಹೋಗೆ ದೊಡ್ಡಪ್ಪನ ಅರಮನೆಗೆ [೭]

ಇದು ತಂದೆಯಿಂದ ಬಂದ ಉತ್ತರ. ಮರುಮಾತಿಲ್ಲದೆ ಉತ್ತರದೇವಿ ದೊಡ್ಡಪ್ಪನರಮನೆಗೆ ಹೋಗಿ 'ದೊಡ್ಡಪ್ಪ ನನಗೆ ಕದ ತೆಗೆಯೆ ' ಎಂಬ ಕೂಗಿಗೆ ದೊಡ್ಡಪ್ಪನಿಂದ ಬಂದ ಉತ್ತರ 'ನಿಮ್ಮ ದೊಡ್ಡವ್ವೆ ತೋಳಲ್ಲೊರಗವಳೆ, ನೀನೋಗ್ಗೆ ಅಣ್ಣೈನರಮನೆಗೆ. ಕಂದನನ್ನು ಎತ್ತಿಕೊಂಡು, ಎಮ್ಮೆಯನ್ನು ಹೊಡಕೊಂಡು ಮೌನವಾಗಿ ಬೆಳ್ಳಿಚುಕ್ಕಿಯ ಮಂದಬೆಳಕಿನಲ್ಲಿ ಉತ್ತರದೇವಿ ಬಾಗಿಲು ಬಾಗಿಲಿಗೆ ಅಲೆದಳು. ಯಾರೂ ಆದರಿಸಲಿಲ್ಲ, ಉತ್ತರದೇವಿ ಗಂಡನ ಮನೆ ತೊರೆದು ತೌರಿಗೆ ಬರುತ್ತಾಳೆಂಬ ವಿಷಯ ಮೊದಲೇ ಗೊತ್ತಿತ್ತೇನೋ ಎನ್ನುವ ಹಾಗೆ ಎಲ್ಲರ ಪ್ರತಿಕ್ರಿಯೆ ಉದಾಸೀನವಾಗಿರುತ್ತದೆ. 'ಕೊಟ್ಟಹೆಣ್ಣು ಕುಲಕ್ಕೆ ಹೊರಗು ' ಎಂಬ ಸತ್ಯ ಅರಿತುಕೊಂಡ ಉತ್ತರದೇವಿ ಕೊನೆಗೆ ಹಡೆದವ್ವನಿಂದಲಾದರೂ ಆಶ್ರಯ ಸಿಕ್ಕೀತೆಂದು ಹೋದರೆ ಉತ್ತರೆಯ ಗೋಳೇ ತಾಯಿಯ ಗೋಳೂ ಆಗಿತ್ತು. ದುಃಖದ ಇನ್ನೊಂದು ಪ್ರತೀಕವಾಗಿದ್ದಳು ಉತ್ತರೆಯ ತಾಯಿ. ಮಗಳ ಸ್ಥಿತಿಗೆ ಮರುಗಿ, ದುಃಖಿಸಿ ಅಸಹಾಯಕಳಾಗಿ

ನನ್ನಾಡು ನಿನಗೆ ಮಡಗಿತ್ತೆ ನನ ಮಗಳೆ
ನೀನುತ್ತರೆ ಮಳೆಯಾಗಿ ಹೊರಡವ್ವ [8]

ಹೀಗೆ ಎರಡೂ ಮನೆಯಿಂದ ನಿರಾಕರಿಸಲ್ಪಟ್ಟು ನಿರಾಶ್ರಿತಳಾದ ಉತ್ತರದೇವಿಗೆ 'ಮಳೆಯಾಗಿ' ಹೋಗು ಎಂದು ಹೇಳಿರುವುದು ಸಾವಿನ ದಾರಿ ತೋರಿಸಿದಂತಿದೆ. ಉತ್ತರದೇವಿ ಶಿಶುವನ್ನು ಎಮ್ಮೆಯನ್ನು ತನ್ನ ಜೊತೆಯಲ್ಲೇ ಕರೆದುಕೊಂಡು ಮಳೆಯಾಗಿ ಹೋಗುವ ಪರಿ ಎಂಥವರ ಮನಸ್ಸನ್ನೂ ಕಲಕುವಂತೆ ಮಾಡುತ್ತದೆ. 'ಮಳೆ' ಯಾಗಿ ಹೊರಟಳು ಎಂದಿರುವ ಧ್ವನಿ ಬಹಳ ಅರ್ಥಪೂರ್ಣವಾಗಿದೆ. ಸಮಾಜದಲ್ಲಿ ಗಂಡನ ಮನೆ ಹಾಗೂ ತೌರುಮನೆ ಎರಡೂ ಕಡೆಯಿಂದ ನಿರಾಕರಿಸಲ್ಪಟ್ಟವರಿಗೆ ಕೆರೆನೋ ಬಾವಿನೋ ಆಶ್ರಯ ಎಂಬಂತೆ ಉತ್ತರೆ ಮಳೆಯಾಗಿ ಹೋಗುತ್ತಾಳೆ. ಉತ್ತರದೇವಿ ಎಲ್ಲೂ ಯಾರಲ್ಲೂ ತನ್ನ ನೋವನ್ನು ದುಃಖವನ್ನು ಹೇಳಿಕೊಳ್ಳುವುದಿಲ್ಲ. ಉತ್ತರದೇವಿ ಇಡೀ ವ್ಯವಸ್ಥೆಯನ್ನು ಸಮಾಜವನ್ನು ಅರ್ಥಮಾಡಿಕೊಂಡಿದ್ದಾಳೆ. ತನ್ನವರೇ ತನ್ನನ್ನು ತಿರಸ್ಕರಿಸಿದ ಮೇಲೆ ತನಗೆಲ್ಲಿಯ ಆಶ್ರಯ? ತಾಯಿಯ ಮಾತು ಸರಿಯೆನಿಸುತ್ತದೆ ಮೌನವಾಗಿ ತಾಯಿ ಮಾತನ್ನು ಅನುಸರಿಸುತ್ತಾಳೆ.

ಉತ್ತರೆಗಾದ ಅನ್ಯಾಯದ ವಿರುದ್ಧ ಪ್ರತಿಭಟನೆಯ ಸೊಲ್ಲು ಯಾರಲ್ಲೂ ಇಲ್ಲ. ಅದನ್ನು ತಿಳಿಯುವ ಗೋಜಿಗೂ ಹೋಗುವುದಿಲ್ಲ. ಉತ್ತರೆ ಮಳೆಯಾಗಿ ಸಮಾಜಕ್ಕೆ ಹಿತವನ್ನುಂಟು ಮಾಡಿದವಳಲ್ಲ ಆದು ಮಾತ್ರ ಮುಖ್ಯವಾಗುತ್ತದೆ. ಎಲ್ಲರ ಕಣ್ಣಲ್ಲಿ ಮಹಾಸಾಧ್ವಿಯಾಗಿ ಕಾಣುತ್ತಾಳೆ.

ಸಂಸ್ಕೃತಿ, ಸಂಪ್ರದಾಯ, ತ್ಯಾಗ, ಆದರ್ಶ ಮುಂತಾದ ದೊಡ್ಡ ದೊಡ್ಡ ಪದಗಳ ಹೆಸರಿನಲ್ಲಿ ಮುಗ್ಧ ಹೆಣ್ಣಿನ ಬಲಿದಾನ ಅವ್ಯಾಹತವಾಗಿ ನಡೆದಿದೆ. ಸಂಪ್ರದಾಯದ ಹೆಸರಿನಲ್ಲಿ ಹೆಣ್ಣನ್ನು ಹೆಣವಾಗಿಸುವ ಕೆಲಸ ಯಾವ ಮುಚ್ಚುಮರೆಯೂ ಇಲ್ಲದಂತೆ ನಡೆಯುತ್ತಲೇ ಇದೆ. ಹೀಗೆ ಮೂಢನಂಬಿಕೆಗೆ ಧರ್ಮದ ಹೆಸರಿನಲ್ಲಿ ಹೆಣವಾದ ಭಾಗೀರತಿ, ಮದಗದ ಕೆಂಚವ್ವ ಹುಳಿಯಾರು ಕೆಂಚವ್ವ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಲಾರದೆ ಅಂಜಿ, ಅಳುಕಿ ಕೆರೆಗೆ ಬಲಿಯಾದದ್ದು ಅವರವರ ಇಚ್ಛೆಯಿಂದಲ್ಲ ಎಂಬುದಂತೂ ಸತ್ಯ.

ಪುರುಷ ಪ್ರಧಾನ ಸಮಾಜ ಬದುಕಿನ ಎಲ್ಲ ಸಂದರ್ಭದಲ್ಲಿಯೂ ಹಲವು ವಿಧದಲ್ಲಿ ಹೆಣ್ಣನ್ನು ಬಲಿಪಶುವನ್ನಾಗಿ ಮಾಡಿಕೊಂಡು ಬಂದಿದೆ. ಕಷ್ಟನಷ್ಟಗಳಿಗೆಲ್ಲ ಅವಳನ್ನು ಮುಂದೊಡ್ಡಿ ತಾನು ಸಮಾಧಾನದ ಸಂತೃಪ್ತಿಯ ಸುಖವನ್ನು ಅನುಭವಿಸುತ್ತಾ ಬಂದಿದೆ. ಹೊಸದಾಗಿ ಕಟ್ಟಿಸಿದ ಕೆರೆಗೆ ಬೊಗಸೆ ನೀರು ಬಾರದಿದ್ದಾಗ ಕಲ್ಲನಕೇರಿ ಮಲ್ಲನಗೌಡ ಆತಂಕಕ್ಕೊಳಗಾಗಿ ಜೋಯಿಸರನ್ನು ಕೇಳುತ್ತಾನೆ. ಅದಕ್ಕೆ ಪರಿಹಾರವಾಗಿ ಆವರು ಮನೆಯ ಹಿರಿಸೊಸೆಯನ್ನು ಹಾರವ ಕೊಡಬೇಕು ಎಂದಾಗ ಗೌಡನ ಆಲೋಚನೆ

ಹಿರಿಸೊಸಿನ್ನ ಕೊಟ್ಟರೆ ಹಿರಿತನಕ ಯಾರಿಲ್ಲ
ಕಡೆ ಸೊಸಿ ಭಾಗೀರತಿನ್ನ ಹಾರವಕೊಡಬೇಕು [6]

ಹೀಗೆಂದು ತೀರ್ಮಾನಿಸುವಲ್ಲಿ ಗೌಡನ ಸ್ವಾರ್ಥ ಎದ್ದು ಕಾಣುತ್ತದೆ. ಭಾಗೀರತಿಯನ್ನೆ ಬಲಿಕೊಡುವ ಆಲೋಚನೆಯ ಹಿಂದಿನ ಉದ್ದೇಶ ಭಾಗೀರತಿಯ ಗಂಡ ದಂಡಿಗೆ ಹೋಗಿದ್ದಾನೆ. ಹಾಗೆಯೇ ಭಾಗೀರತಿಗೆ ಮಕ್ಕಳಿಲ್ಲ. ಗಂಡ ದಂಡಿನಿಂದ ಜೀವಂತವಾಗಿ ಬಂದರೆ ಇನ್ನೊಂದು ವಿವಾಹ

ಮಾಡಬಹುದು ಇಲ್ಲದಿದ್ದರೆ ಭಾಗೀರತಿ ಹೇಗೂ ವಿಧವೆಯಾಗಿ ಬಾಳುವುದಕ್ಕಿಂತ ಹಾರವಾಗಿ ಎಲ್ಲರ ಕಣ್ಣಲ್ಲಿ ಶಾಶ್ವತವಾಗಿ ಉಳಿಯುವುದೇ ಸರಿ ಎಂದು ತಿಳಿದಿರಬಹುದಾದ ಸಾಧ್ಯತೆಗಳಿವೆಯೆಂದೆನಿಸುತ್ತದೆ.

ಭಾಗೀರತಿಯನ್ನು ಹೊರತುಪಡಿಸಿ ಉಳಿದಂತೆ ಎಲ್ಲರಿಗೂ ಭಾಗೀರತಿ ಕೆರೆಗೆ ಬಲಿಯಾಗುವ ವಿಷಯ ತಿಳಿದಂತಿತೆ. 'ಹಾರ ಕೊಡಬೇಕೆಂತ ಮಾತಾತು ಮನೆಯಾಗ' ಈ ವಿಷಯವಾಗಿ ಚರ್ಚೆ ನಡೆದು ಕೊನೆಗೆ ಭಾಗೀರತಿಯ ಬಲಿಯನ್ನೂ ನಿರ್ಧಾರ ಮಾಡಿದ್ದಾರೆ. ಸೂಕ್ಷ್ಮ ಬುದ್ಧಿಯಿಂದ ತನ್ನ ಸಾವಿನ ಬಗ್ಗೆ ತಿಳಿದ ಭಾಗೀರತಿಯ ಮನಸ್ಸು ಎಷ್ಟು ದುಃಖಿಸಿರಬೇಕು, ಚಡಪಡಿಸಿರಬೇಕು. ತನ್ನ ದುಃಖವನ್ನು ತೋಡಿಕೊಳ್ಳಲು ಅಥವಾ ತಾನೇ ಯಾಕೆ ಬಲಿಯಾಗಬೇಕು ಎಂದು ಪ್ರಶ್ನಿಸಲು ಗಂಡ ಮಾದೇವರಾಯ ದಂಡಿಗೆ ಹೋಗಿದ್ದಾನೆ. ಅವನು ಹಿಂದಿರುಗುವಷ್ಟರಲ್ಲಿ ಈ ಕಾರ್ಯ ನಡೆದು ಹೋಗಿರುತ್ತದೆ. ಅತ್ತೆ ಮಾವಂದಿರನ್ನು ಎದುರಿಸಿ ಪ್ರಶ್ನಿಸುವ ಧೈರ್ಯವಿಲ್ಲ, ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಾಗಿದೆ. ಭಾಗೀರತಿ ಇನ್ನೇನು ಮಾಡಿಯಾಳು ? ತವರಿನ ನೆನಪಾಗುತ್ತದೆ. ಭಾಗೀರತಿ ದುಃಖದ ಹೊತ್ತಿನಲ್ಲಿ ಸಾಂತ್ವನ ನೀಡಬಲ್ಲವರನ್ನು ಹುಡುಕಿಕೊಂಡು ತವರಿಗೆ ಹೋಗಿ ಬರಲು ನಿರ್ಧರಿಸಿ,

'ಅತ್ತೆವ್ವ ನಾನಮ್ಮ ತವರು ಮನೆಗೆ ಹೋಗಲೇನು' - ಎಂಬ ಭಾಗೀರತಿಯ ಈ ಒಂದೇ ಉಕ್ತಿಯಲ್ಲಿ ಅವಳ ಅಂತರಂಗದಲ್ಲಿನ ಅನಾಥ ಸ್ವರೂಪದ ಅಳಲು ಮಡುಗಟ್ಟಿ ವ್ಯಕ್ತವಾಗಿದೆ. ಇದು ಕೇವಲ ತವರುಮನೆಗೆ ಹೋಗುವುದಕ್ಕೆ ಅತ್ತೆಯ ಒಪ್ಪಿಗೆಯನ್ನು ಕೇಳಿದ ಮಾತಾಗದೆ, ಆ ಅಸಹಾಯ ಸಂದರ್ಭದಲ್ಲಿ ಮನಸ್ಸಿನ ಒಂಟಿತನವನ್ನು ಭರಿಸಲಾರದ ಭಾವಸ್ಥಿಯ ಜೀವರಕ್ತದ ಮಿಡಿತವಾಗಿದೆ. ಈ ಅಳಲಿಕೆಯ ಪ್ರಾರ್ಥನೆಗೆ ಅತ್ತೆ ಕೊಡುವ ಒಪ್ಪಿಗೆ 'ಸರ್ರನೆ ಹೋಗವ್ವ ಭರ್ರನೆ ಭಾರವ್ವ ಭಾಗೀರತಿ ಬರುತ್ತಾಳೋ ಇಲ್ಲವೋ ಎಂಬ ಅನುಮಾನದಿಂದ ಹೇಳಿದಂತಿದೆ.

ತವರಿಗೆ ಹೋದ ಭಾಗೀರತಿಗೆ ಅಲ್ಲೂ ಯಾವುದೇ ಬದುಕುವ ಭರವಸೆ ಕಾಣಲಿಲ್ಲ. ಮೊದಲೇ ನೊಂದು ಬೆಂದು ಹೋದ ಜೀವಕ್ಕೆ ಯಾರೂ ತನ್ನ ನೋವನ್ನು, ತನಗಾಗಿರುವ ಅನ್ಯಾಯವನ್ನು ದೂರ ಮಾಡುವವರ ಹಾಗೆ ಕಾಣಲಿಲ್ಲ. ಬಾಡಿದ ಮುಖ ಹೊತ್ತು ಕಣ್ಣಲ್ಲಿ ನೀರು ತುಂಬಿ ಬಂದ

ಭಾಗೀರತಿಯನ್ನು ನೋಡಿದ ತಂದೆ, ತಾಯಿ ಅಕ್ಕ ಎಲ್ಲರೂ ಕಳವಳಗೊಂಡಂತೆ ಆಶ್ಚರ್ಯವಾಗಿ 'ಎಂದಿಲ್ಲದ ಭಾಗೀರತಿ ಇಂದ್ಯಾಕ ಬಂದೆವ್ವ ?' ಎಂದು ಕೇಳುವುದೇ ಭಾಗೀರತಿಗೆ ತಾನು ಬಂದ ವಿಷಯವನ್ನು ಹೇಳದಂತೆ ಮಾಡುತ್ತದೆ. ಭಾಗೀರತಿ ಬುದ್ಧಿವಂತೆ ಯಾರ ಮನಸ್ಸನ್ನೂ ಅರಿಯದಷ್ಟು ದಡ್ಡಿಯಲ್ಲ. ತನ್ನನ್ನು 'ಕೆರೆಗೆ ಹಾರ' ವಾಗಿಸುವ ವಿಷಯವನ್ನು ನೇರವಾಗಿ ಹೇಳದೆ ಬಹಳ ಸೂಚ್ಯವಾಗಿ 'ನಮ್ಮಾವ ನಮ್ಮತ್ತೆ ಬ್ಯಾರೆ ಇಡತಾರಂತೆ ' ಎನ್ನುತ್ತಾಳೆ. ತನಗೊದಗಿದ್ದ ಸಂಕಷ್ಟದಿಂದ ತನ್ನನ್ನು ಪಾರುಮಾಡುವಲ್ಲಿ ಎಲ್ಲರೂ ಅಸಹಾಯಕರೆಂದು ಆಕೆಗೆ ಗೊತ್ತಿದೆ. ಅವರೆಲ್ಲ ಯಾವುದೇ ಆತಂಕಕ್ಕೊಳಗಾಗದೆ, 'ಇಟ್ಟರೆ ಇಡಲೇಳು' ಹೊಲಮನಿ ಕೊಡುತೇವ, ವಾಲಿಜೋಡು ಕೊಡುತೇವ, ಮಕ್ಕಳ ಜೋಡಿಗೆ ಕಳುಹಿತೇವ ಇಂಥ ಬುಟಾಟಿಕೆಯ ಸಹಾಯ ಭಾಗೀರತಿಗೆ ಬೇಕಿರಲಿಲ್ಲ. ಭಾಗೀರತಿಯ ವಿಷಯದಲ್ಲಿ ತವರಿನವರು ಇದಕ್ಕಿಂತ ಹೆಚ್ಚಿನ ಸಹಾಯವನ್ನೇನೂ ಮಾಡಲಾರದೆ ಕೈಚೆಲ್ಲಿದ ಅಸಹಾಯಕರು. ಇವರ ಅಸಹಾಯಕತೆಯನ್ನು ಅರಿತ ಭಾಗೀರತಿ ನಿರ್ದಾಕ್ಷಿಣ್ಯವಾಗಿ ಅವನ್ನೆಲ್ಲ 'ಹೊಲಿದಂಡ್ಯಾಗ್ಹಾಕಪ್ಪ 'ಒಲಿಯಾಗ ಹಾಕವ್ವ '. 'ಮಕ್ಕಳಿದ್ದರೇನಕ್ಕ ದುಕ್ಕು ಕಳುದಾವೇನ?' ಎಂದು ನಿರಾಕರಿಸುವ ಭಾಗೀರತಿಯ ಒಳ ಮನಸ್ಸಿನ ವೇದನೆ ಹೆತ್ತವರಿಗೂ ಅರ್ಥವಾಗದೇ ಇದ್ದದ್ದು ದುರಂತವೇ ಸರಿ. ಇವರೆಲ್ಲರ ಪ್ರತಿಕ್ರಿಯೆ ಇದೆಲ್ಲ ನಮ್ಮ ಕರ್ಮ ಅನುಭವಿಸಲೇ ಬೇಕು ಎನ್ನುವಂತಿದೆ. ನಮ್ಮ ದುಃಖಗಳಿಗೆಲ್ಲ ನಮ್ಮ ಕರ್ಮವೇ ಹೊಣೆಯೆಂದು ನಂಬಲು ಸಾಧ್ಯವಾದಂತ ಮೌಲ್ಯಗಳ ಅಸಮಂಜಸತೆಯಾಗಲಿ, ಅರ್ಥಹೀನತೆಯಾಗಲಿ ನಮ್ಮನ್ನು ಬಾಧಿಸುವುದಿಲ್ಲ. ದುಃಖಕ್ಕೆಲ್ಲ ಅಮೂರ್ತವಾದ ಕರ್ಮವನ್ನು ಗುರಿಮಾಡಿ ವಾಸ್ತವ ಸತ್ಯವನ್ನು ಅಲಕ್ಷಿಸಿಬಿಡುತ್ತೇವೆ. ಅಲಕ್ಷಿಸಿದರೂ ಅದಕ್ಕೆ ಅರ್ಥವೇ ಉಳಿಯುವುದಿಲ್ಲ. ಅಂಥ ಹೊತ್ತಿನಲ್ಲಿ ಮೌನವಾಗಿ ಅನುಭವಿಸುವುದೊಂದೇ ದಾರಿಯಾಗುತ್ತದೆ.[೧೧]

ಹೆತ್ತವರಲ್ಲಿ ಒಡಹುಟ್ಟಿದವರಲ್ಲಿ ಹೇಳಿಕೊಳ್ಳಲಾಗದಿದ್ದನ್ನು ತನ್ನ ಗೆಳತೆಯ ಹತ್ತಿರ ಹೇಳಿಕೊಳ್ಳಲು ಹೋಗುತ್ತಾಳೆ. ಗೆಳತಿಯಿಂದಾದರೂ ತನ್ನ ದುಃಖಕ್ಕೆ ಪರಿಹಾರ ಸಿಕ್ಕೀತೆಂದು ಹೋದರೆ ಭಾಗೀರತಿಯನ್ನು ಕಂಡಹಗೆಳತಿಯೂ ಎಂದಿಲ್ಲ ಭಾಗೀರತಿ ಇಂದ್ಯಾಕ ಈ ಅಳುವು? ಎನ್ನುತ್ತಾಳೆ. ಬಹುಶಃ ಗೆಳತಿಗೆ ವಿಷಯ ಮೊದಲೇ ತಿಳಿದಂತಿದೆ. ಆಕೆಯ ಪ್ರಶ್ನೆ, ಇಂದ್ಯಾಕೆ ಬಂದೆ ಎಂದು ಕೇಳದೆ ಇಂದ್ಯಾಕ ಈ ಅಳುವು

ಎನ್ನುವಾಗಿನ ಮಾತಿನ ಧಾಟಿ ಭಾಗೀರತಿಗೆ ಧೈರ್ಯ ತುಂಬುವಂತಿದೆ. ಪಾಪ ಏನೂ ಅರಿಯದ ಭಾಗೀರತಿ ಅಂಜಿ 'ಹೇಳಲೆ ಗೆಳತಿ' ಅಳುಕಿ 'ಹೇಳಲೇ ಗೆಳತಿ?' ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡತಾರಂತ!' ಎನ್ನುತ್ತಾಳೆ 'ಕೊಟ್ಟರೆ ಕೊಡಲೇಳು ಇಟ್ಹಾಂಗ ಇರಬೇಕು!' ಎಂದು ದೃಢವಾಗಿ ಹೇಳುಯತ್ತಾಳೆ. ಗಂಡನ ಮನೆಯನ್ನ ಸಮಾಜವನ್ನ ಸರಿಯಾಗಿ ಅರ್ಥಮಾಡಿಕೊಂಡಿದ್ದಾಳೆ. ಹೆಣ್ಣೆಂದರೆ ಅಷ್ಟೇ ಗಂಡನ ಮನೆಯವರ ತಾಳಕ್ಕೆ ತಕ್ಕಂತೆ ಕುಣಿಯುವವರು ಅವರು ಹೇಳಿದಂತೆ ಕೇಳಬೇಕು. ಸಮಷ್ಟಿ ಹಿತವನ್ನು ಬಯಸಿ ಆತ್ಮಾರ್ಪಣೆಗೆ ಸಿದ್ಧವಾಗುವುದೊಂದೇ ಮಾರ್ಗವೇ ಹೊರತು ವೈಯಕ್ತಿಕ ನಿರ್ಣಯಗಳಿಗೆ ಬೆಲೆಯಿಲ್ಲ. ಇದನ್ನರಿತಿದ್ದರಿಂದಲೇ ಗೆಳತಿ ಹೇಳುವ ಮಾತು ನಿಷ್ಠೂರವಾಗಿದೆ ಎನಿಸಿದರೂ ಅವಳ ಮಾತು ಕಟುಸತ್ಯ. ಈ ವಿಷಯದಲ್ಲಿ ಭಾಗೀರತಿಗೆ ಸಹಾಯ ಮಾಡುವಲ್ಲಿ ಗೆಳತಿಯೂ ಅಸಹಾಯಕಳೇ, ಭಾಗೀರತಿ ತೌರಿನವರ ಗೆಳತಿಯ ಅಸಹಾಯಕತೆಯನ್ನ ಅರಿತುಕೊಂಡು 'ಕೆರೆಗೆ ಹಾರ' ವಾಗಲು ಮಾನಸಿಕವಾಗಿ ಸಿದ್ಧವಾದಳು. ಎಷ್ಟೇ ದೃಢ ಮನಸ್ಕಳಂತೆ ಸಿದ್ಧಳಾದರೂ ಇದು ಬಲಿಯೇ ಹೊರತು ತ್ಯಾಗವಲ್ಲ ಎಂಬ ಸತ್ಯ ನಮ್ಮ ಹೃಯದವನ್ನು ಕುಟುಕುತ್ತದೆ. ಸಮಸ್ತ ಹಿತಕ್ಕೆ ಸ್ವ ಇಚ್ಛೆಯಿಂದ ಆತ್ಮಾರ್ಪಣ ಮಾಡಿಕೊಳ್ಳುವುದು ತ್ಯಾಗವಾದರೆ, ಬಲವಂತವಾಗಿ ಒಪ್ಪಿ ಒಳಗಾಗುವುದು ಬಲಿ ಎನಿಸುತ್ತದೆ. ಭಾಗೀರತಿಯ ಮನಸ್ಸಿನ ತಾಕಲಾಟವನ್ನು ಇಷ್ಟಕ್ಕೇ ನಿಲ್ಲಿಸದೆ ಮುಂದಿನ ಘಟ್ಟಕ್ಕೆ ಮುಂದುವರಿಯುತ್ತದೆ.

ಭಾಗೀರತಿ ಹೀಗೆ ಸಂಯಮದಿಂದ ಎಲ್ಲವನ್ನು ನುಂಗಿಕೊಂಡಿದ್ದರೂ ಅವಳ ದುಃಖ ಅವಳನ್ನು ಮೀರಿ ವ್ಯಕ್ತವಾಗುತ್ತದೆ. ಅತ್ತೆ ಮಾವ 'ಎಂದಿಲ್ಲದ ಭಾಗೀರತಿ ಇಂದ್ಯಾರ ಕಣ್ಣೀರು ?' ಎಂದು ಕೇಳಿದಾಗ ಭಾಗೀರತಿ ತನ್ನ ನೋವಿಗೆ ಸಂಕಟಕ್ಕೆ ಯಾವ ಪ್ರಯೋಜನವೂ ಇಲ್ಲ ಎಂದು ತಿಳಿದು ಹಾರಿಕೆಯ ಉತ್ತರ ನೀಡುತ್ತಾಳೆ. ತನ್ನ ಒಳಗಿನ ಮಾತನ್ನು ಅದುಮಿಡುತ್ತಾಳೆ. 'ಬ್ಯಾಳ್ಯಾಗಿನ ಹಳ್ಳ ಬಂದು ಕಣ್ಣಾಗೆರಚಿದವು' ಎಂದು ಹೇಳುತ್ತಾಳೆ. ಭಾಗೀರತಿಯ ದುಃಖ ಇಷ್ಟು ಆಳವಾಗಿದೆಯೆಂದು ಯಾರೂ ತಾನೆ ಅಳೆಯಲು ಸಾಧ್ಯ ? 'ಕೆರೆಗೆ ಹಾರ'ವ ಕೊಡುವ ದಿನ ಬಂದೇ ಬಿಟ್ಟಿತು ಅದಕ್ಕೆ ಗಂಗವ್ವನ ಪೂಜೆಗೆ ಸಕಲ ಸಿದ್ಧತೆಗಳು ನಡೆದಿವೆ. ಜಳಕ ಮಾಡಬೇಕು ಪೂಜೆಗೆ ಸಿದ್ಧರಾಬೇಕು. ಆದರೆ ಮೆನಯಲ್ಲಿ ಎಲ್ಲರಿಗೂ ವಿಷಯ

ಗೊತ್ತಿದೆ ಹಾಗಾಗಿ ಜಳಕ ಮಾಡಲಿಕ್ಕೆ ಯಾರೂ ಮುಂದಾಗುವುದಿಲ್ಲ. ಭಾಗೀರತಿ ವಿಷಯವನ್ನು ಸೂಕ್ಷ್ಮವಾಗಿ ತಿಳಿದುಕೊಂಡವಳು. ಇದಕ್ಕೆ ತಾನೇ ಸಿದ್ಧಳಾಗಬೇಕೆಂದು ಅರಿತು ಜಳಕ ಮಾಡಲು ಮುಂದಾಗುತ್ತಾಳೆ. ಗಂಗವ್ವನ ಪೂಜೆ ಸಾಂಗವಾಗಿ ನೆರವೇರುತ್ತದೆ. ಕೊನೆಯಲ್ಲಿ ಉಳಿದದ್ದನ್ನೆಲ್ಲ ತುಂಬಿಕೊಂಡು ಬಂಗಾರದ ಬಟ್ಟಲನ್ನು ಉದ್ದೇಶಪೂರ್ವಕವಾಗಿ ಮರೆತು ಬರುವುದು. ಅದನ್ನು ತರಲು 'ಗಂಗವ್ವ ನೀ ಹೋಗ ! 'ಗವರವ್ವ ನೀ ಹೋಗ !' ಅದಕ್ಕೆ ಅವರೆಲ್ಲ 'ನಾವೊಲ್ಲೆ' 'ನಾವೊಲ್ಲೆ' ಎನ್ನುವುದು ಇವೆಲ್ಲ ಉದ್ದೇಶಪೂರ್ವಕ ಸಕಲ ಸಿದ್ಧತೆಗಳು, ಭಾಗೀರತಿ ಇದು ತನ್ನ ಕೆಲಸವೆಂದು ಭಾವಿಸಿ

'ಸಣ್ಣ ಸೊಸಿ ಭಾಗೀರತಿ ಬಿರಿಬಿರಿ ನಡೆದಾಳು,
ಬಿರಿಬಿರಿ ಹೋದಳು ಬಂಗಾರ ಬಟ್ಲ ತಗೊಂಡಳು ॥'

ಹೀಗೆ ಭಾಗೀರತಿ 'ಬಿರಿ ಬಿರಿ' ಹೋಗುವುದು ಯಾವ ಪ್ರತಿಕ್ರಿಯೆಯನ್ನು ಪ್ರತಿಭಟನೆಯನ್ನು ವ್ಯಕ್ತಪಡಿಸಲಾಗದಿರುವುದನ್ನು ಸೂಚಿಸುತ್ತದೆ. ಅಮಾಯಕಳಾದ ಭಾಗೀರತಿ ಒಂದೊಂದೆ ಮೆಟ್ಟಿಲೇರುತ್ತ ಏರುತ್ತಾ ಎಲ್ಲರ ಮುಂದೆ ಹೀಗೆ ನೀರಲ್ಲಿ ನೀರಾಗಿ ಹೋಗುವುದು ಹೃದಯ ವಿದ್ರಾವಕ ಸನ್ನಿವೇಶ.

ಊರ ಗೌಡ ಊರಿಗೆಲ್ಲ ನ್ಯಾಯವೊದಗಿಸುವವನು ಪರಮನೆಯ ಹೆಣ್ಣನ್ನು ಹೀಗೆ ಅನ್ಯಾಯವಾಗಿ 'ಕೆರೆಗೆ ಹಾರ' ವಾಗಿಸುವುದು ಅನ್ಯಾಯ. ಊರಿಗೆ ಹಿತವನ್ನು ಬಯಸುವವನು ತನ್ನ ಮಗಳನ್ನೋ ಇಲ್ಲವೇ ತನ್ನ ಹೆಂಡತಿಯನ್ನೋ, ಮಗನನ್ನೋ ಕೊನೆಗೆ ತನ್ನನ್ನೇ ಬಲಿಕೊಟ್ಟುಕೊಳ್ಳಬಹುದಿತ್ತು. ಆದರೆ ಇಲ್ಲಿ ಗೌಡ ಜೋಯಿಸರ ಮಾತಿಗೆ ಕಟ್ಟುಬಿದ್ದವನು. ಜೋಯಿಸ ಹಿರಿಸೊಸೆಯನ್ನು ಬಲಿಕೇಳಿದ್ದು, ಆದರೆ ಗೌಡ ಬಲಿಕೊಟ್ಟಿದ್ದು ಕಿರಿಸೊಸಿಯನ್ನು 'ಹಿರಿಸೊಸೆಯನ್ನು ಕೊಟ್ಟರೆ ಹಿರಿತನಕ ಯಾರಿಲ್ಲ' ಎಂದು ಭಾವಿಸುವುದು ಸ್ವಾರ್ಥ ಭಾಗೀರತಿ ಮುಗ್ಧ ಹೆಣ್ಣು, ಅಮಾಯಕಳು. ಅಷ್ಟೇ ಅಲ್ಲ ಗಂಡ ದಂಡಿನಲ್ಲಿದ್ದಾನೆ. ಆತ ಜೀವಂತ ಬಂದರೆ ಮತ್ತೊಂದು ಮದುವೆ ಮಾಡಿಸಬಹುದು, ಇಲ್ಲ ಒಂದು ವೇಳೆ ದಂಡಿನಲ್ಲಿ ಸತ್ತುಹೋದರೆ ಭಾಗೀರತಿಗೆ ದಿಕ್ಕಿಲ್ಲ ಇದು ಭಾಗೀರತಿಯ ಮನಸ್ಸಿಗೂ ಬಂದಿರಬಹುದು, ಯಾವುದನ್ನು ಹೇಳಿಕೊಳ್ಳಲಾರದೆ ವಿಲಿ ವಿಲಿ

ಒಪ್ಪಾಡದವಳು. ಬದುಕುವ ಆಸೆಯಿದ್ದರೂ ಬಲಿಗೆ ಒಪ್ಪಲೇಬೇಕಾಯಿತು, ಬಲಿಯಾದಳು ಭಾಗೀರತಿ, ನೀರು ಬಂದೇ ಬಿಟ್ಟಿತು, ಬಾಗೀರತಿ ಎಲ್ಲರ ಕಣ್ಣಲ್ಲಿ ಭಾಗ್ಯದೇವತೆಯಾಗಿ ಚಿರಸ್ಥಾಯಿಯಾದಳು.

ಭಾಗೀರತಿಯಂತೆ ಕೆರೆಗೆ ಹಾರವಾದವರು 'ಮದಗದ ಕೆಂಚವ್ವ ಹಾಗೂ ಹುಳಿಯಾರು ಕೆಂಚವ್ವ' ಇವರಿಬ್ಬರ ದುಃಖವೂ ಭಾಗೀರತಿಯ ದುಃಖದಿಂದ ಬೇರೆಯಾಗಿಲ್ಲ. ಮದಗದ ಕೆಂಚವ್ವ ಕಥನದಲ್ಲಿ 'ಮಲ್ಲನ ಗೌಡ' ಕಟ್ಟಿಸಿದ ಕೆರೆಯಲ್ಲಿ ನೀರಿಲ್ಲ, ಒಂದು ಸೋಜಿಗವೆಂದರೆ ಪಂಚಾಂಗವಾಗಲೀ, ಜೋಯಿಸರಾಗಲಿ ಸೊಸೆಯನ್ನು ಹಾರಕೊಡುವಂತೆ ಹೇಳಲಿಲ್ಲ. ಇಲ್ಲಿ ಕನಸಾದದ್ದು 'ಒಡ್ಡರ ಗೌಡನಿಗೆ'. ಕೆರೆ ಕೆಂಚವ್ವನನ್ನು ಕೇಳಿತೆಂದು ತನಗೆ ಸ್ವಪ್ನವಾಯಿತೆಂದು ಬಂದು ಹೇಳುತ್ತಾನೆ. ಬರೀ ಯಾರೋ ಮೂರನೇ ವ್ಯಕ್ತಿಗೆ ಆದ ಸ್ವಪ್ನದ ಮೇಲೆ ನಂಬಿಕೆ ಇಟ್ಟು ಕೆಂಚವ್ವನ ಮಾವ ಮಲ್ಲನ ಗೌಡ ಸೊಸೆಯನ್ನು ಬಲಿಕೊಡಲು ಸಿದ್ಧನಾಗುತ್ತಾನೆ. ಮನೆಯಲ್ಲಿದ್ದ ಮಗನಿಗೆ ವಿಷಯ ತಿಳಿಸದೇ, ತಿಳಿಸಿದರೆ ಮುಂದಿನ ಕೆಲಸಕ್ಕೆ ಪ್ರಮಾದವಾಗಬಹುದೆಂದು ತಿಳಿದು ಕೆರೆ ಕಟ್ಟಿಸಲು ಹಣ ಸಾಲದೆಂದು ನೀನು ಮುತ್ತು ಹವಳದ ವ್ಯಾಪಾರಕ್ಕೆ ಹೋಗಬೇಕೆಂದು ಒತ್ತಾಯಿಸಿ ಕಳಿಸುತ್ತಾನೆ.

ಮಾವನ ಮನೋ ಇಂಗಿತವನ್ನರಿತ ಮದಗದ ಕೆಂಚವ್ವ ಗಂಡನಿಗೆ ವಿಷಯವನ್ನು ನೇರವಾಗಿ ತಿಳಿಸಲಾರದೆ, ತನಗಾಗುವ ಅನ್ಯಾಯಕ್ಕೆ ನ್ಯಾಯಕೇಳಲಾರದೆ ವ್ಯಾಪಾರಕ್ಕೆ ಹೊರಟ ಗಂಡನನ್ನು ಹೋಗಬೇಡಿರೆಂದು ತಡೆಯುತ್ತಾಳೆ. ಮುಂದಿನ ಅನಾಹುತವನ್ನು ಅರಿಯಲಾರದ ಗಂಡ ಬಸವೇಗೌಡ ಹೆಂಡತಿಯನ್ನು ಸಮಾಧಾನ ಪಡಿಸಿ ವ್ಯಾಪಾರಕ್ಕೆ ಹೊರಟೇ ಹೋಗುತ್ತಾನೆ. ಅಸಹಾಯಕಳಾದ ಕೆಂಚವ್ವ ಧೈರ್ಯಗೆಡದೆ ಮುಂದಿನ ಕಾರ್ಯದ ಬಗ್ಗೆ ಯೋಚಿಸುತ್ತಾಳೆ. ಮುಂದೆ ತನ್ನ ಮಗುವಿಗೆ ದಿಕ್ಕಾಗಲೆಂದು ತನ್ನ ತಂಗಿ ಮರಿಕೆಂಚವ್ವನಿಗೆ ವೀಳ್ಯ ಕೊಟ್ಟು ಬರಲು ತವರಿಗೆ ಹೋಗುತ್ತಾಳೆ. ಉತ್ತರದೇವಿಗೆ, ಭಾಗೀರತಿಗೆ ಆದಂತಹ ಆದರವೇ ಇವಳಿಗೂ ಆಗುತ್ತದೆ. ಕೆಂಚವ್ವ ಯಾರಲ್ಲೂ ತನ್ನ ದುಃಖವನ್ನು ತೋಡಿಕೊಳ್ಳದೆ, ನ್ಯಾಯವನ್ನು ಕೇಳದೆ, ಪ್ರತಿಭಟಿಸಲೂ ಆಗದೆ ಮದಗದ ಕೆರೆಗೆ ಆಹುತಿಯಾಗುತ್ತಾಳೆ. ವ್ಯಾಪಾರದಿಂದ ಬಂದ ಗಂಡನಿಗೆ ಸಮಾಧಾನಪಡಿಸಿ ತನ್ನ ತಂಗಿಯನ್ನು ವಿವಾಹವಾಗುವಂತೆ ಒತ್ತಾಯಿಸಿ, ತವರಿನವರು ಒಲ್ಲೆ ಎಂದಾಗ ತಾನೇ ಕನಸಿನಲ್ಲಿ ಹೋಗಿ ಒತ್ತಾಯಿಸಿ ಮದುವೆ ಮಾಡಿಸುವುದು ಎಂಥ

ವಿಪರ್ಯಾಸ. ಅದೇ ಗಂಡನಾಗಿದ್ದರೆ ಈ ರೀತಿಯ ಆಲೋಚನೆ ಹೆಂಡತಿಯ ಬಗ್ಗೆ ಮಾಡುತ್ತಿದ್ದನೆ ? ಎಲ್ಲೂ ಅಂಥ ಪ್ರಸಂಗಗಳೇ ಬರುವುದಿಲ್ಲ.

ಇಲ್ಲಿ ಸ್ತ್ರೀಗೆ ಸ್ವಂತಿಕೆ ಇಲ್ಲ. ಸ್ವತಂತ್ರ ವ್ಯಕ್ತಿತ್ವವಾಗಲೀ, ಸ್ವಂತ ಅಭಿಪ್ರಾಯವಾಗಲೀ ಭಾವನೆಗಳಾಗಲೀ ಇಲ್ಲ. ಆ ಭಾವನೆಗಳಿಗೆ ಬೆಲೆ ಮೊದಲೇ ಇಲ್ಲ. ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಲಾಗುತ್ತದೆ. ಅವಳ ಮನಸ್ಸಿನ ಒಳತೋಟಿಯ ಉಲ್ಲೇಖವಿಲ್ಲ. ಸದಾ ಇನ್ನೊಬ್ಬರ ಪೀಡನೆಗೆ ಸುಖಕ್ಕೆ ಇವಳ ಸುಖ-ಸಂತೋಷ ಬಲಿಯಾಗಬೇಕು. ಅನ್ಯಾಯದ ವಿರುದ್ಧ ಯಾವ ದನಿಯೂ ಇಲ್ಲ. ಬಂದ ಕಷ್ಟವೆಲ್ಲ ತನ್ನ ಕರ್ಮಫಲವೆಂದು ಅನುಭವಿಸುತ್ತಾಳೆ.[೧೩]

ಇನ್ನು ಹುಲಿಯಾರು ಕೆಂಚಮ್ಮನ ಕತೆಯೂ ಇದೇ ಬಗೆಯದು. ತಾನು ಮಾಡಿಕೊಂಡ ಹರಕೆಯಂತೆ 3 ತಿಂಗಳ ಬಾಣಂತಿ ಹುಲಿಯಾರು ಕೆಂಚಮ್ಮ ಗಂಗೆಯನ್ನು ಪೂಜಿಸಿ ಬರಲು ಹೋಗುತ್ತಾಳೆ. ಪೂಜೆ ಮಾಡುವ ಹೊತ್ತಿಗೆ ಏರಿಯಕಲ್ಲು ಸಡಿಲಾಗುತ್ತವೆ. ಸೂಕ್ಷ್ಮಮತಿಯಾದ ಕೆಂಚಮ್ಮನಿಗೆ ಏರಿಸಡಿಲಾದದ್ದರ ಉದ್ದೇಶ ತಿಳಿದು ಕಣ್ಣರು ಮಿಂಚುತ್ತದೆ. ಅಲ್ಲಿಗೆ ಬಂದ ಮಾವ ಸೊಸೆಯ ಆಂತರ್ಯವನ್ನು ಕೆರೆ ಸಡಿಲಾದದ್ದಕ್ಕೆ ಮುಂದೆ ತನ್ನ ಕಾರ್ಯವೇನು ಎಂಬುದನ್ನು ಅರಿತುಕೊಂಡು ಕೆಂಚಮ್ಮನಿಗೆ

ಕಣ್ಣೀರು ಸೂಸ್ಯಾಡಿ ಅಳುಬೇಡ
ಏರಿ ಕಟ್ಟಿಸುವೆ ಏರಿಯನಿಲ್ಲಿಸುವೆ
ಬಾವಿಗೆ ಬೊಮ್ಮದೇವರ ಕರಿಸುವ - ಕೆಂಚವ್ವ
ಬಾಲ ಎದ್ದನು ಮನೆಗೋಡ್ಗೆ[೧೪]

ಎಂದು ಸೊಸೆಯನ್ನು ಮನೆಗೆ ಕಳಿಸುತ್ತಾನೆ. ಕೆಂಚಮ್ಮ ಬಹಳ ಜಾಣೆ ತಾನೇ ಇದಕ್ಕೆ ಬಲಿಯಾಗಬೇಕಾಗಿರುವವಳು ಎಂದು ತಿಳಿದು ಗಂಡನಿಗೂ ಹೇಳದೆ ತನ್ನ ಅಸಮ್ಮತಿಯನ್ನು ಸೂಚಿಸದೆ ತಾನೇ ಕೆರೆಗೆ ಹಾರವಾಗಲು ಸಿದ್ಧಳಾಗುತ್ತಾಳೆ. ತನ್ನ ಬಲಿಯನ್ನು ನಿಲ್ಲಿಸಲು ಗಂಡನಿಂದಲೂ ಸಾಧ್ಯವಿಲ್ಲ ಎಂಬುದನ್ನು ತಿಳಿದು ಗಂಡನನ್ನು ಏನೂ ಪ್ರಶ್ನಿಸದೆ ತನ್ನ ಗಂಡನಿಂದಲೇ ತವರಿಗೆ ಓಲೆ ಬರೆಸುತ್ತಾಳೆ.

ಮಗಳ ಸಾವಿನ ಸೂಚನೆಯಂತಿದ್ದ ಓಲೆಯನ್ನು ಓದಿಕೊಂಡು ಕತ್ತಿ ಕಠಾರಿ ಹಿಡಿದು ಬರುತ್ತಾರೆ. ಆದರೆ ಕೆಂಚಮ್ಮ ತವರಿನವರ ಆಕ್ರೋಶ ತನ್ನ ಮೇಲಿನ ಮಮಕಾರವನ್ನು ತಿಳಿದು ಮುಂದೆ ಅನಾಹುತವಾಗುತ್ತದೆಂದು ತಿಳಿದು ತನ್ನನ್ನು ತನ್ನ ಮಾವನ ಮನೆಯವರು ಬಲಿಕೊಡುವುದನ್ನು ಎಲ್ಲೂ ಹೇಳದೆ,

ಹೆಣ್ಣ ಹಡೆದರೆ ಕೊಡುತೀನಿ ಗಂಡ ಹಡೆದರೆ ಕೊಡಿತೀನಿ
ಬಾಸೆ ಮಾಡೀದ ಬಗೆ ಕಾಣ್ಣೆ - ಚೆನ್ನವ್ವ
ಹುಳಿಯಾರು ದೇವಗನ್ನೇರು ಒಲಿದವರೆ - ಚೆನ್ನಾವ್ವ
ಹೋಗುತೀನಿ ಹುಳಿಯಾರ ಒಡವೀಗೆ [೧೫]

ತನಗೆ ಮಕ್ಕಳಾದರೆ ಹುಳಿಯಾರು ಕೆರೆಗೆ ಹಾರವಾಗುತ್ತೇವೆಂದು ಹರಕೆ ಹೊತ್ತಿದ್ದೆ ಆ ಹರಕೆಯಂತೆ ತಾನೀಗ ಮಗುವಿನ ಸಮೇತ ಹಾರವಾಗುತ್ತಿದ್ದೇನೆಂದು ಹೇಳಿ ಮಗುವನ್ನು ಹೊತ್ತುಕೊಂಡು ನೀರಿಗೆ ಒಂದೊಂದೇ ಮೆಟ್ಟಲು ಇಳಿಯುತ್ತಾಳೆ. ತನ್ನ ಆಭರಣಗಳನ್ನು ಕಳಚಿ ಅತ್ತೆಯ ಕೈಗೆ ಒಂದೊಂದಾಗಿ ಕೊಡುತ್ತಾ 'ಮುಂದೆ ಬರುವವಳಿಗೆ ಮಡಗವ್ವ ' ಎಂದು ಹೇಳುತ್ತಾ ಮಗುವನ್ನು ತೋರಿಸುತ್ತಾ ತನ್ನ ಗಂಡನಿಗೆ ಚಿಕ್ಕಪ್ಪನ ಮಗಳು ಮರಿಗೆಂಚಿಯನ್ನು ಲಗ್ನ ಮಾಡಿಕೊಳ್ಳುವಂತೆ ಹೇಳಿ 'ಕೆರೆಯಲ್ಲಿ ಮುಳುಗಿ ಹೋಗುತ್ತಾಳೆ '. ಹೆಣ್ಣು ಅಸಹಾಯಕಳು ಎಂಬ ಸತ್ಯವನ್ನು ಇಂಥ ಕತೆಗಳು ದಟ್ಟವಾಗಿ ಚಿತ್ರಿಸುತ್ತಿವೆ. ಹೀಗೆಯೇ ಕೆರೆಗೆ ಬಲಿಯಾಗುವವರಂತೆಯೇ, 'ಸತಿ'ಯಾಗಿ ಆತ್ಮಾರ್ಪಣೆ ಮಾಡಿಕೊಳ್ಳುವುದು ಹೆಣ್ಣಿನ ಬಾಳಿನಲ್ಲಿ ನಡೆದುಹೋದ ದುರಂತ ಘಟನೆ. ಅವರೆಲ್ಲ ಉರಿಗೆ ತುತ್ತಾಗಿ ಸತ್ತ ದುರ್ದೈವಿಗಳು. ಸಾಮಾಜಿಕ ಕಟ್ಟು ಪಾಡುಗಳ ಹೆಸರಿನಲ್ಲಿ ಬಲಿಯಾದ ಅಬಲೆಯರು, ಬದುಕುವುದಕ್ಕಿಂತ ಸಾವೇ ಮೇಲು ಎನ್ನುವಂತಹ ಸನ್ನಿವೇಶದ ಸೃಷ್ಟಿಯೂ ಹೆಣ್ಣಿನ ಆತ್ಮಾರ್ಪಣೆಗೆ ಕಾರಣವೆನಿಸುತ್ತದೆ [೧೬]

ಸಮಾಜದ ಹಿತಕ್ಕಾಗಿ ಹೆಣ್ಣೊಬ್ಬಳು ಬಲಿಯಾಗುವುದು ಹೆಣ್ಣಿನ ಶೋಷಣೆಯ ಒಂದು ಮುಖವಾದರೆ, ಗಂಡ ಸತ್ತಾಗ ಹೆಣ್ಣು ಸಮಾಜದಲ್ಲಿ ಅಸಹಾಯಕಳಾಗಿ ಎಲ್ಲರ ಕಣ್ಣಲ್ಲಿ ಕೀಳಾಗಿ ಅಪವಿತ್ರಳಾಗಿ, ಪತಿತೆಯಾಗಿ ಜೀವನವಿಡೀ ದುಃಖಿಸುತ್ತಾ ಬದುಕುವುದು ಇನ್ನೊಂದು ಬಗೆಯದು.

ಭಾರತದ ಈ ಅನಿಷ್ಟ ಪದ್ಧತಿಯನ್ನು ಪ್ರತಿಭಟಿಸಿ ನಿಂತ ಹೆಣ್ಣಿನ ಸ್ಥಿತಿ ಏನಾಗುತ್ತಿತ್ತೆಂಬುದನ್ನು ಪ್ರವಾಸಿಯೊಬ್ಬ ಹೀಗೆ ವರ್ಣಿಸಿದ್ದಾನೆ. 'ಸಹಗಮನ ಮಾಡದ ಹೆಂಗಸರನ್ನು ಬಹಳ ಅಗೌರವದಿಂದ ಕಾಣುತ್ತಾರೆ ಅವರ ತಲೆಯನ್ನು ಬೋಳಿಸಿ ಮನೆತನಕ್ಕೆ ಅಗೌರವವೆಂದು ಹೊರಗೆ ಅಟ್ಟುತ್ತಾರೆ. ಹೀಗೆ ಮನೆಯಿಂದ ಅಟ್ಟಲ್ಪಟ್ಟ ವಿಧವೆಯರು ದಿಕ್ಕಿಲ್ಲದೆ ಅಲೆಯುತ್ತಾರೆ. ಅತಿ ಚಿಕ್ಕವಯಸ್ಸಿನ ವಿಧವೆಯರ ಬಗ್ಗೆ ದಯಾ ದಾಕ್ಷಿಣ್ಯ ತೋರಿಸಿದ ಪಕ್ಷದಲ್ಲಿ ಅವರನ್ನು ದೇವಸ್ಥಾನಗಳಿಗೆ ಕಳುಹಿಸಿ, ಅಲ್ಲಿ ದೇವಸ್ಥಾನಕ್ಕಾಗಿ ಹಣಗಳಿಸಲು ದೇವದಾಸಿಯರಾಗಿ ಬಿಡುತ್ತಾರೆ.[೧೭] ಇಂಥ ದುಃಖಕ್ಕೆ ಈಡಾಗುವುದಕ್ಕಿಂತ ಸತಿ ಹೋಗುವುದೇ ಲೇಸೆಂದುಕೊಂಡು ಗಂಡನೊಂದಿಗೆ ಧಗಧಗಿಸುವ ಬೆಂಕಿಗೆ ತಮ್ಮನ್ನು ಅರ್ಪಿಸಿಕೊಂಡು ಮಹಾಸತಿಯೆನಿಸಿಕೊಂಡವರು ಲೆಕ್ಕವಿಲ್ಲದಷ್ಟು.

ಸತಿ-ಸಹಗಮನ ಪದ್ಧತಿ ಒಂದು ಕಾಲದಲ್ಲಿ ಪ್ರಚಲಿತವಿದ್ದ ಧಾರ್ಮಿಕ ಆಚರಣೆ. ಗಂಡನನ್ನು ಕಳೆದುಕೊಂಡ ಹೆಣ್ಣು ಗಂಡನ ಶವದೊಂದಿಗೆ ತಾನೂ ಕೆಂಡವೇರಬೇಕಾಗಿತ್ತು. ಅದೇ ಧರ್ಮ ಎಂಬ ನಂಬಿಕೆ ಜನಪದರಲ್ಲಿ ಬೇರೂರಿತ್ತು. ಹೀಗೆ ಕೆಂಡವೇರಿದ ಹೆಣ್ಣಿಗೆ 'ಮಹಾಸತಿ' ಎಂಬ ಬಿರುದು ಕೊಟ್ಟು ಆ ಪದ್ಧತಿಯನ್ನು ವೈಭವೀಕರಿಸಿದರು. ಇಂಥ ಆಚರಣೆಗಳು ಜನಪದ ಕಥನ ಕಾವ್ಯಗಳಲ್ಲಿ ಸಾಕಷ್ಟು ದೊರೆಯುತ್ತವೆ. ಮುಖ್ಯವಾಗಿ ಈರೋಬಿ, ನಾಗವ್ವ ಮತ್ತು ಚಿಕ್ಕೋಳು ಹಿರಿದಿಮ್ಮಿ ಕಥನ ಗೀತೆಗಳಲ್ಲಿ ಗುರುತಿಸಬಹುದು.

ಬಾಣಂತಿ ಈರೋಬಿ ಬಟ್ಟಲಲ್ಲುಣುತ್ತಾಳೆಂದು ಪತಿ ಶೆಟ್ಟಿ ಶಂಕರರಾಯ ಚಿನ್ನದ ಹರಿವಾಣವನ್ನು ತರಲು ಗಟ್ಟುದ ಕೆಳಗೆ ಹೋದವನು ದುರ್ಮರಣಕ್ಕೆ ಈಡಾಗುತ್ತಾನೆ. ಪುಟ್ಟ ಈರೋಬಿ ಗಂಡನ ಸಾವಿನ ಸುದ್ದಿಯನ್ನು ಕೇಳಿಯೂ ತನ್ನ ವೀರ ಗಂಡ ಮಡಿದಿರಲಾರನೆಂದೇ ಭಾವಿಸಿ ಅವನ ಸಾವಿನ ಗುರುತು ಬರುವವರೆಗೂ ನಂಬದೆ ಆತ್ಮಸ್ಥೈರ್ಯದಿಂದ

ಸತ್ತ ಸುದ್ದಿ ಬರಲಿ ನೆತರದರಬಿ ಬರಲಿ
ಕಿತ್ತುಳ್ಳಿ ಬರಲಿ ಗುರತೀಗೆ - ಸೋಮವಾರದ
ಹೊತನಂತೆ ಕೊಂಡ ಹೋಗುತೀನಿ[೧೮]

ಎಂದು ನಿರ್ಧರಿಸಿ ಕಾದವಳು. ಕೊನೆಗೂ ಸಾವಿನ ಸುದ್ದಿ ಬಂದೇ ಬಿಟ್ಟಿತು.

ಸತ್ತ ಸುದ್ದಿ ಬಂತು ನೆತ್ತರದರಬಿ ಬಂತು
ಕತ್ತಿ ಬಂತು ಅವನ ಗುರುತೀಗೆ - ಈರೋಬಿ
ಹೆತ್ತೋರ್‍ರಿಗೇಳು ನಿಲುಭಾರ [೧೯]

ಹೀಗೆ ಬಂದ ಗುರುತುಗಳು ತನ್ನ ಗಂಡನವೆಂದೇ ನಿಶ್ಚಿತವಾಗುತ್ತವೆ. ಯಾವ ದುಃಖವನ್ನು ವ್ಯಕ್ತಪಡಿಸದೆ ತನ್ನ ನಿರ್ಧಾರದಂತೆ ಕೊಂಡವೇರಲು ಅಣಿ ಮಾಡಿಕೊಳ್ಳುತ್ತಾಳೆ. ಅವಳ ಅನಂತ ದುಃಖ ಜೀವನವಿಡೀ ಗಂಡನನ್ನು ಕಳೆದುಕೊಂಡು ವಿಧವೆಯಾಗಿ ಸಮಾಜದ ಪರಕೀಯಳೆಂಬ ದೃಷ್ಟಿಗೆ ಬಲಿಯಾಗಿ ಅನುಭವಿಸುವುದನ್ನು ಬಯಸದೆ ಆ ಎಲ್ಲ ದಿನದ ದುಃಖಗಳೂ ಒಂದೇ ದಿನದಲ್ಲಿ ಅದೂ ತನ್ನ ಗಂಡನ ಜೊತೆಯಲ್ಲಿ ಹೋಗುವುದಕ್ಕಿಂತ ಹೆಚ್ಚಿನದೇನನ್ನು ಬಯಸಲಾರಳು. ಇದು ಹೆಣ್ಣಿಗೆ ಸಮಾಜ ಹಾಕಿಕೊಟ್ಟ ಚೌಕಟ್ಟು ಗಂಡನ ಜೊತೆ ಚಿತೆ ಏರಿ ಸತ್ತರೆ ಸಮಾಜ 'ಮಹಾಸತಿ' ಎಂದು ಕೊಂಡಾಡುತ್ತದೆ. ಇದ್ದರೆ ವಿಧವೆ ಎಂಬ ಪಟ್ಟಕಟ್ಟಿ, ಗಂಡ ಸತ್ತ ಮುಂಡೆ ಎಂದು ಹಂಗಿಸಿ ಚಿತ್ರಹಿಂಸೆಗೆ ಗುರಿಮಾಡುತ್ತದೆ. ಇಂಥ ಘೋರವಾದ ನಿರ್ಧಾರಕ್ಕೆ ಬರಲು ಕಾರಣ ವಿಧವೆಯರ ಪಾಡನ್ನು ಕಂಡಂತೆ

ಗಂಡ ಸಾಯೋಕಿಂತ ಮುಂಡ್ಯಾಗೋಕಿಂತ
ಕಂಡೋರ ಮನೆಯ ಕಸನ್ಹಾಕಿ- ಸಾಯೋಕಿಂತ
ಕೊಂಡವನ್ನೋದೆ ಕಡುಲೇಸು [೨೦]

ಈ ರೀತಿಯ ಆತ್ಮಬಲಿದಾನಕ್ಕೆ ಸಿದ್ಧಳಾದವಳು ಸೀರೆ ಉಡಲೂ ಅರಿಯದ ಪುಟ್ಟ ನಾಗವ್ವ. ಈಕೆಗೆ ಇನ್ನೂ ಮದುವೆಯೇ ಆಗಿಲ್ಲ ಚಿಂದಯ್ಯನಿಗೆ ನಾಗವ್ವನ ಮದುವೆ ನಿಶ್ಚಯವಾಗಿ ಮದುವೆ ಸಿದ್ಧತೆ ನಡೆದಿದೆ. ನಾಗವ್ವನಿಗೆ ಬಳೆ ತೊಡಿಸುವ ಶಾಸ್ತ್ರ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅಪಶಕುನಗಳಾತ್ತವೆ. ಮನೆಯವರಿಗೆಲ್ಲ ಆತಂಕ. ಆದರೆ ಅದು ನಿಜವೆಂಬಂತೆ ಮದುವೆಯ ಗಂಡು ಚಿಂದಯ್ಯ ಬೇಡರಿಂದ ಹತನಾಗಿದ್ದಾನೆ. ವಿಷಯ ನಾಗವ್ವ ನ ಮನೆಯವರಿಗೆ ಮುಟ್ಟುತ್ತದೆ. ವಿಷಯ ತಿಳಿದ ನಾಗವ್ವ ಚಿಂದಯ್ಯನೇ ತನ್ನ ಗಂಡನಾಗಬೇಕಿದ್ದವನು ಈಗ ಸತ್ತರೇನು ? ಅವನೇ ತನ್ನ ಗಂಡ ಎಂದು ತಿಳಿದು

ಚೆಂದಯ್ಯನೇ ಸತ್ತ ಮೇಲೆ ಇನ್ನು ತಾನು ಬದುಕಿದ್ದೇನೆಂದುಕೊಂಡು ಕೆಂಡವೇರಲು ಸಿದ್ಧಳಾಗುತ್ತಾಳೆ. ಯಾರು ಎಷ್ಟೇ ಸಮಾಧಾನ ಮಾಡಿದರೂ ತನ್ನ ನಿರ್ಧಾರ ಬದಲಾಯಿಸುವುದಿಲ್ಲ. ಇಂಥದ್ದೇ ಕಣ್ಣೀರಿನ ಕಥೆ ಚಿಕ್ಕೋಳು ಹಿರಿದಿಮ್ಮಿಯದು. ಏಳು ಜನ ಅಣ್ಣಂದಿರ ಮುದ್ದಿನ ತಂಗಿಯಾದ ಹಿರಿದಿಮ್ಮಿ ಮೈನೆರೆದಿದ್ದಾಳೆ. ಸಡಗರದಿಂದ, ಅದ್ದೂರಿಯಿಂದ ಗುಡ್ಲನ್ನ ಹಾಕಿದ್ದಾರೆ. ಗಂಡನ ಮನೆಯವರನ್ನು ಕರೆಸಿ ಸೋಬ್ಲಾವ ಮಾಡಿದ್ದಾರೆ. ಸೋಬ್ಲಾವ ಮಾಡಿ ಒಂಧು ತಿಂಗಳಿಗೆ ಗಂಡನ ಮನಿಗೆ ಹಿರಿದಿಮ್ಮಿಯ ಗಂಡನೊಂದಿಗೆ ಹಿರಿದಿಮ್ಮಿಯನ್ನು ಕಳಿಸಿಕೊಡುತ್ತಾರೆ. ಅನಾಥ ಹುಡುಗನೆಂದು ಮನೆಯಲ್ಲಿಟ್ಟುಕೊಂಡು ಸಾಕಿದ ಬೇಡರ ಬೊಮ್ಮಲಿಂಗನಿಗೆ ಮೊದಲಿನಿಂದಲೂ ಹಿರಿದಿಮ್ಮಿಯನ್ನು ಆಸೆಯ ಕಣ್ಣಿಂದ ನೋಡಿದವನು ಅವಳನ್ನು ಪಡೆಯಬೇಕೆಂದು ಹೊಂಚು ಹಾಕಿದವನು, ಅದಕ್ಕಾಗಿ ಈಗ ಹಿರಿದಿಮ್ಮಿಯ ಹಿಂದೆ ಅವರ ಕಾವಲಿನಂತೆ ನಾಯಿಯೊಂದಿಗೆ ತಾನೂ ಹೋಗುತ್ತಾನೆ. ಮಾರ್ಗಮಧ್ಯದಲ್ಲಿ ಬುತ್ತಿಯ ಉಣಲೆಂದು ಕೂತುಕೊಂಡು ಊಟವ ಮಾಡುವಾಗ ಬೇಡರ ಬೊಮ್ಮಲಿಂಗ ಹಿರಿದಿಮ್ಮಿಯ ಗಂಡನ ತಲೆಯನ್ನು ಕಡಿದುಹಾಕುತ್ತಾನೆ. ಅಚಾನಕವಾಗಿ ನಡೆದ ದುರ್ಘಟನೆಗೆ ಬೆಚ್ಚಿದ ಹಿರಿದಿಮ್ಮಿ ಬೊಮ್ಮಲಿಂಗನ ಮನದಿಂಗಿತವನ್ನು ಅರಿತುಕೊಳ್ಳುತ್ತಾಳೆ. ಅಧೈರ್ಯಗೆಡದೆ ತನ್ನ ಸೇಡನ್ನು ತೀರಿಸಿಕೊಳ್ಳಲು ಅವನು ಮಾಡಿದ ಅಪಕಾರಕ್ಕೆ ಅವನಿಗೂ ತನ್ನ ಗಂಡನ ಗತಿಯನ್ನೇ ಕಾಣಿಸುತ್ತಾಳೆ.

ನೀನೇಯೆ ಗಂಡಕಾಣೆ
ನಾನೇಯ ಹೆಂಡ್ತಿ ಕಾಣೊ। ಸು।ಬೇಡರು ಬೊಮ್ಮಲಿಂಗ।ಸು।
ಬುತ್ತಿಯ ಉಣಬರೊ।ಸು। ಊಟಾಕೆ ನೀಡ್ಯಾಳೆ।ಸು।
ಊಟಾವ ಮಾಡುತಾನೆ।ಸು। ಚಂದಾಯ್ದ ತಕ್ಕೊಂಡು।ಸು।
ಬೇಡರ ಬೊಮ್ಮಲಿಂಗ್ನ।ಸು। ಅವಳು ಕಡಿದೇಯೆ ಬಿಟ್ಟಳು ? [೨೧]

ಹಿರಿದಿಮ್ಮಿಯ ಪತಿಪ್ರೇಮವನ್ನು ಹಾಗೂ ಅವಳು ತೀರಿಸಿಕೊಂಡ ಸೇಡು, ಧೈರ್ಯವನ್ನು ನಿಜಕ್ಕೂ ಮೆಚ್ಚುವಂಥದ್ದು. ಇಷ್ಟು ಮಾಡಿ ಯಾರು ಏನೇ ಹೇಳಿದರೂ ಕೇಳದರೆ ಗಂಡನೊಂದಿಗೆ ಕೊಂಡವೇರುತ್ತಾಳೆ.

ವಯಸ್ಸಿನಲ್ಲಿ ಚಿಕ್ಕವರಾದ ಇವರೆಲ್ಲರೂ ದುರ್ಬಲರೇನಲ್ಲ ಎದುರಿಸಿ ನಿಲ್ಲಬಹುದಾದಷ್ಟು ಬುದ್ಧಿವಂತರು, ಧೈರ್ಯವಂತರೇ ಆದರೆ ಸಮಾಜದ ಕಟ್ಟುಕಟ್ಟಳೆಗಳಿಗೆ, ನಿರ್ಧಾರಗಳಿಗೆ, ಮೂಢನಂಬಿಕೆಗಳಿಗೆ, ಶೋಷಣೆಗೆ ಬಲಿಯಾದವರು. ಒಪ್ಪಿತ ಮೌಲ್ಯಗಳನ್ನು ಒಪ್ಪದೆ ಇರುವುದನ್ನು ವ್ಯಂಗ್ಯ ಕಟುನುಡಿಗಳ ಮೂಲಕ ಇಲ್ಲವೇ ಆತ್ಮಾಹುತಿಯ ಮೂಲಕ, ಹುಚ್ಚು ಆವೇಶಗಳ ಮೂಲಕ ಹೆಣ್ಣು ಕೆಲವೆಡೆ ವ್ಯಕ್ತಪಡಿಸಿದ್ದಾಳೆ. ಗಂಡ ಸತ್ತ ವಿಧವೆಯನ್ನು ಎಷ್ಟು ಹೀನಾಯವಾಗಿ ಕಾಣುತ್ತಿತ್ತೋ ಅದೇ ಹೀನಾಯ ದೃಷ್ಟಿ ಮಕ್ಕಳಾಗದಿದ್ದವರನ್ನೂ ಕಾಣುತ್ತಿತ್ತು. ಇಂಥದ್ದೊಂದು ಹೀನಾಯ ಸ್ಥಿತಿ 'ಹೊನ್ನಮ್ಮ' ನದು.

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡಿಗೆಯ ಎತ್ತು ದುಡಿದಂಗ (ಬಾಳೆಲೆಯ।
ಹಾಸ್ಯುಂಡು ಬೀಸಿ ಒಗೆದಂಗ [೨೪]

ಹೊನ್ನಮ್ಮ ಮಕ್ಕಳಿಗಾಗಿ ಹಂಬಲಿಸುತ್ತಾಳೆ. ಪುಣ್ಯದ ಕೆಲಸಗಳನ್ನು ಮಾಡುತ್ತಾಳೆ, ಬಾವಿ ತೆಗೆಸುತ್ತಾಳೆ, ಕಿತ್ತಲಿ, ಸೀಬೆಯ ಗೀಡ ಹಾಕಿಸುತ್ತಾಳೆ, ಗಂಗವ್ವನ ಪೂಜೆ ಮಾಡುತ್ತಾಳೆ, ಆದರೆ ಈಕೆ ಎಲ್ಲರ ಕಣ್ಣಲ್ಲಿ ಪಾಪಿಯಾಗಿದ್ದಾಳೆ.

'ಬಂಜೆ ಕಟ್ಟಿದ್ದ ಬಾಬಿ।ಸು।
ನಾವು ನೀರ ಕುಡಿದರೆ। ನಾವು ಬಂಜೇರಾಗುತೀವಿ।
ಮಕ್ಕಳು ಬಂಜೇರಾಗುತ್ತಾರೆ। [೨೫]

ಎಂದುಕೊಂಡು ಗೋವುಗಳು ನೀರು ಕುಡಿಯದೆ ಹೋಗುವುದು,

ಹಕ್ಕಿಪಕ್ಷಿ ಬಂದಿನ್ನ। ನಾವು ಹಣ್ಣ ತಿಂದರೆ।
ನಾವು ಬಂಜೆರಾಗುತೀವಿ। ಮಕ್ಕಳು ಬಂಜೆರಾಗುತ್ತಾರೆ। [೨೬]

ಹಂಗಂದು ಗಿಳಿಗಳು ಹಿಂದಕ್ಕೆ ಹೋಗುವುದು,

ಗಂಗವ್ನ ಪೂಜೆಯ। ಮಾಡ್ಯಾಳ ಹೊನ್ನಮ್ಮ।
ಮಾಡಂತಗಳಿಗೇಲಿ। ಗಂಗವ್ನೆ ಬತ್ತೋದ್ಲು [೨೭]

ಹೀಗೆ ಗಂಗೆಯೂ ಬತ್ತಿಹೋಗುವುದು ಹೊನ್ನಮ್ಮನಿಗೆ ಸಹಿಸಲಾರದ ದುಃಖಕ್ಕೆ ಈಡುಮಾಡುವ ಸನ್ನಿವೇಶಗಳು. ಕೇವಲ ಹೊನ್ನಮ್ಮನಿಗಷ್ಟೇ ಅಲ್ಲ ಮಕ್ಕಳಾಗದ ಹೆಣ್ಣುಗಳಿಗೆಲ್ಲ ಇಂಥ ಸನ್ನಿವೇಶಗಳು ಎದುರಾಗುತ್ತವೆ. ಹೆಣ್ಣಿನ ಜನ್ಮವೇ ಪಾಪಿ ಜನ್ಮ, ತಾವು ಹುಟ್ಟಿದ್ದೇ ತಪ್ಪು ಈ ಜನ್ಮ ಯಾಕಾದರು ಕೊಟ್ಟೆಯೋ ಶಿವನೆ ಎಂದುಕೊಂಡು ಹೆಣ್ಣಿನ ಜನ್ಮವನ್ನೇ ಕೀಳೆಂದು ಭಾವಿಸುವುದಕ್ಕೆ, ಹೆಣ್ಣಿನ ಪ್ರಾಬಲ್ಯವನ್ನು ಕುಗ್ಗಿಸಲಿಕ್ಕೆ ಪ್ರಬಲವಾದ ಅಸ್ತ್ರಗಳಾಗಿವೆ. ಹೊನ್ನಮ್ಮನ ಮಕ್ಕಳ ಮೇಲಿನ ಆಸೆ, ಬಯಕೆ ಇಷ್ಟಕ್ಕೆ ಮುಗಿಯಲಿಲ್ಲ. ಅಕ್ಕಂದಿರ ಮಕ್ಕಳನ್ನೆ ತನ್ನ ಮಕ್ಕಳೆಂದು ಮುದ್ದಿಸಲು ಹೋದರೆ, ಸಮಾಜ ನೋಡುವುದಕ್ಕಿಂತ ಹೆಚ್ಚು ಕೀಳಾಗಿ ಹೊನ್ನಮ್ಮನ ಅಕ್ಕಂದಿರೇ ಕೀಳಾಗಿ ನೋಡುವುದು, ನೋವನ್ನು ಕೊಡುವುದು ಶೋಚನೀಯವಾದದ್ದು.

> ನಮ್ಮ ಬಂಜ್ಹೊನ್ನಿ ಬರುತಾಳೆ। ಮಕ್ಕಳ ಮಡಗಲಬೇಕು
> ಬಂಜೆ ತಂದ ತಿಂಡಿ। ಮಕ್ಕಳು ತಿಂದರೆ।
> ನಾವು ಬಂಜೇರು ಆಗುತೀವಿ। ನಮ್ಮ ಮಕ್ಕಳು ಬಂಜೇರಾಗುತ್ತಾರೆ [೨೮]

ಎಂದು ಹೇಳುತ್ತಾ ಮಕ್ಕಳನ್ನು ಕಾಣದಂತೆ ಅಡಗಿಸಿಡುತ್ತಾರೆ. ಅಷ್ಟೇ ಅಲ್ಲ ಒನಕೆಯನ್ನು ತಗೊಂಡು ಕೈಕಾಲು ಮುರಿದು ಕೊರಕಲಿಗೆ ಎಸೆಯುತ್ತಾರೆ. ಹೊನ್ನಮ್ಮನ ಸಿಟ್ಟು, ದುಃಖ 'ಇವರ ವಾಡೇಲಿದ್ದ ಮಕ್ಕಳು ಹುಳುತೇಯ ಹೋಗಲಿ' ಎಂದು ಅಕ್ಕಂದಿರಿಗೆ, ಅವರ ಮಕ್ಕಳಿಗೆ ಹಾಕುವ ಶಾಪದಲ್ಲಿ ವ್ಯಕ್ತವಾಗುತ್ತದೆ, ಅಸಹಾಯಕತೆ ಎದ್ದು ಕಾಣುತ್ತದೆ.

ಹುಟ್ಟಿನಿಂದ ಸಾಯುವವರೆಗೂ ಹೀಗೆ ಒಂದಲ್ಲ ಒಂದುಕಷ್ಟಕ್ಕೆ, ದುಃಖಕ್ಕೆ, ನಿಂದೆಗೆ ಬಲಿಯಾಗುವವಳು ಹೆಣ್ಣೇ. ಇಂಥ ಕಷ್ಟ ಪರಂಪರೆ ಆದಿ ಕಾಲದಿಂದ ಇಂದಿನವರೆಗೂ ಅನೂಚಾನವಾಗಿ ಹರಿದುಕೊಂಡು ಬಂದಿದೆ. ಶೀಲದ ಹಾಗೆ ಪಾತಿವ್ರತ್ಯ ಕೂಡ ಹೆಣ್ಣಿಂದ ಗಂಡು ಬಯಸುವ ಪತಿನಿಷ್ಠೆಯಾಗಿತ್ತು. ಬೇರೆ ಗಂಡಿನೊಂದಿಗೆ ಸಂಬಂಧ ಹೊಂದಿದರೆ, ಅಥವಾ ಅಂತಹ ಸಂಶಯ ಗಂಡಸಿನ ಮನದಲ್ಲಿ ಸುಳಿದರೂ ಸಾಕು ಹೆಣ್ಣಿನ ಬಾಳು ನರಕ ಸದೃಶವಾಗಿ ಪರಿಣಮಿಸುತ್ತಿತ್ತು. [೨೯] ಹೆಣ್ಣಿಗೆ 'ಶೀಲವೇ ಆಭರಣ' ಎಂದು ಹೇಳಿ ಶೀಲವನ್ನೆ ಆಭರಣವನ್ನಾಗಿ ತೊಡಿಸಿದ ಸಮಾಜ ಅವಳ ಶೀಲವನ್ನೆ ಶಂಕಿಸಿ

ಶಿಕ್ಷಿಸುವುದು ಅನ್ಯಾಯ ಗಂಡಿನ ಶೀಲದ ಬಗ್ಗೆ ಶಂಕಿಸುವುದೂ ಇಲ್ಲ, ಶಿಕ್ಷೆಯೂ ಇಲ್ಲ 'ಗುಣಸಾಗರಿ' ಕಾವ್ಯದಲ್ಲಿ 'ಗುಣಸಾಗರಿ' 'ಮಲ್ಲಿಗೆರಾಯ' ಕಾವ್ಯದಲ್ಲಿ ಮಲ್ಲಿಗೆರಾಯನ ಹೆಂಡತಿ ದುಂಡಮ್ಮ ಉತ್ತರದೇವಿ ಶೀಲದ ಶಂಕೆಗೆ ಗುರಿಯಾಗಿ ಗಂಡನ ಮನೆಯಿಂದ ಹೊರಹಾಕಲ್ಪಟ್ಟವರು. 'ಗುಣಸಾಗರಿ' ಯಂತು ಅತ್ತಿಗೆ, ನಾದಿನಿಯರಾದ ಅಲ್ಲಕ್ಕ-ಮಲ್ಲಕ್ಕರ ಕುತಂತ್ರದಿಂದ ಗಂಡನ ಮನೆಯವರಿಂದ ಮರಣದಂಡನೆಗೆ ಒಳಗಾದ ಅಮಾಯಕ ಹೆಣ್ಣಾದರೆ, ದುಂಡಮ್ಮ ಸ್ವತಃ ಗಂಡನ ಶಂಕೆಗೆ ಗುರಿಯಾಗಿ ಗಂಡನಿಂದಲೇ ಹತಳಾಗುತ್ತಾಳೆ. ಗುಣಸಾಗರಿ ಗಂಡನಿಂದಲೇ ಗರ್ಭವತಿಯಾದರೂ ಗಂಡನ ಅನುಪಸ್ಥಿತಿ ಗುಣಸಾಗರಿಯನ್ನು ಅನುಮಾನಿಸುವಂತೆ ಮಾಡುತ್ತದೆ. ಗಂಡ ಚೆಂಪಾಲುಸೆಟ್ಟಿ ಗುಟ್ಟಾಗಿ ಬಂದು ಹೋದದ್ದನ್ನು ಯಾರಿಗೂ ತಿಳಿಸಬೇಡೆಂದು ಭಾಷೆ ತೆಗೆದುಕೊಂಡಿದ್ದು ಅದಕ್ಕೆ ಸಾಕ್ಷಿಯಾಗಿ ಉಂಗುರ ಕೊಟ್ಟು ಹೋಗಿರುತ್ತಾನೆ. ಆದರೆ ಗುಣಸಾಗರಿ ಸಮಾಜದ ದೃಷ್ಟಿಯಲ್ಲಿ ಅಪರಾಧಿಯಾಗುತ್ತಾಳೆ. ಸಾಕ್ಷಿಗಿದ್ದ ಉಂಗುರ ನಾದಿನಿಯರಾದ ಅಲ್ಲಕ್ಕ-ಮಲ್ಲಕ್ಕರ ವಶವಾಗಿರುತ್ತದೆ. ಹೀಗಾಗಿ ಸತ್ಯ ಸಾಬೀತುಪಡಿಸಲಾಗದ ಅಸಹಾಯಕಳಾಗಿ ಗಂಡನ ಅಣ್ಣ ನೆರುವಾಣಿಯ ಕೆಂಗೋಪಕ್ಕೆ ತುತ್ತಾಗಿ ಮರಣದಂಡನೆಗೆ ಗುರಿಯಾಗಬೇಕಾಗುತ್ತದೆ. ಸತ್ಯವಂತೆಯಾದ ಗುಣಸಾಗರಿ ದೈನ್ಯಳಾಗಿ ಸಿಪಾಯಿಗಳಿಗೆ ಕೈಮುಗಿದು ಬೇಡಿಕೊಂಡು ಮರುಜೀವ ಪಡೆದು ಅನ್ಯರ ಆಶ್ರಯಪಡೆದು ಗಂಡು ಮಗುವಿಗೆ ಜನ್ಮನೀಡುತ್ತಾಳೆ. ದುಂಡಮ್ಮನಾದರೋ ಬಳೆಗಾರಿಯಿಂದ ಗರ್ಭವತಿಯಾದವಳೆಂದು ಶಂಕೆಗೊಳಗಾಗಿ ದಂಡಿಗೆ ಹೋದ ಮಲ್ಲಿಗೆರಾಯ ಕೆಟ್ಟ ಸ್ವಪ್ನವ ಕಂಡು ಊರಿಗೆ ಮರಳುತ್ತಾನೆ. ಮನೆಗೆ ಬರುವಾಗ ಮಲ್ಲಿಗೆರಾಯನಿಗೆ ಆತನ ಹೆಂಡತಿ ದುಂಡಮ್ಮ ಬಳೆಗಾರಿಗೆ ಗರ್ಭವತಿಯಾದದ್ದೆಂದು ತಿಳಿದ ಸತ್ಯ ಸಂಗತಿ ಅರಿಯದೇ ಹೆಂಡತಿ ದುಂಡಮ್ಮನನ್ನು ನಂಬಿಸಿ ಕತ್ತರಿಸಿಹಾಕುತ್ತಾನೆ. ಗುಣಸಾಗರಿ ಹಾಗೂ ದುಂಡಮ್ಮರ ಕಥೆ ಒಂದೇ ಆದರೂ ಗುಣಸಾಗರಿ ತಾನೇ ಮರುಜೀವ ಪಡೆದುಕೊಂಡರೆ ದುಂಡಮ್ಮ ಬಳೆಗಾರಿಯಿಂದ ಮರುಜೀವ ಪಡೆಯುತ್ತಾಳೆ.

ಚೆಂಪಾಲುಸೆಟ್ಟಿಯಿಂದಲೇ ಗರ್ಭವತಿಯಾದ ಗುಣಸಾಗರಿಗೆ ಚೆಂಪಾಲುಸೆಟ್ಟಿಯಿಂದಲೇ ನ್ಯಾಯ ಸಿಗುತ್ತದೆ. ಹಾಗೆಯೇ ದುಂಡಮ್ಮನಿಗೂ ಗಂಡ ಪಶ್ಚಾತಾಪಪಟ್ಟು ದುಂಡಮ್ಮನನ್ನು ಸೇರಿಕೊಳ್ಳುತ್ತಾನೆ. ಇವರಿಬ್ಬರ ಕತೆ ಅಂತ್ಯ ಸುಖವಾದದ್ದೆಂದು ಕಂಡರೂ ಸತ್ಯ ಸಂಗತಿಯ

ಅರಿವಾಗುವವರೆಗೂ ಅವರ ಗೋಳು, ಯಾತನೆ, ನೋವು, ಅವಮಾನ, ಅನ್ಯರ ಮನೆಯ ಹಂಗಿನ ಬಾಳು ಅವರನ್ನು ಜೀವ ಸಹಿತ ಸುಟ್ಟು ಹಾಕಿರುವಂಥದ್ದು. ನ್ಯಾಯಕ್ಕಾಗಿ ಬದುಕನ್ನು ಸವೆಸಿದವರು.

ಎಲ್ಲೂ ಬದುಕುವ ಸಣ್ಣ ಆಶಯದ ಎಳೆಯೂ ಕಾಣುವುದಿಲ್ಲ. ಅಷ್ಟರಮಟ್ಟಿಗೆ ಸಾವಿನ ಕುಣಿಕೆ ಸಿದ್ಧವಾಗಿರುತ್ತದೆ.

ಉರಿಯಾಗ ಬೆಂದೇನ : ಕೆರೆಯಾಗ ಮುಳಗೇನ
ತಿರುಗುವ ಗಾಣಕ್ಕೆ ಸಿರವ ಕೊಟ್ಟೇನ
ಸ್ಥಿರವಾಗಿ ಮರ್ತ್ಯ ಗದ್ದೇನೆ।[೨೦]

ಹೀಗೆ ಜನಪದ ಕಥನ ಕಾವ್ಯಗಳಲ್ಲಿ ಹೆಣ್ಣು ನಂಬಿಕೆ, ಸಂಪ್ರದಾಯಕ್ಕೆ ಶರಣುಹೋಗಿ ವ್ಯವಸ್ಥೆಯ ಅಡ್ಡಕತ್ತರಿಗೆ ಸಿಲುಕಿ ಇಲ್ಲಿ ತಮ್ಮದಲ್ಲದ ತಪ್ಪಿಗೆ ಪ್ರಾಣತ್ಯಾಗ ಮಾಡಿಕೊಂಡಿದ್ದಾರೆ. ಹೀಗೆ ಸಮಾಜ, ನಂಬಿಕೆ ಧರ್ಮಗಳ ಭಾರದಿಂದ ಪ್ರತಿಭಟಿಸಲಾಗದ ಅಸಹಾಯಕತೆ ಎದುರಾಗುತ್ತದೆ ಮತ್ತು ಬದುಕುವ ಯಾವ ಅವಕಾಶಗಳು ಅವರಿಗೆ ತೆರೆದುಕೊಳ್ಳುವುದಿಲ್ಲ. ಇಂಥ ಪಾತ್ರಗಳ ತ್ಯಾಗ, ಬಲಿದಾನ, ನಿಷ್ಠೆ, ಆದರ್ಶಗಳು, ಜನಪದರ ಮನಸ್ಸನ್ನು ಕಲಕುತ್ತವೆ. ವಸ್ತುವಿನ ಸಹಜತೆ ಮತ್ತು ಪರಿಣಾಮಕಾರಿ ಘಟನೆ ಸನ್ನಿವೇಶಗಳಿಂದಾಗಿ ಬಹಳ ಕಾಲದವರೆಗೆ ಅವು ಕೇಳುಗರ ಮನಸ್ಸಿನಲ್ಲಿ ನಿಲ್ಲುತ್ತವೆ. ಗಂಭೀರ ಪರಿಣಾಮವನ್ನುಂಟು ಮಾಡುತ್ತವೆ. ಇದ್ದೂ ಸಮಾಜದ ಕೆಂಗಣ್ಣಿಗೆ ಗುರಿಯಾಗುವುದಕ್ಕಿಂತ ಸತ್ತು ಸ್ವರ್ಗ ಸೇರುವುದೇ ಮೇಲೆಂಬ ಮನಸ್ಥಿತಿಗೆ ಬಂದು ತಲುಪುತ್ತದೆ.

ಈ ಕಥನ ಗೀತೆಗಳಲ್ಲಿ ಬರುವ ಅತ್ತೆಯರು, ನಾದಿನಿಯರು ಹೆಣ್ಣಾದರೂ ಮತ್ತೊಬ್ಬ ಹೆಣ್ಣಿನ ನೋವು ನಿರಾಸೆಗಳನ್ನು ಅರ್ಥಮಾಡಿಕೊಳ್ಳದ ರೀತಿಯಲ್ಲಿ ಕಂಡು ಬರುತ್ತವೆ. ಅತ್ತೆ ತಾಯಿಯಾಗಲಾರಳು ಎಂಬ ಮಾತಿಗೆ ಪಕ್ಕಾಗುತ್ತಾರೆ. ಬಲಿಯಾಗುವ ಸೊಸೆಯಂದಿರು ಮತ್ತೊಂದು ಕಡೆ ನಿಲ್ಲುತ್ತಾರೆ. ತಮ್ಮ ಬಲಿಯಾಗುವಿಕೆಯನ್ನು ತಪ್ಪಿಸಿಕೊಳ್ಳುವ ದಾರಿಯನ್ನು ಕಂಡುಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಾರೆ. ಆದರೆ ಹೆತ್ತವರು 'ಕೊಟ್ಟ ಹೆಣ್ಣು ಕುಲಕ್ಕೆ ಹೋಗು' ಎಂಬ ನೀತಿಯನ್ನು

ತಪ್ಪದೇ ಪಾಲಲಿಸುವವರಂತೆ ಕಂಡುಬರುತ್ತಾರೆ. ಅಂತೆಯೇ ವಿವಾಹವಾದ ಗಂಡ ಸಾಂದರ್ಭಿಕವಾಗಿ ಹೊರಗುಳಿಯಬೇಕಾಗುತ್ತದೆ. ಅಂಥ ಸಂದರ್ಭವನ್ನು ಬಳಸಿಕೊಂಡಂತೆ ಕಥನಗೀತೆಗಳಲ್ಲಿ ಬಲಿಯ ಅಥವಾ ತ್ಯಾಗದ ಘಟನೆ ನಡೆಯುತ್ತದೆ.

ಸಮಾಜ ಹೆಣ್ಣಿನ ವಿಷಯದಲ್ಲಿ ಕ್ರೂರವಾಗಿರುವುದನ್ನು ತ್ಯಾಗ, ಬಲಿದಾನಗಳಿಗೆ ಸಂಬಂಧಿಸಿದ ಗೀತೆಗಳು ಅರುಹುತ್ತವೆ. ಕೆರೆ, ಕೋಟೆ ಮುಂತಾದವುಗಳಿಗೆ ನರಬಲಿಯನ್ನು ಕೊಡಬೇಕಾದ ಸಂದರ್ಭ ಬಂದಾಗಲೆಲ್ಲ ಬಲಿಯಾಗುವವಳು ಹೆಣ್ಣೇ ಆಗಿರುವುದು ವ್ಯವಸ್ಥಿತವಾದ ಪುರಷು ಪ್ರಧಾನ ಸಮಾಜದ ಒಳಸಂಚು ಎಂಬುದನ್ನು ಗುರುತಿಸದೇ ಇರಲು ಸಾಧ್ಯವಾಗುವುದಿಲ್ಲ.[೨೦]

ವ್ಯಕ್ತಿಗತ ಬದುಕಿನ ಬೆಲೆಗಿಂತ ಸಾಮೂಹಿಕ ಹಿತವನ್ನು ವ್ಯವಸ್ಥೆ ಬಯಸುವಂತೆ ಬಿಂಬಿಸಲಾಗುತ್ತದೆ. ಆದರೆ ಇಲ್ಲಿಯ ದುರಂತಕ್ಕೆ ಬಲಿಯಾಗುವವರು ಹಾಗೆ ಊರಿನ ಗೌಡನ ಸೊಸೆಯಂದಿರೇ ಹೊರತು ಅವರ ಮಕ್ಕಳಾಗಿರುವುದಿಲ್ಲವೆಂಬುದು ಗಮಾನರ್ಹ ಸಂಗತಿ, ಅದರಲ್ಲೂ ಮನೆಯಲ್ಲಿಲ್ಲದ ಮಗನ ಮಡದಿಯೇ ಬಲಿಯಾಗುವುದು ಅವರ ವ್ಯವಸ್ಥೆಯ ಒಳಸಂಚಾಗಿರುತ್ತದೆ.

ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಸ್ಥಾಪಿತ ಮೌಲ್ಯಗಳಿಗೆ ಬದ್ಧವಾಗಿ ಬದುಕನ್ನು ದುರಂತವನ್ನಾಗಿಸಿಕೊಂಡ ಹಲವು ಗರತಿಯರ ದುರಂತ ಕಥನಗಳಾಗಿವೆ ಎಂಬುದು ಗಮನಾರ್ಹ. ಕಷ್ಟನಷ್ಟಗಳಿಗೆ ಭಾಗಿಯಾದವರು, ಉದಾತ್ತ ಉದ್ದೇಶಕ್ಕಾಗಿ ತ್ಯಾಗ ಬಲಿದಾನ ಮಾಡಿದವರಾಗಿರುತ್ತಾರೆ. ಬದುಕಿನ ಕ್ರೂರ ಸತ್ಯಗಳನ್ನು ಆಧರಿಸಿ ಹುಟ್ಟಿಕೊಂಡ ಇಂಥ ರಚನೆಗಳು ಜನಪದ ಕಥೆಗಳಂತೆ ಸುಖಾಂತವಾಗುವುದಿಲ್ಲ. ತಮಗೆ ಸಹಜವಾದ ರೀತಿಯಲ್ಲಿ ದುರಂತ ಮುಕ್ತಾಯ ಹೊಂದುತ್ತವೆ. ಇಂಥ ರಚನೆಗಳಲ್ಲಿ ಬದುಕಿನ ಸುಖ ಸಂತೋಷಕ್ಕಿಂತ ನೋವು-ಕಹಿ ಸಂಗತಿಗಳೇ ತುಂಬಿರುತ್ತವೆ. ಇವುಗಳಲ್ಲಿನ ಸ್ತ್ರೀನಾಯಕಿಯರು ಸಮಾಜದಲ್ಲಿ ಎಂದೋ ಬಾಳಿ ಬದುಕಿ ತಮ್ಮದಲ್ಲದ ತಪ್ಪಿಗೆ ಪ್ರಾಣತ್ಯಾಗ ಮಾಡಿಕೊಂಡವರು ಸಮಾಜದ ಇತರರ ಇಲ್ಲವೆ ವಿಧಿಯ ಕೈವಾಡದಿಂದ ದಾರುಣ ಸಂಕಷ್ಟಕ್ಕೆ ಬೀಳುವವರಾಗಿರುತ್ತಾರೆ.[೨೧]

ಉತ್ತರದೇವಿ ಕಥೆಯಲ್ಲಿ ಉತ್ತರದೇವಿ ಪಡುವ ಯಾತನೆ ನೋವು ನಿಂಸೆಗಳನ್ನು ಉತ್ತದೇವಿಯ ತಾಯಿ ತಾನೇ ಪಡೆದಿರುತ್ತಾಳೆ. ಉತ್ತರೆಯ ಅತ್ತೆ ಬೇರೊಂದು ಹೆಣ್ಣನ್ನು ಮಗನಿಗೆ ತರುವ ಮಾತಾಡಿದರೆ ಉತ್ತರದೇವಿಯ ತಂದೆ ಮತ್ತೊಂದು ಮರುಮದುವೆಯೊಂದಿಗೆ 'ಹಾಸಿಗೆಯ ಸುಖದಲ್ಲಿರುತ್ತಾನೆ' ಹೀಗೆ ಉತ್ತರದೇವಿ ಕಥನದಲ್ಲಿ ಒಂದು ಹೆಣ್ಣಿನ ಪರಿಸ್ಥಿತಿಯೇ ಮತ್ತೊಂದು ಹೆಣ್ಣಿನ ಪರಿಸ್ಥಿತಿಯೂ ಆಗಿ ಕಂಡು ಬರುವುದು ವಿಶೇಷ. ಅಂದರೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ತಮ್ಮ ಇಷ್ಟಕ್ಕೆ ಇಚ್ಚೆಗೆ ತಕ್ಕಂತೆ ಭೋಗದ ವಸ್ತು ಎಂದೇ ಪರಿಗಣಿಸುವುದು ಕಂಡು ಬರುತ್ತದೆ.

ಭಾಗೀರತಿ ತನ್ನ ಗಂಡನ ಮನೆಯಲ್ಲಿ ಕಿರಿಯವಳು ಉಳಿದಂತೆ ಹಿರಿಯ ಸೊಸೆಯರಿದ್ದರೂ ಬಲಿಯಾಗುವುದಿಲ್ಲ. ಬಲಿಯ ಮಾತು ಬಂದಾಗ ಮನೆತನದ ದೀಪ ಬೆಳಗಿಸುವ, ಸಂತಾನವನ್ನು ನೀಡುವವರೆಂದು ಕಾರಣ ಹೇಳಲಾಗುತ್ತದೆ. ಕಥೆಯ ತಂತ್ರಗಾರಿಕೆಯಲ್ಲಿ ಈ ಕಥಾನಕ ದಂಡಿಗೆ ಹೋದ ಮಾದೇವರಾಯನ ಅನುಪಸ್ಥಿತಿಯನ್ನು ದುರ್ಲಾಭ ಮಾಡಿಕೊಳ್ಳಲಾಗಿದೆ. ಅಸಹಾಯಕ ಹೆಣ್ಣು ಮಾತ್ರವಲ್ಲದೆ ಕಿರಿಯ ಸೊಸೆಯೂ ಆಗಿದ್ದಾಳೆ. ಭಾಗೀರತಿಗೆ ತವರಿನ ಬೆಂಬಲವೂ ಸಿಗುವುದಿಲ್ಲ. ಈ ಕಥಾನಕದ ವಿಶೇಷವೆಂದರೆ ಅತ್ತೆ ಮಾವಂದಿರು ಬಲಿ ನೀಡುತ್ತಾರೆಂಬ ವಿಷಯವನ್ನು ನೇರವಾಗಿ ತಂದೆ ತಾಯಂದಿರುಗಳಲ್ಲಿ ನಿವೇಧಿಸಿಕೊಳ್ಳುವುದಿಲ್ಲ ಬಹುಶಃ ಹಾಗೆ ನಿವೇದಿಸಿಕೊಂಡರೂ ಪರಿಹಾರವಿಲ್ಲವೆಂಬ ಸಿದ್ಧ ಉತ್ತರ ಅವಳಿಗೆ ತಿಳಿದರಬೇಕು. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' 'ಕೊಟ್ಟರೆ ಕೊಡಲೇಳು ಇಟ್ಹಾಂಗ ಇರಬೇಕು' ಎಂಬ ಮಾತು ಭಾಗೀರತಿಯ ಗೆಳತಿಯಿಂದ ಬರುವುದು ಮೇಲಿನ ಮಾತಿಗೆ ಸಾಕ್ಷಿಯಾಗುತ್ತದೆ. ಕತೆಯ ವಿಶೇಷವೆಂದರೆ ಗಂಡನ ಮನೆಯಿಂದ ತವರಿಗೆ ಓಡೋಡಿ ಬರುವ ಭಾಗೀರತಿಯ ತವಕ ಅವಳು ಬದುಕುವುದಕ್ಕಾಗಿ ಅನ್ಯಮಾರ್ಗವನ್ನು ಅಥವಾ ದಾರಿಗಳನ್ನು ಕಂಡುಕೊಳ್ಳುವುದೇ ಆಗಿದೆ. ಬಲಿಯಾಗಲು ಇಷ್ಟವಿಲ್ಲದ ಭಾಗೀರತಿ ಉತ್ತರದೇವಿಯಂತೆಯೇ ತವರಿಗೆ ಬಂದು ತಾನು ಬಲಿಯಾಗುವುದನ್ನು ತಪ್ಪಿಸಿಕೊಳ್ಳಲು ದಾರಿಗಳನ್ನು ಹುಡುಕುತ್ತಾಳೆ. ಆದರೆ ಬಂದ ದಾರಿಗೆ ಸುಂಕವಿಲ್ಲದೆ ಗೆಳತಿಯ ಮಾತಿನಂತೆ ಬಲಿಗೆ ಮಾನಸಿಕವಾಗಿ ಸಿದ್ಧಳಾಗುತ್ತಾಳೆ. ಮದಗದ ಕೆಂಚವ್ವನೂ ಭಾಗೀರತಿಯಂತೆಯೇ ಕಂಡುಬರುವ ಪಾತ್ರ. ಆದರೆ ಇಲ್ಲಿ ಮಗುವನ್ನು ಹೊಂದಿರುವ ತಾಯಿ. ಅಷ್ಟಕ್ಕೂ ಕೆರೆಗೆ ಬಲಿಯಾಗುವ ಮಾತು ಮನೆಯಲ್ಲಿ ನಿರ್ಧಾರವಾಗುವುದು ಅವಳಿಗೆ ತಿಳಿದಿದೆ. ಉಪಾಯ ಹೂಡಿ ಮಾವ ಮಲ್ಲನಗೌಡ ಮಗ ಬಸವೇಗೌಡನನ್ನು ಹವಳದ, ಮುತ್ತಿನ ವ್ಯಾಪಾರಕ್ಕೆ

ಹೋಗುವಂತೆ ಸೂಚಿಸುತ್ತಾನೆ. ಹವಳ ಮುತ್ತುಗಳನ್ನು ಕೆಂಚವ್ವ ತರುವುದನ್ನು ಬಸವೇಗೌಡ ಒಪ್ಪಲಾರ. ಅದು ಹಂಗಿನ ಸಂಪತ್ತೆಂದೇ ಭಾವಿಸುತ್ತಾನೆ. ಒಟ್ಟಾರೆ ಇಲ್ಲಿಯ ಜನಪದ ಸಂಕಥನಗಳು ಬಲಿಯಾಗುವ ಹೆಣ್ಣುಗಳಿಗೆ ನೆರವಾಗುವ ಅಥವಾ ಸಹಾಯಕ್ಕೆ ನಿಲ್ಲಬಹುದಾದ ಗಂಡಂದಿರನ್ನು ದೂರ ಸಾಗಹಾಕುವ ತಂತ್ರಗಾರಿಕೆಯನ್ನು ಸಾಮಾನ್ಯವಾಗಿ ಕಾಣುತ್ತೇವೆ. ಆದರೆ ಉತ್ತರದೇವಿಯ ಗಂಡ ಉತ್ತರೆಯ ಬಳಿ ಇದ್ದರೂ ಉತ್ತರೆಗೆ ಸಹಾಯಕವಾಗಿ ನಿಲ್ಲಲಾರದ ಬಾಯಿ ಸತ್ತವನು. ಮೇಲು ನೋಟಕ್ಕೆ ಬಿಟ್ಟುಬಿಡಲಾರದ ಮಾತನಾಡಿದರೂ ಮತ್ತೊಂದು ಹೆಣ್ಣನ್ನು ಮದುವೆ ಮಾಡುವ ಮಾತು ಅವನಲ್ಲಿ ಹೊಸ ಆಸೆ ಹುಟ್ಟಿಸಿರಬೇಕು. ಹಾಗಾಗಿ ಗಂಡಸಾದರೂ ತನ್ನ ಸ್ವಂತಿಕೆಯನ್ನು ಮೆರೆಯಲಾರದ ಅಸಹಾಯಕನಂತೆ ಕಾಣಿಸುತ್ತಾನೆ. ಇದೇ ಬಗೆಯ ಆಶಯವನ್ನು 'ಹುಳಿಯಾರು ಕೆಂಚವ್ವ ' ನ ಸಂದರ್ಭದಲ್ಲಿ ಗುರುತಿಸಬಹುದು. ಮನೆಯಲ್ಲಿದ್ದೂ ಕೆಂಚವ್ವನ ಬಲಿ ತಪ್ಪಿಸಲಾರದ ಮುಖೇಡಿ. ಮಾಯದ ನಿದ್ದೆ ಕವಿಸಿಕೊಂಡು ಮಲಗಿರುತ್ತಾನೆ. ಅಥವಾ ನಿದ್ದೆ ಬಂದಂತೆ ನಟಿಸುವವನಾಗಿದ್ದಾನೆ. ಇವೆಲ್ಲ ಮಾನವಿಕ ಅಧ್ಯಯನದ ಬಹುಮುಖ್ಯ ಸಂಗತಿಗಳಾಗಿವೆ.

ಹೊನ್ನಮ್ಮನ ಕತೆ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಬಂಜೆ ಎಂಬ ಕಾರಣಕ್ಕೆ ಅನೇಕ ಬಗೆಯ ಸಂಕಟಗಳನ್ನು ಅನುಭವಿಸುವ ಪಾತ್ರ, ಸಮಾಜದ ಕಣ್ಣಲ್ಲಿ ಸಂತಾನ ಭಾಗ್ಯವಿಲ್ಲ. ಹೆಣ್ಣುಗಳ ಗೋಳಿನ ಪ್ರತೀಕ ಹೊನ್ನಮ್ಮ, ಇಲ್ಲಿಯ ಕಥನಗೀತೆಯಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಆಕೆಯ ಸಹೋದರಿಯರೇ ಅವಳಿಗೆ ಚುಚ್ಚು ಮಾತಿನಿಂದ ಅವಮಾನಿಸುವುದು, ಮಾತ್ರವಲ್ಲದೆ ಹಕ್ಕಿಪಕ್ಷಿಗಳು ದನಕರುಗಳು ಅವಳು ತೆಗೆಸಿದ ಬಾವಿಯ ನೀರನ್ನು ಕುಡಿಯದೆ, ಹಣ್ಣನ್ನು ತಿನ್ನದೆ ನಿರಾಕರಿಸುವಷ್ಟು ಅತಿಗೆ ಹೋಗುತ್ತವೆ. ಅಂದರೆ ಮಕ್ಕಳಾಗದೇ ಇರುವುದಕ್ಕೆ ಹೆಣ್ಣನ್ನೇ ನೇರ ಕಾರಣವಾಗಿಸಿ ಹಿಂಸಿಸುವುದು ಪುರುಷ ಸಮಾಜ ನಿರ್ಮಿತ ಲಕ್ಷಣವೇ ಆಗಿದೆ. ಅಂತಹ ಕಾರ್ಯಕ್ಕೆ ಹೊನ್ನಮ್ಮ ಈಡಾಗುತ್ತಾಳೆ.

ಮನುಷ್ಯನ ಮನಸ್ಥಿತಿ ಅತ್ಯಂತ ಸಂಕೀರ್ಣವಾದದ್ದು ತನ್ನ ವೈಯಕ್ತಿಕ ಸುಖ ಮತ್ತು ಲಾಭಗಳಿಗೆ ಯಾರನ್ನು ಬಲಿಹಾಕಲು ಹಿಂಜರಿಯುವುದಿಲ್ಲ. ಅಥವಾ ತನ್ನ ಹಿತಸಾಧನೆಗೆ ಎಂಥವರನ್ನು ಮೆಟ್ಟಿಲುಗಳನ್ನಾಗಿ ಮಾಡಿಕೊಳ್ಳಬಲ್ಲ ಅಂತೆಯೇ ಭಾರತದಂತಹ ಪರಿಸರದಲ್ಲಿ ಹೆಣ್ಣು ಅತ್ಯಂತ ದುರ್ಬಲಳೆಂದೇ ಭಾವಿಸಲಾಗಿದೆ ಮತ್ತು ಈ ನೆಲೆಯಲ್ಲಿ ಅವಳ ಬದುಕಿನ ಸ್ಥಾನಮಾನಗಳು

ನಿರ್ಧರಿಸಲ್ಪಟ್ಟಿವೆ. ಹೀಗಾಗಿ ಶತಮಾನಗಳಿಂದ ಗಂಡುಕುಲ ಹೆಣ್ಣನ್ನು ಅಸಹಾಯಕಳಂತೆ ನಡೆಸಿಕೊಂಡು ತನ್ನ ಕಣ್ಣಳತೆಯಲ್ಲಿ ಗುಣಿಸಿ, ಭಾಗಿಸಿ, ಕಳೆದಿದ್ದಾನೆ. ಇದು ಸಂಪ್ರದಾಯವಾಗಿ, ರೂಢಿಯಾಗಿ, ಆಚರಣೆಯಾಗಿ ಬಂದ ಸತಿ ಸಹಗಮನ ಪದ್ಧತಿಯನ್ನು ಇಂದಿಗೂ ಭಾರತದ ಕೆಲವು ಕಡೆ ಕಾಣಬಹುದಾಗಿದೆ. ಇಂಥ ಹೀನ ಪದ್ಧತಿಯನ್ನು ನಿವಾರಿಸುವ ಮನೋಧರ್ಮ ರೂಪಿಸಲು ಪ್ರಬಲವಾದ ಕಾನೂನೇ ಬೇಕಾಯಿತು. ಜನಪದ ಕಥನಗೀತೆಗಳಲ್ಲಿ ಸತಿ ಹೋಗುವ ದುಷ್ಟಪದ್ಧತಿ ಯಥೇಚ್ಛವಾಗಿ ಕಂಡುಬರುತ್ತವೆ. ಅಂತೆಯೇ ಈರೋಬಿ ತನ್ನ ಗಂಡ ತೀರಿಕೊಂಡನೆಂಬ ಸುದ್ದಿಯನ್ನು ಕೇಳಿಯೇ ಘಾಸಿಗೊಳ್ಳುತ್ತಾಳೆ. ತಾನು ಕಂಡ ಕನಸಿನಂತೆಯೇ ಗಂಡ ಶೆಟ್ಟಿಶಂಕರರಾಯ ತೀರಿಕೊಂಡ ಸುದ್ದಿ ನಿಜವಾಗುತ್ತದೆ. ತತ್‌ಕ್ಷಣವೇ ಕೊಂಡವೇರುವುದಕ್ಕೆ ಸಿದ್ಧಳಾಗುತ್ತಾಳೆ. ಗಂಡನಿದ್ದೂ ಪಡಬಾರದ ಹಿಂಸೆಯನ್ನು ಹೆಣ್ಣೊಬ್ಬಳು ಪಡಬೇಕಾದ ಸಂಕಷ್ಟಗಳ ಸರಮಾಲೆಯನ್ನೇ ಈರೋಬಿ ಈ ಮೊದಲು ಅನುಭವಿಸಿರುತ್ತಾಳೆ. ಅತ್ತೆ ನಾದಿನಿ, ಅತ್ತಿಗೆಯರು ಅವಳಿಗೆ ಅತಿಯಾದ ಹಿಂಸೆ ನೀಡಿರುವುದು ಗೀತೆಯಲ್ಲಿ ಕಂಡುಬರುತ್ತದೆ. ಮಾತ್ರವಲ್ಲದೆ ಸಾಮಾಜಿಕ ಸಂದರ್ಭದಲ್ಲಿ ಅವಳಿಗೆ ಕಿರುಕುಳ ಕಟ್ಟಿಟ್ಟಬುತ್ತಿ. ಅಂತಹ ಇರಿದು ತಿನ್ನುವ ಸಾಮಾಜಿಕ ವಿಷಮ ಸ್ಥಿತಿಯಲ್ಲಿ ಬದುಕುವುದಕ್ಕಿಂತ ಸಾಯುವುದೇ ಸುಖವೆಂದು ಭಾವಿಸುತ್ತಾಳೆ. ಆದ್ದರಿಂದ ಕೂಡಿಕೆಯಂಥ ಪದ್ಧತಿಯಲ್ಲಿ ಚೆನ್ನಪಟ್ಟಣದ ನಿಂಗೇಗೌಡನ ಮರುಮದುವೆಯ ಪ್ರಸ್ತಾಪವನ್ನು ಗಟ್ಟಿಯಾಗಿ ಪ್ರತಿಭಟಿಸುತ್ತಾಳೆ. ಅಂದರೆ 'ಕೂಡಿಕೆ' ಯ ಸಂಬಂಧಗಳಿಗೆ ಸಾಮಾಜಿಕವಾಗಿ ಮಾನ್ಯತೆ ಇಲ್ಲ, ಗೌರವವೂ ಇಲ್ಲ. ಆದ್ದರಿಂದ ಮರುಮದುವೆಗೆ ಈರೋಬಿ ಒಪ್ಪಲಾರಳು. ಈ ಗೀತೆಯ ವಿಶೇಷವೆಂದರೆ ಹೊಸಬದುಕಿನ ಅವಕಾಶಗಳನ್ನು ನಿರಾಕರಿಸುವ ಸಂದರ್ಭವನ್ನು ಕಾಣುತ್ತೇವೆ. ಇದು ನಮ್ಮ ಸಮಾಜಗಳಲ್ಲಿ ಮನೆ ಮಾಡಿರುವ ಕಠೋರ ನಿಂದನೆ, ಅಪಮಾನ, ಅವಮಾನಗಳು ವಿಪರೀತವಾಗಿವೆ. ಈ ಕಾರಣದಿಂದ ಈರೋಬಿ ಅಂತಿಮವಾಗಿ ಸಾವನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ.

ಇಂಥದ್ದೇ ಮತ್ತೊಂದು ಕಾವ್ಯ 'ನಾಗವ್ವ ' ಇದು ದುರಂತದ ಇನ್ನೊಂದು ತುದಿ ಎಂದೇ ಹೇಳಬೇಕು. ಯಾಕೆಂದರೆ ಮದುವೆಯಾಗಲು ಗೊತ್ತುಮಾಡಿದ ಗಂಡು ತೀರಿಕೊಂಡನೆಂಬುದೇ ಆಗಿದೆ. ಏನೂ ಅರಿಯದ ಬಾಲ ನಾಗವ್ವ ಕೊಂಡವೇರಲು ನಿರ್ಧರಿಸುವುದು ಹೃದಯವಿದ್ರಾವಕ ಸನ್ನಿವೇಶ.

ಅವಳಾದರೂ ಈ ನಿರ್ಧಾರಕ್ಕೆ ಬರುವುದು ಸಮಾಜದ ಕೆಂಗಣ್ಣಿಗೆ ಗುರಿಯಾಗುವುದನ್ನು ತಪ್ಪಿಸಿಕೊಳ್ಳಲೆಂಬುದೇ ಆಗಿದೆ.

ಚಿಕ್ಕೋಳು ಹಿರಿದಿಮ್ಮವ್ವ ಕಥನಗೀತೆಯಲ್ಲಿಯ ಹೆಣ್ಣಿನ ದುರಂತ ಇನ್ನೊಂದು ಬಗೆಯದು. ಸತಿ ಹೋಗುವುದೇ ಕಥೆಯ ಆಶಯವಾದರೂ ತನ್ನ ಗಂಡನ ಸಾವಿಗೆ ಕಾರಣನಾದ ಬೇಡರ ಹುಡುಗ ಬೊಮ್ಮಲಿಂಗನನ್ನು ಬಲಿ ಹಾಕಿಯೇ ಕೊಂಡವೇರಲು ನಿರ್ಧರಿಸುತ್ತಾಳೆ. ಅನಾಥನೆಂದು ಆಶ್ರಯ ನೀಡಿದ ಬೊಮ್ಮಲಿಂಗ ಉಂಡ ಮನೆಗೆ ಎರಡು ಬಗೆದ. ಏಳು ಜನ ಅಣ್ಣಂದಿರ ಮುದ್ದಿನ ತಂಗಿಯಾದ ಈರೋಬಿ ತನಗಾದ ಅನ್ಯಾಯಕ್ಕೆ ತಾನೇ ನ್ಯಾಯ ದೊರಕಿಸಿಕೊಳ್ಳುತ್ತಾಳೆ. ಗಂಡನನ್ನು ಕೊಂದ ಬೊಮ್ಮಲಿಂಗನನ್ನು ಕೊಂದು ತಾನುಕೊಂಡವೇರುತ್ತಾಳೆ.

'ಗುಣಸಾಗರಿ' ಉತ್ತರದೇವಿಯಂತೆಯೇ ಶೀಲ ಶಂಕೆಗೆ ಒಳಗಾಗದವಳು. ಆದರೆ ಅಸಹಾಯಕಳಾಗಿ ಸಾವನ್ನು ಆಯ್ಕೆ ಮಾಡಿಕೊಳ್ಳಲಾರಳು. ಬದಲಾಗಿ ತನ್ನ ಗಂಡನಿಂದಲೇ ಪಡೆದ ಮಗುವನ್ನು ಸಾಕಿ ಬೆಳಸಿ ತನ್ನ ಪ್ರಾಮಾಣಿಕತೆಯನ್ನು ಪರೀಕ್ಷೆಗೊಡ್ಡಲು ಸಮಯಕ್ಕಾಗಿ ಕಾದುಕುಳಿತವಳು. ತನ್ನ ನಾದಿನಿಯರಾದ ಅಲ್ಲಕ್ಕ-ಮಲ್ಲಕ್ಕ, ಗಂಡನ ಅಣ್ಣ ನೆರುವಾಣಿಯರ ಕಿರುಕುಳಕ್ಕೆ ಒಪ್ಪಿಕೊಂಡು ಬದುಕನ್ನು ಸವಾಲಗಿ ಸ್ವೀಕರಿಸುವವಳು. ಲೋಕನಿಂದೆಗೆ ಹೆದರುವವಳಲ್ಲ. ತನ್ನ ಗಂಡ ಚೆಂಪಾಲುಸೆಟ್ಟಿಯು ವ್ಯಾಪಾರದಿಂದ ಮರಳುವವರೆಗೆ ಬೇರೊಬ್ಬರ ಮನೆಯಲ್ಲಿ ಆಶ್ರಯಪಡೆದು ತಾನು ಪವಿತ್ರಳೆಂಬುದನ್ನು ಸಾಬೀತು ಮಾಡುತ್ತಾಳೆ.

ಹೀಗೆ ವಿವಿಧ ಬಗೆಯ ಕಥನಗೀತೆಗಳಲ್ಲಿ ವಿವಿಧ ರೀತಿಯ ಪಾತ್ರಗಳನ್ನು ಕಾಣುತ್ತೇವೆ. ಹಲವು ಜಾತಿ, ಮತ, ಧರ್ಮಗಳ ಮೂಲಕ ತಮ್ಮದೇ ಸಂಸ್ಕೃತಿಯನ್ನು, ಬದುಕಿನ ರೀತಿನೀತಿಗಳನ್ನು ಕೂಡಿಸಿಕೊಂಡ ಭಾರತೀಯ ಸಮಾಜದಲ್ಲಿ ಹಲವು ಬಗೆಯ ಬದುಕಿನ ಸಾಪೇಕ್ಷ ಮತ್ತು ನಿರಪೇಕ್ಷ ಮೌಲ್ಯಗಳನ್ನು ಗಟ್ಟಿಯಾಗಿ ನಂಬಲಾಗಿದೆ. ಆದ್ದರಿಂದ ಆಯಾಯ ಸಮಾಜ, ಕುಟುಂಬಗಳು ಅನುಸರಣೆಯ ಮೌಲ್ಯಗಳಿಗನುಗುಣವಾಗಿ ಈ ಕಥನಗೀತೆಗಳ ಬದುಕು ಹರವಿಕೊಂಡಿದೆ. ಒಬ್ಬೊಬ್ಬರದೂ ಒಂದೊಂದು ಭಿನ್ನ ನೆಲೆಯಲ್ಲಿ ಚರ್ಚೆಗೆ ಗ್ರಾಸ ಒದಗಿಸುವ ಪಾತ್ರಗಳಾಗಿವೆ. ಕೆಲವೊಂದು ಕಥನಗೀತೆಗಳು ಒಂದೇ ಬಗೆಯ ಆಶಯವನ್ನು ಹೊಂದಿದ್ದರೂ ನಿರೂಪಣೆಯಲ್ಲಿ

ಆಚಾರಗಳಲ್ಲಿ ವಿಚಾರಗಳಲ್ಲಿ ಸಂಪ್ರದಾಯ ನಡಾವಳಿಗಳಲ್ಲಿ ವಿಭಿನ್ನ ಬಗೆಯ ಆಲೋಚನೆಗಳು ಅಭಿವ್ಯಕ್ತಗೊಂಡಿವೆ. ಶಿಷ್ಟ ಸಾಹಿತ್ಯದಂತೆ ತಾರ್ಕಿಕವಾಗಿ ಕಥಾನಕಗಳು ಸುಸಂಬದ್ಧತೆಯನ್ನು ಹೊಂದಿರದಿದ್ದರೂ ಒಟ್ಟು ಕಥೆಯ ಹಿನ್ನಲೆಯಲ್ಲಿ ಅದು ಸಾಗುವ ಜಾಡನ್ನು ಮತ್ತು ನಿರ್ಧರಿಸುವ ಅಂಶಗಳನ್ನು ಈ ಎಲ್ಲಾ ಕಥನಗೀತೆಗಳಲ್ಲಿ ಗುರ್ತಿಸಬಹುದು. ಆದ್ದರಿಂದ ಜನಪದ ಕಥನಗೀತೆಗಳಲ್ಲಿ ಮುಖ್ಯವೆನಿಸಿದ ಪಾತ್ರಗಳ ಚಿತ್ರಣ ದುರಂತದಿಂದಲೇ ಕೊನೆಯಾಗುತ್ತದೆ.

ಮೌಖಿಕ ಪರಂಪರೆಯಲ್ಲಿ ಸಾಗಿಬರುವ ಜನಪದ ಸಾಹಿತ್ಯ ಸಹಜವಾಗಿಯೇ ಕೆಲವೊಮ್ಮೆ ಅಸಂಗತದಂತೆ ಕಂಡುಬರುತ್ತದೆ. ಉದಾ: ಈರೋಬಿ ಕಥೆ ಮತ್ತು ಉತ್ತರದೇವಿಯ ಕೊನೆ ಅಸ್ಪಷ್ಟವಾಗಿಯೇ ಉಳಿದುಬಿಡುತ್ತದೆ. 'ಮಳೆಯಾಗಿ ಹೋಗು' ಎಂದು ತಾಯಿ ಹೇಳುತ್ತಾಳೆ. ಕಥೆ ಅಲ್ಲಿಗೆ ನಿಂತುಬಿಡುತ್ತದೆ.

ಪಿತೃ ಪ್ರಧಾನ ಸಮಾಜದ ಎಲ್ಲಾ ಬಗೆಯ ಲಕ್ಷಣಗಳನ್ನು ಭಾರತದ ಮಾತೃಪ್ರಧಾನ ಸಮಾಜಗಳ ಅನುಕರಣೆ ಮತ್ತು ಅನುಸರಣೆಯ ಮೂಲಕ ತಮ್ಮ ಮೂಲರೂಪಗಳನ್ನು ಬಿಟ್ಟುಕೊಟ್ಟಿವೆ. ಅದರ ಪಳೆಯುಳಿಕೆಯಂತೆ ಮೂಲಾಶಯವನ್ನು ಬಳಸಿಕೊಂಡಿರುವುದನ್ನು ನಾವು ಗುರುತಿಸುವುದು ಸಾಧ್ಯವಿದೆ. ಉದಾಹರಣೆಗೆ ಈರೋಬಿ ಮರು ಮದುವೆಗೆ 'ಕೂಡಿಕೆ' ಹೆಸರಿನಲ್ಲಿ ಪ್ರಸ್ತಾರ ಕಳಿಸುವ ಚೆನ್ನಪಟ್ಟಣದ ನಿಂಗೇಗೌಡನಂಥ ಪಾತ್ರಗಳ ಪ್ರಯತ್ನವಿದೆ. ಹಾಗಾಗಿ ಇಲ್ಲಿಯ ದುರಂತಕ್ಕೆ ಈಡಾಗುವ ಪಾತ್ರಗಳು ಹೆಚ್ಚು ಕಡಿಮೆ ಪುರೋಹಿತಶಾಹಿ ನಿರ್ಮಿಸಿದ ಸಾಮಾಜಿಕ ಪದ್ಧತಿಗೆ ಬಲಿಯಾಗುವವರೇ ಆಗಿದ್ದಾರೆ. ಅನಕ್ಷರಸ್ಥ ಸಮುದಾಯಗಳನ್ನು ನಿರಂತರವಾಗಿ ಶೋಷಣೆಗೆ ಗುರಿಮಾಡಿದ ಎಲ್ಲಾ ಬಗೆಯ ತಂತ್ರ ಕುತಂತ್ರಗಳು ಸಾಮಾಜಿಕವಾಗಿ ಹೇಗೆ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿವೆ ಎಂಬುದು ಈ ಕಥನಗೀತೆಗಳ ಅಧ್ಯಯನದಲ್ಲಿ ಕಂಡು ಬರುತ್ತದೆ. ತಾನು ಮೇಲು ಎಂದುಕೊಂಡ ಗಂಡುಕುಲ ಶತಮಾನಗಳಿಂದ ತನ್ನ ಸ್ಥಾಪಿತ ಹಿತಾಸಕ್ತಿಯನ್ನು ಎಲ್ಲೂ ಮುರಿಯುವ ಪ್ರಯತ್ನ ಕಥನಗೀತೆಗಳಲ್ಲಿ ಸಿಕ್ಕುವುದಿಲ್ಲ. ಅಸಹಾಯಕರಾಗಿ ಬದುಕಿನಲ್ಲಿ ಸೋತ ಹೆಣ್ಣುಗಳು ಸಾವನ್ನೂ ಗೆಲ್ಲುವ ಉದಾಹರಣೆ ಅತಿ ವಿರಳ. ಸತಿಯ ಮೇಲಿನ ಅತೀವ ಪ್ರೀತಿ ಹೊಂದಿದ ಪುರುಷಪಾತ್ರಗಳು ಮಡದಿಯ ಸಾವಿನಲ್ಲಿ ಒಂದಾಗುವ ಉದಾರಹಣೆ 'ಕೆರೆಗೆ ಹಾರ' ದ ಮಾದೇವರಾಯನಂಥವನು ವಿರಳಾತಿವಿರಳ. ಆದ್ದರಿಂದ ಜನಪದ ಕಥನ ಗೀತೆಗಳಲ್ಲಿ ಮುಖ್ಯವೆನಿಸಿದ ಪಾತ್ರಗಳ ಚಿತ್ರಣ ದುರಂತದಿಂದಲೇ ಕೊನೆಯಾಗುತ್ತದೆ.

ಅಡಿ ಟಿಪ್ಪಣಿಗಳು:

ಜನಪದ ಕಥನ ಕಾವ್ಯ ಮತ್ತು ದುರಂತದ ಪರಿಕಲ್ಪನೆ

ಅ) ಸಾಮುದಾಯಕ ಸ್ವೀಕೃತ ನೆಲೆಗಳು

೧೧. ಜನಪದ ಸಾಹಿತ್ಯ : ಹಿಂಸೆಯ ಅನುಭವ ಸ್ವರೂಪ, ಲೇ. ಡಾ॥ ಹಿ.ಶಿ.ರಾಮಚಂದ್ರೇಗೌಡ, ಪುಟ-೨೨೮

೧೧. ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ - ವಿವಿಧ ಲೇಖಕರು, ಪ್ರಧಾನ ಸಂ. ಬರಗೂರು ರಾಮಚಂದ್ರಪ್ಪ

೧೨. ದುಃಖಾಂತ ಕಥನಗೀತೆಗಳು - ಸರಸ್ವತಿ ರಾಜೇಂದ್ರ - ಪುಟ

೧೪. ಜಾನಪದ -೧೯೯೧, ಸಂಪಾಕದರು - ಜಿ.ಎಸ್.ಭಟ್ಟ.

೧೫. ಕಾರವಾರ ಜಿಲ್ಲೆಯ ಜನಪದ ಗೀತೆಗಳು, ಲೇ. ಡಾ॥ ಎನ್.ಆರ್.ನಾಯಕ್

೧೬. ಜನಪದ ಖಂಡ ಕಾವ್ಯಗಳು - ಡಾ॥ ಜೀ.ಶಂ. ಪರಮಶಿವಯ್ಯ, ಪುಟ-೧೦

೧೭. ಅದೇ, ಪುಟ-೧೦

೧೮. ಅದೇ, ಪುಟ-೧೧

೧೯. ಅದೇ, ಪುಟ-೧೯

೨೦. ಜನಪದ ಖಂಡ ಕಾವ್ಯಗಳು - ಡಾ॥ ಜೀ.ಶಂ. ಪರಮಶಿವಯ್ಯ, ಪುಟ-೧೭

೨೧. ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿನೆಲೆಗಳು - ಗಾಯತ್ರಿ ನಾವಡ, ಪುಟ-೮೧

೨೨. ಅದೇ, ಪುಟ-೨೮

೨೨. ಅದೇ, ಪುಟ-೮೨

೨೪. ಜಾನಪದ ಕರ್ನಾಟಕ : ಜನಪದ ಕಥೆಗಳಲ್ಲಿ ಸ್ತ್ರೀ ಲೇ: ನಳಿನಾಕ್ಷಿ ಕುಂಚೂರು, ಪುಟ-೬೯

೨೫. ಅದೇ, ಪುಟ-೪೧

೨೬. ಅದೇ, ಪುಟ-೪೪

೨೭. ದುಃಖಾಂತ ಕಥನಗೀತೆಗಳು - ಸರಸ್ವತಿ ರಾಜೇಂದ್ರ, ಜಾನಪದ ೧೯೯೧ - ಸಂ. ಜಿ.ಎಸ್.ಭಟ್ಟ, ಪುಟ-೬೨

೨೮. ದುಃಖಾಂತ ಕಥನಗೀತೆಗಳು - ಸರಸ್ವತಿ ರಾಜೇಂದ್ರ, ಜಾನಪದ ೧೯೯೧ - ಸಂ. ಜಿ.ಎಸ್.ಭಟ್ಟ, ಪುಟ-೬೩

೨೯. ಜನಪದ ಖಂಡ ಕಾವ್ಯಗಳು - ಡಾ॥ ಜೀ.ಶಂ. ಪರಮಶಿವಯ್ಯ, ಪುಟ-೨೦

೪೦. ಅದೇ, ಪುಟ-೨೦

೪೧. ಅದೇ, ಪುಟ-೨೪

೪೨. ಜನಪದ ಖಂಡ ಕಾವ್ಯಗಳು - ಡಾ॥ ಜೀ.ಶಂ. ಪರಮಶಿವಯ್ಯ, ಪುಟ-೮೧

೪೩. ಅದೇ, ಪುಟ-೬೪

೪೪. ಮಹಿಳಾ ಜಾನಪದ : ಪುಟ - ೧೯೦

೪೫. ಮಹಿಳಾ ಜಾನಪದ : ಪುಟ - ೧೯೦

೪೬. ಜನಪದ ಖಂಡ ಕಾವ್ಯಗಳು - ಡಾ॥ ಜೀ.ಶಂ. ಪರಮಶಿವಯ್ಯ, ಪುಟ-೫೦

೪೭. ಅದೇ, ಪುಟ-೫೧

೪೮. ಅದೇ, ಪುಟ-೫೨

೪೯. ಅದೇ, ಪುಟ-೫೩

೫೦. ಜನಪದ ಸಾಹಿತ್ಯದಲ್ಲಿ ಸ್ತ್ರೀ ಮಾದರಿಗಳ ಶೋಧ - ಶಾಲಿನಿ ರಘುನಾಥ,

೫೧. ಮಹಿಳಾ ಜಾನಪದ - ಸಂ. ಡಾ॥ ಕೆ.ಆರ್.ಸಂಧ್ಯಾರೆಡ್ಡಿ ಪುಟ-೧೯೦

೫೨. ಪ್ರಧಾನ ಸಂ. ಪ್ರೊ. ಹಿ.ಶಿ. ರಾಮಚಂದ್ರೇಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೫೩. ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ, ಲೇ. ವೈ.ಬಿ. ಹಿಮ್ಮಡಿ. ಪುಟ -೫೬

೫೪. ಜನಪದ ಕಾವ್ಯಗಳು - ಡಾ॥ ಶ್ರೀಕಂಠ ಕೂಡಿಗೆ, ಕರ್ನಾಟಕ ಜಾನಪದ : ಪ್ರಧಾನ ಸಂ. ಡಾ॥ಎಸ್.ಕೆ.ಕರೀಂಖಾನ್, ಸಂ. ಡಾ॥ ಜೀ.ಶಂ.ಪರಮಶಿವಯ್ಯ, ಡಾ॥ ವಿಲಿಯಂ ಮಾಡ್ರ

೫೫. ಜನಪದ ಸಾಹಿತ್ಯದಲ್ಲಿ ಸ್ತ್ರೀ ಮಾದರಿಗಳ ಶೋಧ - ಶಾಲಿನಿ ರಘುನಾಥ,

೫೬. ಮಹಿಳಾ ಜಾನಪದ - ಸಂ. ಡಾ॥ ಕೆ.ಆರ್.ಸಂಧ್ಯಾರೆಡ್ಡಿ ಪುಟ-೧೯೦

೫೭. ಪ್ರಧಾನ ಸಂ. ಪ್ರೊ. ಹಿ.ಶಿ. ರಾಮಚಂದ್ರೇಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೫೮. ಜನಪದ ಕಾವ್ಯಗಳು - ಡಾ॥ ಶ್ರೀಕಂಠ ಕೂಡಿಗೆ, ಪುಟ ೧೬೮

ಅ : ಸಾಮುದಾಯಿಕ ಸ್ವೀಕೃತ ನೆಲೆಗಳು

ಆದಿ ಮಾನವ ತನ್ನ ಬದುಕಿನ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಾ ನಿರಂತರವಾಗಿ ಒಂದಡೆಯಿಂದ ಮತ್ತೊಂದಡೆ ವಲಸೆ ಹೋಗುತ್ತಾ ತನ್ನ ಜೀವನ ವಿಧಾನವನ್ನು ರೂಪಿಸಿಕೊಂಡಿರುವುದು ಸರ್ವವಿಧಿತ. ಹೀಗೆ ಬದುಕಿನುದ್ದಕ್ಕೂ ಸಹಮಾನವರೊಂದಿಗೆ, ನಿಸರ್ಗದೊಂದಿಗೆ ಮತ್ತು ಪ್ರಾಣಿಪಕ್ಷಿಗಳೊಂದಿಗೆ, ಸೆಣೆಸುತ್ತಾ ಕಾಲಾಂತರಗಳನ್ನು ದಾಟಿಕೊಂಡು ಇಂದಿನ ನಾಗರೀಕ ಸ್ಥಿತಿಯನ್ನು ತಲುಪಿದ್ದಾನೆ. ಈ ಬದುಕಿನ ರೂಪ, ಸ್ವರೂಪಗಳನ್ನು ಅವನ ಆಲೋಚನೆ, ತಿಳುವಳಿಕೆ, ನಂಬಿಕೆ, ಶ್ರದ್ಧೆ ಆಚರಣೆಗಳು ರೂಪಗೊಳ್ಳುತ್ತಾ, ವ್ಯವಸ್ಥೆಗೊಳ್ಳುತ್ತಾ ಹಲವು ಮಜಲುಗಳಲ್ಲಿ ಹಾದುಬಂದ ಇತಿಹಾಸದ ಹೆಜ್ಜೆಗುರುತುಗಳು ಮೂಡಿವೆ. ಅನಕ್ಷರಸ್ಥ ಲೋಕವೊಂದು ತನ್ನ ಜೀವನ ರೀತಿನೀತಿಗಳನ್ನು ತನ್ನ ನಾಲಿಗೆಯ ಮೂಲಕವೇ ಅದನ್ನು ಉಳಿಸುವ, ಮುಂದಿನ ತಲೆಮಾರಿಗೆ ವರ್ಗಾಯಿಸುವ ಪ್ರಕ್ರಿಯೆ ಹೆಚ್ಚು ಹೆಚ್ಚು ನಡೆಯುತ್ತಿರುತ್ತದೆ. ಈ ಹಿನ್ನಲೆಯಲ್ಲಿ ವಿವಿಧ ಸಂಸ್ಕೃತಿಯ, ಮಜಲುಗಳನ್ನು ನಾವು ಕಾಣುವ ಸಾಧ್ಯತೆಯಿದೆ.

ಭಾರತದಂತಹ ಬಹುಸಂಖ್ಯಾತ ಅಂಟಿನ ಜನಸಮುದಾಯಗಳು ತಮ್ಮ ಬದುಕಿನ ರೀತಿರುವಾಜುಗಳನ್ನು ಉಳಿಸಿಕೊಂಡು ಬಂದಿರುವುದು ಮೌಖಿಕ ಸಂಪ್ರದಾಯದಲ್ಲಿಯೇ. ನೂರಾರು ಭಾಷೆ, ಧರ್ಮ, ಆಚರಣೆ, ಕಲೆ, ನಂಬಿಕೆ, ಸಂಪ್ರದಾಯಗಳು ಉಳಿದು ಬಂದಿರುವುದು ಜಾನಪದ ಮಾಧ್ಯಮದಲ್ಲಿಯೇ. ಒಂದು ಗುಂಪು ಇಲ್ಲವೇ ಸಮಾಜ ತಲೆಮಾರಿನಿಂದ ತಲೆಮಾರಿಗೆ ತನ್ನ ಸಾಮಾಜಿಕ, ಸಾಂಸ್ಕೃತಿಕ ನೆಲಗಳನ್ನು ಕಾಪಾಡಿಕೊಂಡು ಬಂದಿರುವುದು ಮೌಖಿಕ ಪರಂಪರೆಯಲ್ಲಿಯೇ ಈ ಸಂಪ್ರದಾಯ, ಆಚರಣೆ, ನಂಬಿಕೆಗಳು ತನ್ನ ಜೀವನದ ಹಲವು ಸಂದರ್ಭಗಳಲ್ಲಿ ಜನ್ಮತಾಳುತ್ತವೆ. ಪ್ರಕೃತಿ, ಪ್ರಾಣಿ, ಪಕ್ಷಿಗಳ ಜೊತೆಗೆ ನಿರಂತರವಾಗಿ ಸಂಬಂಧವಿರಿಸಿಕೊಂಡ ಮಾನವ ದೇವರು ಧರ್ಮ ಮುಂತಾಗಿ ಭಯಭೀತನಾಗಿ ತಾನಂದುಕೊಂಡ ಆಲೋಚನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಾನೆ. ಈ ಪ್ರಯತ್ನ ಮೂಲತಃ ಒಬ್ಬನ ಅಥವಾ ಒಬ್ಬಳ ವೈಯಕ್ತಿಕ ಸಂದರ್ಭದಲ್ಲಿ ಹುಟ್ಟುವುದು ಸಹಜ. ಆದರೆ ಒಂದು ಗುಂಪಿನ ಇಲ್ಲವೇ ಒಂದು ಸಮಾಜದ ಮುಖಂಡನ

ಆಲೋಚನೆಯಾಗಿದ್ದರೆ ಅದು ಬಹುಬೇಗನೆ ಆ ಗುಂಪಿನ ಇಲ್ಲವೇ ಸಮಾಜದ ಒಟ್ಟಾರೆ ಆಚರಣೆಯಲ್ಲಿ ಉಳಿದುಬಿಡುತ್ತವೆ. ಆಗ ಆ ಇಡೀ ಸಮಾಜದ ಸಾಮಾಜಿಕ ಬದುಕಿನ ಒಳವಿನ್ಯಾಸದಲ್ಲಿ ಉಳಿದು ಆಚರಣೆಯಾಗಿ, ನಂಬಿಕೆಯಾಗಿ, ಶ್ರದ್ದೆಯಾಗಿ ವಿಕಸಿಸುತ್ತಾ ಆ ಸಮಾಜದ ಮಾನಸಿಕ ಸ್ತರದಲ್ಲಿ ಉಳಿದುಬಿಡುತ್ತದೆ. ಯಾಕೆಂದರೆ ಯಾವುದೇ ಗುಂಪಿನ ನಾಯಕನ ನಂಬಿಕೆ, ಶ್ರದ್ದೆಗಳು, ಆಚರಣೆಗಳು ಅವನಿರುವ ಸಮಾಜದ ಇನ್ನಿತರರ ಮೇಲೆ ಗಾಢವಾದ ಪ್ರಭಾವ ಬೀರುತ್ತಿರುತ್ತದೆ. ಅದು ಕೊನೆಕೊನೆಗೆ ಒಂದು ಸಮಾಜದ ಬದುಕಿನ ರೀತಿಯಾಗಿ ಮುಂದಿನ ತಲೆಮಾರಿಗೆ ಪಯಣಿಸುತ್ತದೆ. ಈ ಬಗೆಯ ಸಮಾಜಗಳು ಅನಕ್ಷರಸ್ಥವಾಗಿದ್ದರೆ ಅದು ಇನ್ನೂ ಗಟ್ಟಿಯಾಗಿ ನೆಲೆಯೂರುತ್ತದೆ. ಈಗಾಗಲೇ ಪ್ರಸ್ತಾಪಿಸಿದಂತೆ ಭಾರತೀಯ ಆದಿವಾಸಿ ಸಮಾಜಗಳು ಬಡುಕಟ್ಟು ಸಮುದಾಯಗಳು ಅಲೆಮಾರಿ ಜನಾಂಗಗಳು, ಶತಮಾನಗಳಿಂದ ಅನಕ್ಷರಸ್ಥ ಸಮಾಜಗಳಾಗಿ ಉಳಿದು ಬಂದಿರುವುದು ನಮಗೆಲ್ಲ ತಿಳಿದಿರುವ ಸಂಗತಿ. ಕರ್ನಾಟಕದ ಜನಾಂಗಿಕ ಇತಿಹಾಸವೂ ಇದರಿಂದ ಹೊರತಲ್ಲ. ಹಾಗಾಗಿ ಇಲ್ಲಿನ ಸಮಾಜದ ಪರಿಸ್ಥಿತಿಯು ಭಾರತದ ಇತರ ಭಾಗಗಳಿಗಿಂತ ಭಿನ್ನವಾಗಿಲ್ಲ. ಈ ಸಂಗತಿ ದ್ರಾವಿಡ ಜನಾಂಗಗಳ ಸಮಾಜಗಳಲ್ಲಂತೂ ಈ ಮೌಖಿಕ ಪರಂಪರೆ ಇನ್ನೂ ದಟ್ಟವಾಗಿ ಮತ್ತು ವ್ಯಾಪಕವಾಗಿ ಉಳಿದು ಬರುವುದಕ್ಕೆ ಹಲವು ಕಾರಣಗಳಿವೆ.

ಕಲೆ ಇತಿಹಾಸಗಳು ಒಂದು ಜನಾಂಗದ ಮಾನಸಿಕ ಉತ್ಪನ್ನ. ಆದ್ದರಿಂದ ಆ ಜನಾಂಗ ಬದುಕುವ ರೀತಿ, ಆಲೋಚಿಸುವ ವಿಧಾನ, ಅವರ ಬೇಕುಬೇಡಗಳು, ಆಸೆ ಆಕಾಂಕ್ಷೆಗಳು, ನೋವು ನಲಿವುಗಳು ಸಾಮಾನ್ಯವಾಗಿ ಅವರ ಭಾಷಿಕ ರಚನೆಯಲ್ಲಿ ದಾಖಲುಗೊಳ್ಳುವುದು ಮುಖ್ಯ ಸಂಗತಿ. ಆದ್ದರಿಂದ ಯಾವುದೇ ಜನಾಂಗವನ್ನು ಅಥವಾ ಸಮಾಜವನ್ನು ಅರ್ಥಮಾಡಿಕೊಳ್ಳಲು ಅವರ ಮೌಖಿಕ ಸಾಹಿತ್ಯ ಬಹುಮುಖ್ಯವಾದ ಆಕರವೆನಿಸುತ್ತದೆ. ಹೀಗಾಗಿ ಜಾನಪದ ವ್ಯಾಪ್ತಿಗೆ ಬರುವ ಸಾಹಿತ್ಯದ ವರ್ಗದಲ್ಲಿ ಗೀತೆಗಳು, ಲಾವಣಿಗಳು, ಕಥನಗೀತೆ, ಹಾಡು, ಮಹಾಕಾವ್ಯ ಮುಂತಾದವುಗಳು ಸೂಕ್ಷ್ಮ ವಿಶ್ಲೇಷಣೆಗಳಲ್ಲಿ ಆಯಾ ಜನಾಂಗದ ಬದುಕಿನ ವಿನ್ಯಾಸಗಳನ್ನು ಗುರುತಿಸುವುದು ಸಾಧ್ಯ. ಅಂತೆಯೇ ಕರ್ನಾಟಕ ಜಾನಪದ ಇತಿಹಾಸದಲ್ಲಿ ಜನಪದ ಸಾಹಿತ್ಯದ ಅಧ್ಯಯನ ಮುಖ್ಯವೆನಿಸುತ್ತದೆ. ಇಲ್ಲಿ ಗಂಡಸರ ಹಾಡುಗಳಂತೆಯೇ ಹೆಂಗಸರ ಹಾಡುಗಳು ಬಹುಮುಖ್ಯವೆನಿಸಿವೆ. ಅದರಲ್ಲು ದ್ರಾವಿಡ ಇಲ್ಲವೆ

ಮಾತೃಪ್ರಧಾನ ಸಮಾಜಗಳ ಅನುಭವಗಳು, ಆಲೋಚನೆಗಳು, ಅಭಿಪ್ರಾಯಗಳು, ಹೆಚ್ಚು ಪ್ರಾಮುಖ್ಯತೆ ಪಡೆಯುತ್ತವೆ. ಯಾಕೆಂದರೆ ಭಾರತದ ಹೆಣ್ಣಿನ ಸ್ಥಿತಿಗತಿಗಳು ದಾಖಲುಗೊಂಡಿರುವುದು ಜಾನಪದದಲ್ಲಿಯೇ, ಪುರುಷ ಪ್ರಧಾನ ಸಮಾಜದ ಕಣ್ಣಿನಲ್ಲಿ ಹೆಣ್ಣು ಎರಡು ಬಗೆಯಲ್ಲಿ ನಿರೂಪಣೆಗೆ ಒಳಗಾಗಿದ್ದಾಳೆ. ಒಂದು ಮಾಯೆಗಾಗಿ, ಇನ್ನೊಂದು ಮಾತೆಯಾಗಿ. ಈ ಬಗೆಯ ಆಲೋಚನೆ ಪುರಷಪ್ರಧಾನ ಸಮಾಜಗಳಲ್ಲಿ ಹೆಚ್ಚು ಆದರೆ ಮಾತೃನೆಲೆಯ ಸಂಸ್ಕೃತಿ ಸಮಾಜಗಳಲ್ಲಿ ತನ್ನನ್ನ ತಾನು ಪರಿಭಾವಿಸಿಕೊಂಡ, ವರ್ಣಿಸಿಕೊಂಡ ಹೆಣ್ಣಿನ ಅಭಿವ್ಯಕ್ತಿ ಅತ್ಯಂತ ಕುತೂಹಲಕರವಾದ ಸಂಗತಿಯಾಗುತ್ತವೆ. ಭಾರತ ಇತಿಹಾಸದ ವಿವಿಧ ಕಾಲಘಟ್ಟದಲ್ಲಿ ದ್ರಾವಿಡ ಸಮಾಜಗಳು ಪಿತೃ ಪ್ರಧಾನ ಸಮಾಜಗಳಾಗಿ ಪರಿವರ್ತನೆಗೊಂಡಿರುವುದು ಈಗ ಇತಿಹಾಸ. ಆದರೆ ಇತಿಹಾಸ ಪುರಾಣಗಳಕಾಲದ ನಂಬಿಕೆ ಆಚರಣೆಗಳು ಇಂದಿಗೂ ಗಟ್ಟಿಯಾಗಿ ಉಳಿದುಬಂದಿವೆ. ಮಾತ್ರವಲ್ಲದೆ ತರತಮಗಳು, ಮೇಲು ಕೀಳುಗಳು, ಶ್ರೇಷ್ಟ ಕನಿಷ್ಟ ಎಂಬ ಪ್ರಜ್ಞೆ ಗಟ್ಟಿಯಾಗಿ ನೆಲೆಸಿದೆ. ಇಂತಹ ಸಾಮಾಜಿಕ, ಧಾರ್ಮಿಕ ಸಾಂಸ್ಕೃತಿಕ ಹಾಗೂ ರಾಜಕೀಯ ಜೀವನದಲ್ಲಿ ಭಾರತದ ಸ್ತ್ರೀ ಅಥವಾ ಹೆಣ್ಣಿನ ಜೀವನ ಎಂದಿಗೂ ಸಮಾನತೆಯನ್ನು ಸಾಧಿಸಲಾಗಿಲ್ಲ. ಈ ನೆಲೆಯಲ್ಲಿಯೇ ನಾವು ಸ್ತ್ರೀ ಸಾಹಿತ್ಯದ ಒಳಸೂಕ್ಷ್ಮಗಳನ್ನು ಅರ್ಥಮಾಡಿಕೊಳ್ಳಬೇಕು. ಗಂಡುಕುಲ ತನ್ನ ಸ್ವಾರ್ಥಕ್ಕೆ, ಪ್ರತಿಷ್ಠೆಗೆ ಹಾಗೂ ಗೌರವಕ್ಕೆ ಬೆಲೆಗೊಟ್ಟು ಅವುಗಳನ್ನು ಸ್ಥಾಪಿಸುವ ದುರುದ್ದೇಶದಿಂದ ಹೆಣ್ಣನ್ನು ಬಳಕೆಯ ವಸ್ತುವಂತೆ ಸ್ವೀಕರಿಸಲಾಗಿದೆ. ಪ್ರಾಚೀನ ಕಾಲದಿಂದಲೂ ''ಯತ್ರ ನಾರ್ಯಸ್ತು ಪೂಜ್ಯಂತೆ ರಮ್ಯಂತೆ ತತ್ರ ದೇವತಾಹ್ವಾನ್'' ಎಂಬ ಹೊಗಳಿಕೆಗೆ, ತೋರಿಕೆಗೆ ಕಂಡುಬಂದಿರುವುದೇ ಹೆಚ್ಚು ಆದರೆ ಅದರ ನೈಜ ರೂಪ ಜನಪದ ಸಾಹಿತ್ಯದ ಕಥನಗೀತೆಗಳಲ್ಲಿ ಅನಾವರಣಗೊಳ್ಳುತ್ತದೆ.

ಹೀಗೆ ವ್ಯಕ್ತಿಗತ ಸ್ವಪ್ರತಿಷ್ಠೆಗೆ ತನ್ನ ಗೌರವ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಸಮಾಜದ ಕಣ್ಣಿಲ್ಲಿ ಪ್ರಧಾನನಾಗಬೇಕೆಂಬ ಉದ್ದೇಶದಿಂದ ಹುಟ್ಟಿಕೊಂಡ ಆಲೋಚನೆಯೊಂದು ಈ ಭಾರತೀಯ ಸಮಾಜದಲ್ಲಿ ನೋಡುನೋಡುತ್ತಿದ್ದಂತೆಯೇ ಸಮೂಹದ ಸ್ವತ್ತಾಗಿ ಬಿಡುತ್ತದೆ. ಮೊದಮೊದಲಿಗೆ ಟೀಕೆಗೆ, ತಿರಸ್ಕಾರಕ್ಕೆ ಗುರಿಯಾಗಬಹುದಾದ ಕೇಡಿನ ಆಲೋಚನೆಗಳು ನಿಧಾನಕ್ಕೆ ಸಮಾಜದ ನಂಬಿಕೆಯಾಗಿ ಆಚರಣೆಯಾಗಿ ಬಂದು ಸಮುದಾಯದ ಒಪ್ಪಿಗೆಯ ಮುದ್ರೆಯನ್ನು ಹಾಕಿಬಿಡುತ್ತವೆ. ಇದುವೇ

ಶತಮಾನಗಳಿಂದ ಜನಮಾನಸದಲ್ಲಿ ನೆಲೆಯೂರಿ ಗಟ್ಟಿಗೊಂಡು ಅಲಿಖಿತ, ಸಾಮಾಜಿಕ ಸಂವಿಧಾನವಾಗಿ ಉಳಿದು ಬೆಳದು ಬಂದಿದೆ.

ಪುರುಷನ ಹಿಡಿತಕ್ಕೆ ಸಿಕ್ಕಿ ಹೆಣ್ಣು ಭಾರತದ ಮಟ್ಟಿಗೆ 'ನ ಸ್ತ್ರೀ ಸ್ವಾತಂತ್ರಂ ಅರ್ಹತಿ ' ಎಂಬಂತೆ ಬಾಳಿರುವುದೇ ಹೆಚ್ಚು. ಯಾವುದೇ ಸಂದರ್ಭಕ್ಕೂ ತನ್ನ ವೈಯಕ್ತಿಕ ಅಪೇಕ್ಷೆಗಳು ಬೇಕು, ಬೇಡಗಳು ಹಾಗೆಯೇ ನಿರ್ಧಾರಗಳನ್ನು ಸರ್ವತಂತ್ರ, ಸ್ವಾತಂತ್ರ್ಯದಿಂದ ಪ್ರಕಟಿಸುವ ಅವಕಾಶವನ್ನು ಈ ಸಮಾಜ ಒದಗಿಸಲೇ ಇಲ್ಲ. ಅವಳನ್ನು ಕಾಡು ಪ್ರಾಣಿಗಳಂತೆ ಬಳಸಿ ಪಳಗಿಸಿದ್ದೇ ಹೆಚ್ಚು. ಇದು ಪರಂಪರಾಗತವಾದ ನಡವಳಿಕೆ. ಈ ನಡವಳಿಕೆಯನ್ನು ಪ್ರಶ್ನಿಸುವುದು ಅಥವಾ ಮೀರುವುದು ಸಾಧ್ಯವಾಗದ ರೀತಿಯಲ್ಲಿ ಬಂಧಿಸಲಾಯಿತು. ಈ ಬಗೆಯ ಬಂಧನದ ಸ್ಥಿತಿಯನ್ನು 'ಬಂಧನ' ಎಂಬ ಭಾವನೆ ಬರದಂತೆ ಅದು ಬೇರೂರದಂತೆ ಅದಕ್ಕೆ ವ್ಯವಸ್ಥಿತವಾಗಿ ಕಾಪಾಡಿಕೊಂಡು ಬರಲು ವಿವಿಧ ತಂತ್ರಗಳನ್ನು ಹೊಸೆಯಲಾಯಿತು. ಈ ಬಗೆಯ ಕುಯುಕ್ತಿಯಿಂದ ಕೂಡಿದ ಸ್ವಾರ್ಥಭರಿತ ತಂತ್ರಗಳೇ ನಂಬಿಕೆಗಳಾಗಿ, ಆಚರಣೆಗಳಾಗಿ ಉಳಿದುಬಂದು ಸಾಮಾಜಿಕ ಪದ್ಧತಿಯಾಗಿರುವುದು ಗಮನಿಸಬೇಕಾದ ಸಂಗತಿ. ಈ ಬಗೆಯ ಆಲೋಚನೆಯಿಂದ ನಾವು ಜನಪದ ಕಥನ ಗೀತೆಗಳಲ್ಲಿ ಕಂಡುಬರುವ ನಂಬಿಕೆ ಮತ್ತು ಸಂಪ್ರದಾಯಗಳನ್ನು ಅವಲೋಕಿಸಬಹುದು.

ಉದಾಹರಣೆಗೆ, ಕಾರ್ಯಾರಂಭಕ್ಕೆ ಮೊದಲು ಗಂಗೆಪೂಜೆ ಮಾಡುವುದೂ ಕೂಡ ಸಾಂಸ್ಕೃತಿಕ ಆಚರಣೆಯಾಗಿದೆ. ಗಂಗೆ ಪೂಜೆಯೊಂದಿಗೆ ಕೆರೆಕಟ್ಟುವಿಕೆ ಪ್ರಾರಂಭವಾದರೂ ಭೂಮ್ಯಾಗಳ ಗಂಗಮ್ಮ ಮೇಲೆ ನೆಲೆಸಲು ನರಬಲಿಯನ್ನು ಬಯಸುತ್ತಾಳೆ. ಹೀಗೆ ನರಬಲಿ ಕೊಡುವ ಪದ್ಧತಿ ಪ್ರಾಚೀನ ಮಾನವನಿಂದ ನಡೆದು ಬಂದಿರುವುದಾದರೂ ಬಲಿಯನ್ನು ಕೊಡುವ ಮತ್ತು ಬಲಿಯಾಗುವ ಪದ್ಧತಿಗಳು ಸಬಲರು ದುರ್ಬಲರ ಮೇಲೆ ನಡೆಸಿದ ಆಕ್ರಮಣಗಳೇ ಆಗಿವೆ. [7]

ಪುರುಷ ಪ್ರಧಾನ ಸಮಾಜ ತನ್ನ ಪ್ರಭುತ್ವ ಕೇಂದ್ರಿತ ನೆಲೆಯಿಂದ ಹೆಣ್ಣನ್ನು ಆಳುವ ಆಸ್ತಿಯನ್ನಾಗಿ ಪರಿವರ್ತಿಸಿಕೊಂಡು, ಪುರಾಣ, ಧರ್ಮಗ್ರಂಥಗಳ ಹೆಸರಿನಲ್ಲಿ ಹೆಣ್ಣಿನ ಮುಗ್ಧ ಮನಸ್ಸನ್ನು ಸ್ಥಿರೀಕರಿಸಿ,

ಸೂಕ್ಷ್ಮಮನಸ್ಸಿನ ಮಮತಾಮಯಿಯಾದ ಹೆಣ್ಣಿನ ಹೃದಯ ಸಂವೇದನೆಯನ್ನು ಹೊಸಕಿ ಹಾಕಿ ಅವಳ ಭಾವನಾತ್ಮಕ ನೆಲೆಗಳನ್ನು ನಿರ್ಲಕ್ಷಿಸಿದೆ. ಹೆಣ್ಣಿನ ನಿರೀಕ್ಷಿತ ಬದುಕಿನ ಚಿಂತನೆ ಕೇವಲ ಒಂದು ಕಾಲಘಟ್ಟದ ಆಲೋಚನೆಯಲ್ಲ ಬದಲಿಗೆ ಹುದುಗಿಹೋದ ಸಾವಿರಾರು ವರ್ಷಗಳ ಮನಸ್ಸಿನ ಚಲನಶೀಲ ಸ್ವರೂಪದ ಚರಿತ್ರೆಯಾಗಿದೆ. ಹೆಣ್ಣಿನ ಭಾವನೆಗಳಿಗೆ, ಆಲೋಚನೆಗಳಿಗೆ ಸ್ಪಂದಿಸದೆ ಧರ್ಮ, ಆಚರಣೆ, ನಂಬಿಕೆ ಸಂಪ್ರದಾಯಗಳ ಹೆಸರಿನಲ್ಲಿ ಕೋಟೆಕಟ್ಟುವ ಪುರುಷ ಪ್ರಧಾನ ಸಮಾಜದೊಳಗೆ ಸಿಲುಕಿ, ನಲುಗಿ, ಕೊಟ್ಟಮನೆಗೆ, ಹುಟ್ಟಿದ ಮನೆಗೆ, ಸಮಾಜಕ್ಕೆ ಲೇಸನ್ನೇ ಬಯಸಿ ತಮ್ಮನ್ನೇ ಆತ್ಮಾರ್ಪಣೆ ಮಾಡಿಕೊಂಡಿರುವ ಅನೇಕ ಮುಗ್ಧ ಹೆಣ್ಣುಮಕ್ಕಳ ದುರಂತ ಕತೆಗಳು ಜನಪದರಲ್ಲಿ ಅಚ್ಚಳಿಯದೇ ಜೀವಂತ ಸಾಕ್ಷಿಯಾಗಿ ನಿಂತಿವೆ.

ತಾಯಿ ಮಾತ್ರ ಎಂದೆಲ್ಲ ಕರೆಸಿಕೊಳ್ಳುವ ಹೆಣ್ಣು ಸಮಗ್ರ ಸಮುದಾಯದ ಭಾರ ಹೊತ್ತು ಅವರ ಬದುಕಿನ ಹೋರಾಟದ ನಾಯಕತ್ವಕ್ಕೆ ತಯಾರಾಗಬೇಕಿತ್ತು. ತಾಯಿಗೆ ಮಹತ್ವಲಭಿಸ ತೊಡಗಿದಾಗ ಸ್ತ್ರೀ ಪರಂಪರೆ ಬಿಗಿಯಾಗಿ ಚಾರಿತ್ರಿಕ ರೂಪವನ್ನು ತಾಳತೊಡಗಿತು. ಮುಂದೊಂದು ದಿನ ಅದು ಪಾವಿತ್ರ್ಯದ ರೂಪ ಪಡೆದು ಹೆಣ್ಣು ಮೂಲೆ ಸೇರತೊಡಗಿದಳು. ನಾಲ್ಕು ಗೋಡೆಯ ಮಧ್ಯೆ ಬಂಧಿತಳಾದಳು. ಆಗಲೇ ಆಕೆಯ ಶೋಷಣೆಯ ಕರಾಳ ಮುಖಗಳು ಅನಾವರಣಗೊಳ್ಳ ತೊಡಗಿದವು.

(i) ನಂಬಿಕೆಗಳು, ಆಚರಣೆಗಳು ಮತ್ತು ಸಂಪ್ರದಾಯಗಳು:

ಜನಪದ ಸಂಸ್ಕೃತಿ ಎಂದರೆ ರೂಢಿಗತ ಪರಂಪರೆಗೆ, ಸಂಪ್ರದಾಯ ನಿಷ್ಠೆಗೆ ಇನ್ನೊಂದು ಹೆಸರು. ಜನಪದರು ಸಂಪ್ರದಾಯ ನಿಷ್ಠಾ ಪ್ರವೃತ್ತಿಯುಳ್ಳವರು. ನಾಗರಿಕ ಸಂಸ್ಕೃತಿಯಲ್ಲಿ ನಾವು ಅಷ್ಟಾಗಿ ಸಂಪ್ರದಾಯ ನಿಷ್ಠೆಯನ್ನು ಕಾಣಲಾಗುವುದಿಲ್ಲ. ಹಳ್ಳಿಗಳಲ್ಲಿ ಸಹಜವಾಗಿ ಭಾವನೆಗಳಿಗೆ ಹೆಚ್ಚು ಬೆಲೆ. ನಗರದಲ್ಲಿ ಭಾವನೆಗಿಂತ ವ್ಯವಹಾರವೇ ಪ್ರಾಧಾನ್ಯತೆ ಪಡೆಯುತ್ತದೆ. ಸ್ವಾಭಾವಿಕವಾಗಿ ಇವೆರಡೂ ಸೇರಿದರೇನೇ ಒಟ್ಟು ಸಂಸ್ಕೃತಿ ರೂಪಗೊಳ್ಳುವುದು. ಜನಪದರ ನಿತ್ಯ ಜೀವನದಲ್ಲಿ ಎದ್ದು ಕಾಣುವುದು ಸಂಪ್ರದಾಯ ನಿಷ್ಠೆ. ಭಾರತೀಯ ಶಿಷ್ಟ ಜನತೆ ತಮ್ಮ ಜೀವನವನ್ನು ಸನಾತನ ಧರ್ಮ, ಶಾಸ್ತ್ರಗಳನ್ವಯ ರೂಪಿಸಿಕೊಳ್ಳಲು ಆಶಿಸುವುದನ್ನು ಕಾಣುತ್ತೇವೆ. ವೈದಿಕರಿಗೆ ವೇದೋಪನಿಷತ್ತುಗಳು, ಮನುಧರ್ಮಶಾಸ್ತ್ರ, ಅರ್ಥಶಾಸ್ತ್ರ, ಇತರ ಪುರಾಣಗಳು, ಉಪಖ್ಯಾನಗಳು ಸೂಕ್ತ ಜೀವನಾದರ್ಶ ಒದಗಿಸಿದರೆ, ಅವೈದಿಕರಾದ ಜೈನ, ಭೌದ್ಧ, ಮುಸಲ್ಮಾನ, ಕೈಸ್ತ, ಪಾರಸಿಕ ಮುಂತಾದವರಿಗೆ ಆಯಾ ಧರ್ಮ ಗ್ರಂಥಗಳ ಜೊತೆಗೆ ತಮ್ಮ ಹಿರಿಯರು ಪಾಲಿಸಿದ್ದ ಸಂಪ್ರದಾಯ, ರೂಡಿ, ಆಚರಣೆಗಳು ಮುಖ್ಯವೆನಿಸುತ್ತವೆ. ಶಿಷ್ಟ ಜನಪದರಿಗೆ ಧರ್ಮಶಾಸ್ತ್ರ ಗ್ರಂಥಗಳ ಕಟ್ಟುಪಾಡು ಅಷ್ಟಾಗಿ ಪರಮಾದರ್ಶ ಎನ್ನಿಸುವುದಿಲ್ಲ. ಅವರಿಗೆ ತಮ್ಮ ಪ್ರಾಚೀನರ, ತಮ್ಮ ಕುಟುಂಬದ ಹಿರಿಯರ ಪರಂಪರಾಗತ ಸಂಪ್ರದಾಯವೇ ಪರಮ ಪ್ರಮಾಣ, ಅದೇ ಶ್ರೇಷ್ಠ. ತಮ್ಮ ಪೂರ್ವಿಕರು ಯಾರು ರೀತಿ ನೀತಿಯಿಂದ ಬಾಳಿದರೋ ಯಾವುದನ್ನು ಆಚರಿಸದರೋ, ಎಂತಹದ್ದನ್ನು ತ್ಯಜಿಸಿದ್ದರೋ ಅಂಥದ್ದೇ ರೀತಿ ನೀತಿ ನಡಾವಳಿಗಳನ್ನು ತಾವೂ ಅನುಸರಿಸಿ ಬಾಳಬೇಕಾದುದೇ ಧರ್ಮ, ಅದೇ ಕ್ರಮ ಎಂಬುದಾಗಿ ದೃಢವಾಗಿ ನಂಬಿದರವರು ಈ ಜನಪದರು.

ಜನಪದರ ಈ ಸಂಪ್ರದಾಯಗಳೆಲ್ಲ, ರೂಢಿಗತ ಪದ್ಧತಿಗಳೆಲ್ಲ ಆಮೂಲಾಗ್ರವಾಗಿ ಶುದ್ಧ ಜಾನಪದೀಯ ಎನ್ನಲು ಬರುವುದಿಲ್ಲ. ಒಂದಿಲ್ಲೊಂದು ರೀತಿಯಿಂದ ಶಿಷ್ಟ ಸಂಪ್ರದಾಯಗಳು ಪ್ರಭಾವ ಬೀರಿಯೇ ತೀರುತ್ತವೆ.

ನಂಬಿಕೆಗಳ ಸಹಾಯವಿಲ್ಲದೆ ಬದುಕುವ ಮಾನಸಿಕ ಗಟ್ಟಿತನ ಎಲ್ಲರಿಗೂ ಸಾಧ್ಯವಾಗಲಾರದು. ಅನೇಕರು ಬದುಕುವ ಪರಿಸರ, ಅವರ ತಿಳುವಳಿಕೆಯ ಇತಿಮಿತಿ ಮುಂತಾದ ಸಂಗತಿಗಳು ಅವರ ಬದುಕಿನಲ್ಲಿ ಕೆಲವಾದರೂ ನಂಬಿಕೆಗಳನ್ನು ಅವಲಂಬಿಸಲು ಕಾರಣವಾಗಬಹುದು.[1]

ಪ್ರಾಚೀನ ಕಾಲದಿಂದಲೂ ಹೆಣ್ಣಿನ ಬದುಕು ಮತ್ತು ಸ್ಥಾನಮಾನಗಳು ವಿರೋದಾಭಾಸಗಳಿಗೆ ಒಳಗಾಗಿಯೇ ಬೆಳದುಕೊಂಡು ಬಂದಿವೆ. ಬದುಕು ಹಸನಾಗಲು ಹೆಣ್ಣನ್ನು ಪೂಜಿಸಬೇಕು. ಹೆಣ್ಣನ್ನು ಪತಿವ್ರತೆ, ಆದಿಶಕ್ತಿಯ ಸ್ವರೂಪ ಎಂದೆಲ್ಲ ಗುಣಗಾನ ಮಾಡಿ ಆಕೆಗೆ ದೊಡ್ಡ ಸ್ಥಾನವನ್ನು ಕೊಟ್ಟ ಸಮಾಜವೇ ಈಗ ಹೆಣ್ಣನ್ನು ಅನಾದರಕ್ಕೊಳಪಡಿಸಿ ಹೇಗೆಂದರೆ ಹಾಗೆ ತನಗೆ ಇಷ್ಟ ಬಂದಂತೆ ದುರುಪಯೋಗಪಡಿಸಿಕೊಂಡು ಭೋಗದ ವಸ್ತುವಾಗಿ ಮಾಡಿಕೊಂಡು ಜೀವಿಸಿರುವುದು ಭಾರತದ ಚರಿತೆಯಲ್ಲಿ ಕಂಡುಬರುತ್ತದೆ. ಅನಾದಿಕಾಲದಿಂದಲೂ ಬಾಲ್ಯವಿವಾಹ, ದೇವದಾಸಿ ಪದ್ಧತಿ, ವೈದವ್ಯದಂಥ ಮೂಢನಂಬಿಕೆಗಳ ಹಿನ್ನಲೆಯಲ್ಲಿ ಆಚರಿಸುವಂಥ ಆಚರಣೆಗಳು ಸಂಪ್ರದಾಯಗಳಾಗಿ ಇಲ್ಲಿ ನೆಲೆಯೂರಿವೆ. ಸಮಷ್ಟಿ ಹಿತಕ್ಕಾಗಿ, ಸಮಾಜದ ಒಳಿತಿಗಾಗಿ ಸ್ತ್ರೀಯರನ್ನು ಕೆರೆಗೆ ಹಾರವಾಗಿ ಕೊಡುವುದು, ಗಂಡ ಸತ್ತ ನಂತರ ಸಮಾಜದಲ್ಲಿ ಅನಿಷ್ಟಳಾಗಿ ಬಾಳುವುದಕ್ಕೆ ಹೆದರಿ ಸಹಗಮನ ಹೋಗುವುದು ಇಂಥ ಅನೇಕ ಹೀನ ಆಚರಣೆಗಳು ಹೆಣ್ಣನ್ನು ಕ್ರೂರವಾಗಿ ಕಂಡಿವೆ.

ಯಾವುದೇ ಸಮಾಜದಲ್ಲಿ ರೂಢಿಯಲ್ಲಿರುವ ನಂಬಿಕೆಗಳಾಗಲಿ, ಸಂಪ್ರದಾಯಗಳಾಗಲಿ, ಕೇವಲ ವ್ಯಕ್ತಿಯೊಬ್ಬನ ನಿರ್ಮಾಣವಾದರೂ ಕಾಲಾನಂತರದಲ್ಲಿ ಅದಕ್ಕೊಂದು ಸಾಮೂಹಿಕ ಒಪ್ಪಿಗೆ ದೊರೆತು ಆಚರಣೆಗೆ ಬರುತ್ತದೆ. ಹೀಗೆ ಜನಪದ ನಂಬಿಕೆಗಳು ಮನುಷ್ಯನ ಮನಸ್ಸಿನ ಪರಿಸ್ಥಿತಿಗೆ ಸಂಬಂಧಿಸಿದವು ಆಗಿರುವುದರಿಂದ ಅವು ಸಾರ್ವತ್ರಿಕವಾಗಿವೆ.[2] ಸಮುದಾಯದ ಸೃಷ್ಟಿಯೆಂಬಂತೆ ಇಂಥ ನಂಬಿಕೆಗಳು, ಸಂಪ್ರದಾಯಗಳು, ಆದಿವಾಸಿಗಳಿಂದ ಹಿಡಿದು ನಾಗರೀಕನವರೆಗೂ, ಹಳ್ಳಿಯಿಂದ ಹಿಡಿದು ನಗರಗಳವರೆಗೂ ಬಲವಾಗಿ ಬೇರೂರಿರುವುದು ತಿಳಿದ ಸಂಗತಿ. ಅನುಸರಣೆಯ ಸ್ವರೂಪದಲ್ಲಿ ಬದಲಾವಣೆಗಳಾಗಿವೆಯಷ್ಟೆ. ಪೂರ್ವ ನಿರ್ಧಾರಿತ ಮಾದರಿಯಲ್ಲಿಯೇ ಹೆಣ್ಣು ಇರಬೇಕೆಂದು ನಂಬಿರುವುದೇ ಹೆಚ್ಚು. ಒಂದು ಹೆಣ್ಣು ತನಗೆ ನೋವಾದಾಗ,ಕಷ್ಟ ಬಂದಾಗಲೆಲ್ಲಾ ಅವರು

ನೆನಪಿಸಿಕೊಳ್ಳುವುದು ಪುರಾಣದ ದ್ರೌಪದಿ, ಸೀತೆ, ಸಾವಿತ್ರಿ, ಅಹಲ್ಯೆ, ದಮಯಂತಿಯರಂಥ ಪತಿವ್ರತಾ ಸ್ತ್ರೀಯರನ್ನ ಅಂಥವರೇ ಕಷ್ಟ ಅನುಭವಿಸಿದ್ದಾರೆ ಇನ್ನು ನಮ್ಮಂಥವರ ಪಾಡೇನು ಎಂದು ನಂಬಿ ಕಷ್ಟವನ್ನು ನೋವನ್ನು ಅನುಭವಿಸುವಂಥ ಅಸಹಾಯಕತೆಗೆ ಬೀಳುತ್ತಾರೆ. ಇಂಥ ನಂಬಿಕೆ, ಆಚರಣೆಗಳಿಗೆ ಕಟ್ಟುಬಿದ್ದು ಬಲಿಪಶುಗಳಾಗಿ ಆತ್ಮಾರ್ಪಣೆ ಮಾಡಿಕೊಂಡಿದ್ದಾರೆ.

ಇಲ್ಲಿ ಹೆಣ್ಣು ಹುಟ್ಟನಿಂದ ಸಾಯುವ ಕೊನೆಗಳಿಗೆಯವರೆಗೂ ಒಂದಲ್ಲ ಒಂದು ಸಂಸ್ಕಾರಕ್ಕೆ ಒಳಗಾಗುತ್ತಲೇ ಇರುತ್ತಾಳೆ. ಇದಕ್ಕೆ ಯಾವುದೇ ಜಾತಿ ಸಮುದಾಯದ ಭೇದವಿಲ್ಲ. ಹೆಣ್ಣಿನ ಭಾವನೆಗಳಿಗೆ, ಅವಳ ಸುಖಕ್ಕೆ, ಆಸೆ ಆಕಾಂಕ್ಷೆಗಳಿಗೆ ಮಾರಕವಾಗಿರುವ ಹಲವಾರು ದುಷ್ಟ ಆಚರಣೆಗಳು ಸಂಪ್ರದಾಯದ ಹೆಸರಿನಲ್ಲಿ ಆಕೆಯನ್ನು ಶೋಷಣೆ ಮಾಡಿವೆ. ಮತ್ತೆಂದೂ ಆಕೆ ಪುರುಷನ ಸರಿಸಮಾನ ನಿಲ್ಲದಂತೆ ಪುರುಷ ತನ್ನ ಯಜಮಾನಿಕೆಯನ್ನು ಸ್ಥಾಪಿಸಿಕೊಂಡು ನೇರವಾಗಿ ಸ್ತ್ರೀಯರ ಭಾವನೆಗಳನ್ನು ಹರಣ ಮಾಡಲಾಗಿದೆ. ದೇವರು, ಧರ್ಮ ನಂಬಿಕೆ, ಆಚರಣೆ, ಸಂಪ್ರದಾಯಗಳ ಹೆಸರಿನಲ್ಲಿ ತುಂಬಾ ನಾಜೂಕಿನಿಂದ ಸ್ತ್ರೀಯರ ಸ್ವಾತಂತ್ರವನ್ನು ದೋಚಿಕೊಂಡಿದ್ದಾರೆ. ಇಂಥ ಮೋಸಕ್ಕೆ, ವಂಚಕತನಕ್ಕೆ ಬಲಿಯಾದ ಮುಗ್ಧ ಮನಸ್ಸಿನ ಸ್ತ್ರೀಯರ ಸಂತಾಪಗಳು ಜನಪದರಲ್ಲಿ ಜನಜನಿತವಾಗಿದೆ.

ಪ್ರಾಚೀನ ಮಾನವನ ಪರಿಮಿತ ತಿಳುವಳಿಕೆಯು ಜನಪದ ನಂಬಿಕೆಗಳಿಗೆ ಮೂಲ. ವಸ್ತುಸ್ಥಿತಿಯೊಡನೆ ಅಸಂಬದ್ಧ ಅವೈಜ್ಞಾನಿಕ ಸಂಬಂಧವನ್ನು ಕಲ್ಪಿಸಿದಾಗ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ತಪ್ಪು ತಿಳುವಳಿಕೆ ಮತ್ತು ಅಜ್ಞಾನದಿಂದ ಹೆಚ್ಚಿನ ನಂಬಿಕೆಗಳು ಜನ್ಮ ತಾಳುತ್ತವೆ.[2] ಇಂಥ ನಂಬಿಕೆಗಳು ಅನಕ್ಷರಸ್ಥರಲ್ಲಿ ಸಹಜವಾಗಿಯೆ ಹೆಚ್ಚು ಪ್ರಭಾವಶಾಲಿಯಾಗಿರುತ್ತವೆ. ಇವರ ನಂಬಿಕೆಗಳಿಗೆ ಪೂರಕವಾಗಿ ಒತ್ತಾಸೆಯಾಗಿ ನಿಲ್ಲುವಂಥವು. ಕನಸುಗಳು, ಶಕುನಗಳು, ಕೆಟ್ಟ ಕನಸು ಬಿದ್ದರೆ, ಅಪಶಕುನವಾದರೆ ಮುಂದೆ ಏನೋ ಅನಾಹುತವಾಗುವುದು ಖಂಡಿತ ಎಂಬ ನಂಬಿಕೆ ಜನಪದರಲ್ಲಿ ಬಲವಾಗಿ ಬೇರೂರಿದೆ. ಅಂಥ ಮೌಢ್ಯ ಮತ್ತು ಕಂದಾಚಾರಗಳನ್ನು ಇಲ್ಲಿ ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ.

ಕನಸು ಜನಪದ ಸಮುದಾಯದ ಅತ್ಯಂತ ಕುತೂಹಲಕಾರಿಯಾದ ವಿಷಯವಾಗಿದೆ. ಮನಃಶಾಸ್ತ್ರದ ಹಿನ್ನಲೆಯಲ್ಲಿಯೂ ಇವುಗಳಿಗೆ ಒಂದು ಮೌಲಿಕ ಸ್ಥಾನವಿದೆ. ಮನಃಶಾಸ್ತ್ರಜ್ಞರ ಪ್ರಕಾರ ಕನಸುಗಳು ವ್ಯಕ್ತಿಯ ಮನೋಭೂಮಿಕೆಯ ಸುಪ್ತ ಸಂವೇದನೆಗಳಾಗಿವೆ. ವ್ಯಕ್ತಿಯ ಜೀವನದಲ್ಲಿ ಉಂಟುಮಾಡುವ ತಲ್ಲಣಗಳು, ಸಂಕಟಗಳು, ಸಂತಸಗಳನ್ನು ಆಯಾ ಕನಸಿನ ಹಿನ್ನಲೆಯಲ್ಲಿ ಕನಸು ಕಾಣುವವರ ಸಂದರ್ಭದಲ್ಲಿ ಅವುಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಈ ಕಥನಗೀತೆಗಳಲ್ಲಿನ ಪಾತ್ರಗಳ ಭಾವನೆ. ಅರ್ಥಮಾಡಿಕೊಳ್ಳುವಿಕೆ, ವ್ಯಾಖ್ಯಾನಗಳು ತುಂಬಾ ಕುತೂಹಲಕಾರಿಯಾಗಿವೆ.

ಈರೋಬಿ ಕಾವ್ಯದಲ್ಲಿ ಈರೋಬಿಗೆ ಕೆಟ್ಟ ಕನಸುಗಳಾಗುತ್ತವೆ. ಈರೋಬಿ ಗಾಬರಿಯಾಗುತ್ತಾಳೆ. ಇದಕ್ಕೆ ಕಾರಣ ಗಂಡ ಶೆಟ್ಟಿಶಂಕರರಾಯ ಪರ ಊರಿಗೆ ಹೋಗಿದ್ದಾನೆ. ಈರೋಬಿ ತನಗೆ ಬಿದ್ದ ಕನಸನ್ನು ಅತ್ತೆಯ ಹತ್ತಿರ ಹೇಳುತ್ತಾಳೆ.

ಅತ್ಯಮ್ಮ ಅತ್ಯಮ್ಮ ಕೆಟ್ಟ ಸ್ವಪ್ನವ ಕಂಡೆ
ದತ್ತುಳ್ಳಿಕಾರ ನಿನಮಗ - ಮನಗೋ ಮಂಚ
ನಿಟ್ಟೆಲ್ಲ ಕತ್ತಿ ಕವಿಯಾದೆ [೪]

ಹುತ್ತದ ಮೇಗಲ ಕಾಗೆ ನೆತ್ತರ ಕಾರೋದ ಕಂಡೆ
ಶೆಟ್ಟಿಶಂಕರರಾಯ ಬದುಕೋದ - ಸಪುನದ
ಕಂಡೆನಮ್ಮ ಕಾಲುಗಳಿಗೇಲಿ [೫]

ಮೂಗುತಿ ಮುರಿಯೋದ ಕಂಡೆ ಮುಂಬಲ್ಲು ಸಿಡಿಯೋದ ಕಂಡೆ
ಗಿಂಡಿ ತುಂಡಾಗಿ ಒಡೆಯೋದ - ಸಪುನವ
ಕಂಡೆನಮ್ಮ ಕಾಲುಗಳಿಗೇಲಿ [೬]

ಹೀಗೆ ಬೀಳುವ ಸ್ವಪ್ನಗಳು ಬೆಳಗಿನ ಜಾವ ಬಿದ್ದಲ್ಲಿ ಅಂಥ ಸ್ವಪ್ನಗಳು ನನಸಾಗುತ್ತವೆ ಎನ್ನುವುದೊಂದು ಜನಪದ ನಂಬಿಕೆ. ಇಲ್ಲಿ ಈರೋಬಿಗೆ ಬಿದ್ದ ಕೆಟ್ಟ ಸ್ವಪ್ನ ಆಕೆಯ ಗಂಡನ ಸಾವಿನ ಮುನ್ಸೂಚನೆಯನ್ನೇ ಕೊಟ್ಟಂತಿದೆ. ಇವೇ ಸ್ವಪ್ನಗಳು ನಿಜವಾಗಿ ಅಂದರೆ ಇಲ್ಲಿ ಈರೋಬಿಯ ಗಂಡ

ಹೆಂಡತಿ ಬಟ್ಟಲಲ್ಲುಣುತಾಳೆಂದು ಚಿನ್ನದ ಹರಿವಾಣ ತರಲೆಂದು ಗಟ್ಟದ ಕೆಳಗೆ ಹೋಗಿದ್ದಾನೆ. 'ಕಾಗೆ ಕೂರೋದಕ್ಕೂ ಟೊಂಗೆ ಮುರಿಯೋದಕ್ಕೂ ಸರಿಯಾಯ್ತು '' ಎನ್ನುವ ಹಾಗೆ ಇಲ್ಲಿ ಈರೋಬಿಗೆ ದುಃಸ್ವಪ್ನವಾಗಿದೆ ಅಲ್ಲಿ ಗಂಡ ರಣದಲ್ಲಿ ಮರಣಹೊಂದಿದ್ದಾನೆ. ಹೀಗೆ ಈರೋಬಿಯ ಆತಂಕ ನಿಜವಾಗುವಂತೆ ಮಾಡುತ್ತದೆ. ಇಂಥ ಕಥನಗೀತೆಗಳನ್ನು ಕೇಳಿಸಿಕೊಳ್ಳುವವರು ಸಹ ಇದೇ ಸಮಾಜದ ಕೇಳುಗರಾದುದರಿಂದ ಕನಸಿಗೆ ಮತ್ತಷ್ಟು ಬಲವಾದ ನಂಬಿಕೆ ಪ್ರಾಪ್ತವಾಗುತ್ತದೆ. ಆಗ ಜನಪದ ನಂಬಿಕೆಗಳು ಮತ್ತಷ್ಟು ದೃಢವಾಗುತ್ತವೆ ನಂಬುವಂತೆ ಪ್ರೇರೇಪಿಸುತ್ತವೆ.

ಬಹಳ ಪ್ರಸಿದ್ಧವಾದ 'ಕೆರೆಗೆ ಹಾರ ' ಗೀತೆಯಲ್ಲಿ ಮಾದೇವರಾಯನಿಗೆ ಬಿದ್ದ ಕೆಟ್ಟ ಕನಸು ಅವನನ್ನು ದಿಗಿಲುಗೊಳಿಸುತ್ತದೆ.

ಸೆಲ್ಯಾ ಸುಟ್ಟಂಗಾತು ಕೋಲು ಮುರಿದ್ಹಾಂಗಾತು
ಕಟ್ಟಿಸದ ಮಾಡೆಲ್ಲ ತಟ್ಟನೆ ಬಿದ್ದಂಗಾತು [2]

ಇಂಥ ಕನಸಿನ ಮೂಲಕ ಅನಾಹುತದ ಸೂಚನೆ ಮನವನ್ನು ತಟ್ಟುತ್ತದೆ. ಉದ್ವೇಗಕ್ಕೊಳಗಾಗುತ್ತಾನೆ. ಮಾದೇವರಾಯ ಗಾಬರಿಗೊಂಡ ತೀವ್ರತೆ ಹೇಗಿತ್ತೆಂದರೆ ಆತ ಕುದುರೆಗೆ ಜೇನು ಕೂಡ ಹಾಕದೆ 'ಬತ್ತಲೆ ' ಕುದುರೆಯನ್ನೇರಿ ದೌಢಾಯಿಸಿ ಮನೆಗೆ ಬರುತ್ತಾನೆ. ಬಂದವನಿಗೆ ಎಲ್ಲರಿಂದಲೂ ಅಸಮಾಧಾನದ ಉತ್ತರ ಕೊನೆಗೆ ಭಾಗೀರತಿಯ ತವರಿಗೆ ಹೋದರೆ ಅಲ್ಲೂ ಹಾರಿಕೆಯ ಉತ್ತರಗಳೇ ಮತ್ತಷ್ಟು ದಿಗಿಲುಗೊಂಡ ಮಾದೇವರಾಯ ಭಾಗೀರತಿಯ ಗೆಳತಿಯ ಮನೆಗೆ ಹೋಗುತ್ತಾನೆ. ಗೆಳತಿ ಭಾಗೀರತಿ 'ಕೆರೆಗೆ ಹಾರ' ವಾದ ವಿಷಯ ತಿಳಿಯುತ್ತದೆ. ಮಾದೇವರಾಯನಿಗೆ ತಾನು ಕಂಡ ಕೆಟ್ಟ ಕನಸು ನಿಜವೆನಿಸತ್ತುದೆ. ಕನಸಿನಿಂದ ಗಾಬರಿಗೊಂಡು ಏನೋ ಅನಾಹುತವಾಗಿದೆ ಎಂದು ದಿಗಿಲುಗೊಂಡು ಬಂದವನಿಗೆ ಮನೆಯಲ್ಲಿ ನಡೆದ ಘಟನೆಯು ತಾಳಿ ಹೊಂದುತ್ತದೆ. ತನ್ನ ಪ್ರೀತಿಯ ಹೆಂಡತಿಯ ಬಲಿ ಅವನನ್ನು ಮತ್ತಷ್ಟು ಕುಸಿಯುವಂತೆ ಮಾಡಿತು. ಆದ ಅನ್ಯಾಯವನ್ನು ಪ್ರತಿಭಟಿಸಿ ತಂದೆಯನ್ನು ಪ್ರಶ್ನಿಸಲಾಗದೆ ಮಾದೇವರಾಯ ಹಿಂದೆ ಮುಂದೆ ಆಲೋಚಿಸದೆ ಕಣ್ಣೀರು ಸುರಿಸಿ ತಾನೂ ಅದೇ ಕೆರೆಗೆ ಹಾರುತ್ತಾನೆ. ಇದೊಂದು ಅಪೂರ್ವವಾದ ಕಥೆ, ಪ್ರೀತಿಯ ಹೆಂಡತಿಗಾದ

ಅನ್ಯಾಯಕ್ಕೆ ತಾನು ಏನೂ ನ್ಯಾಯಕೊಡಲಾಗದೆಂದು ತಿಳಿದು ತನ್ನನ್ನೇ ಬಲಿಕೊಟ್ಟುಕೊಳ್ಳುವುದು ಎಲ್ಲೋ ಸ್ವಲ್ಪ ಮಟ್ಟಿಗೆ ಆದ ಅನ್ಯಾಯಕ್ಕೆ ನ್ಯಾಯ ಒದಗಿಸಿದಂತೆ ಸಮಾಧಾನವಾಗುತ್ತದೆ.

ಗುಣಸಾಗರಿ ಕಾವ್ಯದಲ್ಲಿ ಚೆಂಪಾಲುಸೆಟ್ಟಿಗೆ ಸ್ವಪ್ನವಾಗುತ್ತದೆ. ಆದರೆ ಇಲ್ಲಿ ಸ್ವಪ್ನದ ಯಾವುದೇ ವಿವರಗಳು ಸಿಗುವುದಿಲ್ಲ. ವ್ಯಾಪಾರಕ್ಕೆಂದು ದೂರದ ಊರಿಗೆ ಹೋದ ಚೆಂಪಾಲುಸೆಟ್ಟಿ ಕಂಡ ಕನಸಿನಿಂದ ವಿಚಲಿತನಾಗಿ ತತ್‌ಕ್ಷಣವೇ ಎತ್ತಿನಗಾಡಿಯಲ್ಲಿ ಸಾಮಾನನ್ನೆಲ್ಲ ಹೇರಿಕೊಂಡು ಊರಿಗೆ ಬರುತ್ತಾನೆ. ಗುಣಸಾಗರಿ ಕಷ್ಟದಲ್ಲಿದ್ದದ್ದು ನಿಜ. ಆದರೂ ಮಡಿವಾಳಪ್ಪನ ಮನೆಯಲ್ಲಿ ಆಶ್ರಯ ಪಡೆದು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಊರಿಗೆ ಬಂದ ಚೆಂಪಾಲುಸೆಟ್ಟಿಗೆ ಹೆಂಡತಿಯಾದ ಗುಣಸಾಗರಿಗೆ ಆದ ಅನ್ಯಾಯವೇನು ಎಂಬುದು ಗೊತ್ತಾಗುತ್ತದೆ. ಇಲ್ಲೂ ಕೂಡ ಚೆಂಪಾಲುಸೆಟ್ಟಿಗೆ ಬಿದ್ದ ಕನಸಿಗೂ ಗುಣಸಾಗರಿಗೆ ಆದ ತೊಂದರೆಗೂ ಎಲ್ಲೊ ಒಂದು ರೀತಯ ಸಂಬಂಧವಿರುವಂತೆ ಕಥಾನಕ ಚಿತ್ರಣಗೊಂಡಿದೆ.

ಕೆಂಚವ್ವ ಕೆರೆಗೆ ಹಾರವಾಗುತ್ತಾಳೆ. ಮದಗದ ಕೆಂಚವ್ವನ ಕಥೆ ಈ ಬಗ್ಗೆ ಕುತೂಹಲಕಾರಿಯಾದುದು. ವಡ್ಡರ ಗೌಡನಿಗೆ ಸ್ವಪ್ನವಾಗುತ್ತದೆ. "ಶರಣೆ ಕೆಂಚವ್ವನ ಕೆರೆ ಕೇಳ್ಯಾತು"[೮] ಎಂದು ಮದಗದ ಊರಿಗೆ ಬಂದು ಮಲ್ಲೇಗೌಡನಿಗೆ ಹೇಳುತ್ತಾನೆ. ವಡ್ಡರ ಗೌಡನ ಸ್ವಪ್ನವನ್ನೇ ನಂಬಿ ಕೆಂಚವ್ವನನ್ನು ಬಲಿಕೊಡುತ್ತಾರೆಂದರೆ ಸ್ವಪ್ನಗಳಿಗೆ ಇದ್ದ ಮಹತ್ವದ ಅರಿವಾಗುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿ ಬಂದು ಇಂಥ ಸಂಗತಿಯನ್ನು ಹೇಳಿದರೂ ಸಾಕು ಸಮಾಜದ ಹಿತಕ್ಕಾಗಿ ಬಲಿಯನ್ನು ಕೊಡುವಷ್ಟರಮಟ್ಟಿಗೆ ಸ್ವಪ್ನಗಳು ಜನರಲ್ಲಿ ನಂಬಿಕೆ ಹುಟ್ಟಿಸಿವೆ. ಇಂಥ ಒಂದೋ ಎರಡೋ ಪ್ರಸಂಗಗಳು ನಿಜವಾದಲ್ಲಿ ಅವನ್ನೆಲ್ಲಾ ನಂಬಿ ಸಂಪ್ರದಾಯಬದ್ಧವಾಗಿ ಆಚರಣೆಗೊಳ್ಳುತ್ತವೆ. ಹೀಗೆ ಕೆರೆಗೆ ಹಾರವಾದ ಮದಗದ ಕೆಂಚಮ್ಮ ತನ್ನ ಗಂಡನಿಗೆ ಇನ್ನೊಂದು ಮದುವೆ ಮಾಡಿಸುತ್ತಾರೆಂದು ತಿಳಿದು ತನ್ನ ಸ್ಥಾನವನ್ನು ಬೇರೆ ಇನ್ನಾರೋ ಬಂದು ಆಕ್ರಮಿಸುವುದು ಆಕೆಗೆ ಇಷ್ಟವಿಲ್ಲ. ಮಾತ್ರವಲ್ಲ ತನ್ನ ಕೂಸು ಅನಾಥವಾಗಬಾರದೆಂಬ ಜೀವನ ಪ್ರೀತಿ ಎದ್ದು ಕಾಣುತ್ತದೆ. ಆದಕಾರಣ ಕೆಂಚವ್ವ ತನ್ನ ತಂಗಿ ಸಣ್ಣ

ಕೆಂಚವ್ವನನ್ನು ತನ್ನ ಗಂಡನಿಗೆ ಲಗ್ನ ಆಗುವಂತೆ ಒತ್ತಾಯಿಸುತ್ತಾಳೆ. ಒತ್ತಾಯಕ್ಕೆ ಮಣಿದ ಗಂಡ ಬಸವೇಗೌಡ ಸಮ್ಮತಿಸಿ ಹೆಣ್ಣು ಕೇಳಲು ಹೋದರೆ,

ಆಗೊಂದು ಕೊಡ್ಟು ಕೆರೆಗಾವುತಿ ಕೊಟ್ಟೆರಿ
ಈಗೊಂದು ನಾವು ಕೊಡಲಾರೆವು ಶಿವನ [೯]

ಎಂದು ಹೆತ್ತವರು ದುಃಖಿಸಿ ನಿರಾಕರಿಸುತ್ತಾರೆ. ಆದರೆ ಕೆಂಚವ್ವ ಬಿಡಲಿಲ್ಲ. ತಂಗಿಯ ಸ್ವಪ್ನಕ್ಕೆ ಹೋಗಿ

ನನ್ನ ಗಂಡಂಗೆ ಲಗನ ಆಗಬೇಕೆಂತೇಳಿ
ನಿನಗೆ ನಾನು ವಿಳೇವ ಇಟ್ಟಿದೆ
ನನಗಂಡನ ಬಿಟ್ಟು ಬೇರೆಯವನಾದರೆ
ನಿನ ಬಾಳ ನಾನು ಸುಟ್ಟು ಬಿಡುವೆ [೧೦]

ಅಲ್ಲಿಗೆ ನಿಲ್ಲಲಿಲ್ಲ ಅವಳ ಪ್ರತಿಭಟನೆ, ತಾಯಿಯ ಸ್ವಪ್ನಕ್ಕೆ ಹೋಗುತ್ತಾಳೆ.

ಸಣ್ಣ ಕೆಂಚವ್ವನ ಕೊಡದಿದ್ರೆ
ನಿಮ್ಮ ಮಂತ್ಯಾನ್ನ ನಾನು ಬಿಡಾಳಲ್ಲ [೧೧]

ಹೀಗೆ ಕೆಂಚವ್ವ ಎಲ್ಲರ ಕನಸಿಗೂ ಹೋಗಿ ಬೆದರಿಕೆ ಒಡ್ಡುತ್ತಾಳೆ. ಕೆಂಚವ್ವ ಸ್ವಪ್ನದಲ್ಲಿ ಹೇಳಿದ್ದನ್ನು ಎಲ್ಲರೂ ವಿಚಾರ ಮಾಡಿಕೊಂಡು ಸ್ವಪ್ನದಲ್ಲಿ ಹೇಳಿದಂತೆ ಮುಂದೆ ತಮ್ಮ ಮನೆತನಕ್ಕೆ ಕೇಡಾಗಬಹುದೆಂದು ಹೆದರಿ ಮನಸ್ಸಿಲ್ಲದಿದ್ದರೂ ಸಣ್ಣ ಕೆಂಚವ್ವನನ್ನ ಬಸವೇ ಗೌಡನಿಗೆ ಕೊಟ್ಟು ಲಗ್ನ ಮಾಡುತ್ತಾರೆ. ಜನಪದರು ಇಂಥ ಸ್ವಪ್ನಗಳನ್ನು ವಿರೋಧಿಸಿದವರಲ್ಲಿ ಹಾಗೂ ಸ್ವಪ್ನಗಳು ಸುಳ್ಳಾದದ್ದು ಇಲ್ಲ. ಹೀಗೆ ಅನೇಕ ಸಂದರ್ಭಗಳಲ್ಲಿ ಇಂಥ ಸ್ವಪ್ನಗಳು ಜನರಲ್ಲಿ ನಂಬಿಕೆ ಹುಟ್ಟಿಸುವ ಹಾಗೆ ಸ್ವಪ್ನಕ್ಕು - ವಾಸ್ತವದಲ್ಲಿ ನಡೆಯುವ ಘಟನೆಗಳಿಗೂ ಸಂಬಂಧವುಂಟು ಎಂಬಂತೆ ಚಿತ್ರಣಗೊಳ್ಳುತ್ತವೆ. ಹೀಗಾಗಿ ಸಮಾಜದಲ್ಲಿ ಇಂಥ ನಂಬಿಕೆಗಳು ಆಳವಾಗಿ ಬೇರುಬಿಟ್ಟು ಮುಂದಿನ ತಲೆಮಾರಿಗೂ ವರ್ಗಾಯಿಸಲ್ಪಡುತ್ತವೆ.

ಹೀಗೆ ಕಥನ ಗೀತೆಗಳಲ್ಲಿ ಕನಸುಗಳು ಅಥವಾ ಸ್ವಪ್ನಗಳು ಮುಖ್ಯ ಪಾತ್ರವಹಿಸುತ್ತವೆ. ಕನಸುಗಳ ಪರಿಣಾಮಗಳನ್ನು ಭೀಕರವಾಗಿ ನಿರೂಪಿಸಲಾಗುತ್ತದೆ. ಮನೆಯಲ್ಲಿ ಮತ್ತು ಊರಿನಲ್ಲಿ ನಡೆಯುವ ಘಟನೆಗಳನ್ನು ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲಾರದವರಷ್ಟು ಮುಗ್ಧರೇನಲ್ಲ ಬಲಿಯಾಗುವ ಈ ಹೆಣ್ಣುಮಕ್ಕಳು. ಆದರೆ ವ್ಯವಸ್ಥೆಯ ಕೈಗೊಂಬೆಗಳಾಗಿರುವುದರಿಂದಲೂ, ಹಾಗೆಯೇ ಸೊಸೆಯಾಗಿ

ಬಂದವಳನ್ನು ಪ್ರಾಣಿಗಳಂತೆ ಬಲಿಯಾಗಿಸುವುದರಲ್ಲಿ ಸಮಾಜದ ಹಿತವಿದೆ ಎಂಬ ನಂಬಿಕೆ ಹುಟ್ಟಿಸಿರುವುದರಿಂದ ಇನ್ನೂ ಹೆಚ್ಚು ಹೆಚ್ಚು ಬಲಿ ಕೊಡುವ ವಿಷಯಕ್ಕೆ ಬಲ ದೊರೆತಂತಾಗುವುದನ್ನು ಕಾಣಬಹುದು. ಕುತೂಹಲದ ವಿಷಯವೆಂದರೆ 'ಮದಗದ ಕೆಂಚವ್ವ' ನ ವಿಷಯದಲ್ಲಿ ಕೆರೆ ಕಟ್ಟುವ ವಡ್ಡರಗೌಡನೆಗೆ ಬೀಳುವ ಕನಸನ್ನು ಪ್ರಶ್ನಿಸದೇ ಒಪ್ಪಿಕೊಳ್ಳುವ ಸಂದರ್ಭ. ಕೆರೆ ಕಟ್ಟುವ ಕೆಲಸಗಾರ ಮಾತ್ರವೇ ಅಲ್ಲ. ಅವನು, ಬದಲಾಗಿ ವಡ್ಡರಗೌಡನೆಂದೇ ಸಂಬೋದಿಸಲಾಗಿದೆ. ಇದು ಅಧ್ಯಯನ ಯೋಗ್ಯವೆನಿಸುತ್ತದೆ.

ಕಥನ ಕಾವ್ಯಗಳಲ್ಲಿ ಕನಸಿನಷ್ಟೇ ಪರಿಣಾಮಕಾರಿಯಾದವು ಶಕುನಗಳು. ಈ ಶಕುನಗಳು ಬಹಳ ಅಪಾಯಕಾರೀ ನಂಬಿಕೆಗಳೂ, ಮಗು ಹುಟ್ಟುತ್ತಲೇ ಒಳ್ಳೆಯ ಆಥವಾ ಕೆಟ್ಟ ಶಕುನವನ್ನು ಹೊತ್ತುಕೊಂಡೇ ಬಂದರುತ್ತವೆಂಬುದೊಂದು ಜನಪದರ ನಂಬಿಕೆ. ಇಂಥ ಶಕುನಗಳ ವಿಚಾರವೇ ಆಗಲಿ, ಸ್ವಪ್ನಗಳ ವಿಚಾರಗಳೇ ಆಗಲಿ ಅವು ನಾಗರೀಕರೂ ಆಚರಿಸುತ್ತಿರುವುದು ಸೋಜಿಗದ ಸಂಗತಿಯೇ ಸರಿ.

ಹೆಣ್ಣು ಸಂಸಾರದ ಕಣ್ಣು ಎಂದಾದವಳು ನಂತರದ ದಿನಗಳಲ್ಲಿ ಹೆಣ್ಣು ಸಂಸಾರದ ಹುಣ್ಣಾಗಿ ಕಾಣತೊಡಗಿದಳು. ಹೆಣ್ಣು ಹುಟ್ಟುವುದೇ ಒಂದು ಅಪಶಕುನ ಎಂಬ ನಂಬಿಕೆ ಹುಟ್ಟಿಸುವ ಎಷ್ಟೋ ಪ್ರಸಂಗಗಳು ನಮ್ಮಲ್ಲಿವೆ. ಒಳ್ಳೆ ಕೆಲಸ ಕಾರ್ಯಗಳಲ್ಲಿ, ಹಬ್ಬಹರಿದಿನಗಳಲ್ಲಿ, ಪೂಜಾವಿಧಿ, ಧರ್ಮಕಾರ್ಯಗಳಲ್ಲಿ ವಿಧವೆಯರು, ಬಂಜೆಯರು ಬಂದಲ್ಲಿ ಅದು ಅಪಶಕುನ ಎಂದು ಬಾವಿಸುತ್ತಾರೆ. ಅಂಥವರು ದಾರಿಯಲ್ಲಿ ಎದುರಿಗೆ ಬರಬಾರದು. ಬಂದರೆ ಅಪವಿತ್ರವಾಗುತ್ತದೆ ಎಂದು ನಂಬಿ ಆಕೆಗೆ ಚುಚ್ಚಿ ಚುಚ್ಚಿ ಮಾತನಾಡುತ್ತಾರೆ. ಇನ್ನು ಶುಭಕಾರ್ಯಗಳಲ್ಲಿ, ಒಳ್ಳೆ ಮಾತನಾಡುವಾಗ ಮಧ್ಯದಲ್ಲಿ ಸೀನುವುದು ಅಪಶಕುನ. ಹಾಗೆಯೇ ಇಂಥ ಶುಭಕಾರ್ಯಗಳು ನಡೆಯುವಾಗ, ಶುಭಕಾರ್ಯಗಳಿಗೆ ಹೋಗುವಾಗ ಕೆಲವು ಪ್ರಾಣಿ ಪಕ್ಷಿಗಳು ಅಡ್ಡ ಬಂದರೆ ಅಪಶಕುನ ಎಂದು ಭಾವಿಸುವುದೂ ಉಂಟು. ಅದರಲ್ಲೂ ಬೆಕ್ಕು ಅಡ್ಡ ಬಂದರೆ, ಬೆಕ್ಕು ಸೀತರೆ ಆ ಕೆಲಸಕ್ಕೆ ವಿಘ್ನಗಳು ತಪ್ಪದೇ ಬರುತ್ತವೆ ಎಂಬುದು ಜನಪದರ ನಂಬಿಕೆ. ಇಂಥ ನಂಬಿಕೆಗಳು ಇಂದಿಗೂ ಆಚರಣೆಯಲ್ಲಿವೆ. ಇಂಥ

ಅಪಶಕುನಗಳಾಗುವುದಕ್ಕೂ ಅದಕ್ಕೆ ತಕ್ಕಂತೆ ಅವಘಡ ಸಂಭವಿಸುವುದಕ್ಕೂ ಸರಿಯಾದಂತೆ 'ನಾಗವ್ವ'ನ ಗಂಡನ ಸಾವು.

'ನಾಗವ್ವ' ಗೀತೆಯಲ್ಲಿ ಸೀರೆ ಉಡಲೂ ಅರಿಯದ ಬಾಲೆ ನಾಗವ್ವನ ಲಗ್ನ ನಿಶ್ಚಯವಾಗಿದೆ. ಇದೊಂದು ಮಂಗಳ ಕಾರ್ಯ. ಲಗ್ನಕ್ಕೆ ಸಕಲ ಸಿದ್ಧತೆಗಳು ನಡೆದಿವೆ, ಮದುಮಗಳಿಗೆ, ಊರಿನ ಅಕ್ಕಪಕ್ಕದ ಮುತ್ತೈದೆಯರಿಗೆ ಬಳೆತೊಡಿಸುವುದೊಂದು ಸಂಪ್ರದಾಯ. ಅದರಂತೆ ನಾಗವ್ವನಿಗೆ ಬಳೆಗಾರ ಬಳೆತೊಡಿಸುತ್ತಿದ್ದಾನೆ. ಆಗ ಅಪಶಕುನವಾಗುತ್ತದೆ. ಮಂಗಳ ಕಾರ್ಯಗಳು ನಡೆಯುವಾಗ ಮಧ್ಯದಲ್ಲಿ ಏನಾದರೂ ಅಪಶಕುನಗಳಾದರೆ ಮುಂದೇ ಏನೋ ಅಪಾಯವಾಗುತ್ತದೆ. ಕಷ್ಟ ಬರುತ್ತದೆ ಎನ್ನುವುದೊಂದು ನಂಬಿಕೆ ಜನಪದರ ಮನಸ್ಸನ್ನು ಕಂಗೆಡಿಸುತ್ತದೆ. ಅದಕ್ಕೆ ಸರಿಯಾಗಿ ಮಧ್ಯದಲ್ಲಿ ಯಾರೋ ಸೀತದ್ದಕ್ಕಾಗಿ

ಬಳೆಯ ತೊಡುವಾಗ ಬಲಗಡೆ ಸೀತವರ‍್ಯಾರೆ
ಬಳೆಗಾರ ಶೆಟ್ಟಿ ಬಿಡುಕೈಯ। ನಾಗವ್ವನ
ಅರೆಬಳೆಗೆ ಲಗುನ ಒದಗ್ಯವ।[೧೨]

ಹಾಗೆಯೇ ಬೆಕ್ಕು ಸೀತದ್ದಕ್ಕಾಗಿ

ಬಳೆಯ ತೊಡುವಾಗ ಬೆಕ್ಕೆರಡು ಸೀತಾವು
ಬಳೆಗಾರ ಶೆಟ್ಟಿ ಬಿಡುಕೈಯ। ನಾಗವ್ವನ
ಅರೆಬಳೆಗೆ ಲಗುನ ಒದಗ್ಯವ।[೧೩]

ಪಾಪ ಬೆಕ್ಕಿಗೇನು ಗೊತ್ತು ಚೆಂಧಯ್ಯ ಸಾಯುತ್ತಾನೆಂದು. ಆದರೆ ಕಾಕತಾಳೀಯ ಹೀಗೆ ಆಗುವ ಅಪಶಕುನಗಳಿಂದ ಮುಂದೆ ಏನೋ ತೊಂದರೆ ಕಾದಿದೆಯೆಂದು ಆತಂಕಗೊಳ್ಳುತ್ತಾರೆ. ಅವರ ನಂಬಿಕೆಯಂತೆ ಕಥೆಯಲ್ಲಿ ದುರ್ಘಟನೆಗಳು ಸಂಭವಿಸುತ್ತವೆ. ಹೀಗೆ ಇಲ್ಲಿ ಆದ ಅಪಶಕುನಕ್ಕೂ ಇನ್ನೆಲ್ಲೋ ದೂರದಲ್ಲಿರುವ ಗಂಡನಾಗುವವನಿಗೂ ಯಾವುದೇ ಸಂಬಂಧವಿಲ್ಲ. ಆದರೆ ದೂರದಲ್ಲಿದ್ದ ಚೆಂದಯ್ಯ ಮಡಿದಿದ್ದಾನೆ. ಈ ಕಥೆಯ ವೈಶಿಷ್ಟ್ಯವೆಂದರೆ ಚೆಂದಯ್ಯ ಕೇವಲ ಗೊತ್ತು ಮಾಡಿದ ಗಂಡು ಮಾತ್ರ. ವಿವಾಹವಾಗದೇ ಇದ್ದರೂ, ವಿವಾಹಕ್ಕೆ ಸಂಬಂಧಿಸಿದ ಬಳೆತೊಡಿಸುವಾಗ ನಡೆದ ಘಟನೆ ಮಾತ್ರಕ್ಕೆ ಪತಿ ಸಹಗಮನಕ್ಕೆ ಒಳಗಾಗುವ 'ನಾಗವ್ವ' ದುರಂತ ನಾಯಕಿ. ಸಾಂಪ್ರದಾಯದ ತೀವ್ರತೆ,

ಮತ್ತು ಅದನ್ನು ಪಾಲಿಸುವ ಹೆಣ್ಣು ಸೀರೆ ಉಡಲರಿಯದವಳು. ಇಂಥವಳು ಇಲ್ಲಿಯ ಸಮಾಜವು ಸೃಷ್ಟಿಸಿಕೊಂಡಿರುವ ಕ್ರೌರ್ಯಕ್ಕೆ ಬಲಿಯಾಗುತ್ತಾಳೆ.

ದುಃಸ್ವಪ್ನವಾಗುವುದಿರಲಿ, ಬೆಳಕು ಹರಿದ ಮೇಲೂ ಹೆಚ್ಚು ಹೊತ್ತು ಮಲಗುವುದು ಕೇಡಿನ ಸಂಕೇತ, ಹಾಗೆ ಬಹಳ ಹೊತ್ತು ಮಲಗುವುದೂ ಅಪಶಕುನ ಎಂದು ಕೂಡ ಜನಪದರು ಭಾವಿಸುವುದುಂಟು. 'ಹುಳಿಯಾರು ಕೆಂಚಮ್ಮ' ಹುಳಿಯಾರು ಕೆರೆಗೆ ಆಹುತಿಯಾಗಬೇಕಾದವಳು, ಮನಸ್ಸಿನಾಳದಲ್ಲಿ ನೋವು, ದುಃಖ, ವೇದನೆ. ಗಂಡ ಏನೂ ಅರಿಯದವನ ಹಾಗೆ ನಿದ್ರಿಸಿದ್ದಾನೆ. ಕೆಂಚಮ್ಮ ತವರಿನವರಿಗೆ ಸುದ್ದಿ ಮುಟ್ಟಿಸುವ ತರಾತುರಿಯಲ್ಲಿ ಗಂಡನ ಅರಮನೆಗೆ ಬರುತ್ತಾಳೆ. ಇನ್ನೂ ಮಲಗೇ ಇರುವ ಗಂಡನನ್ನು ನೋಡಿ ಗಾಬರಿಗೊಂಡು

ಪಟ್ಟೆ ಮಂಚದ ಮೇಲೆ ಇಪ್ಪತ್ತು ಸೋಗಿನ ನಿದ್ರೆ
ಸೋಗಿನ ನಿದ್ರೆ ದೊರಿನಿದ್ರೆ ಮರಾಯರೆ
ಕೇಡಿನ ನಿದ್ರೆ ಹರಿದಿಲ್ವೆ? [೧೪]

'ಚಿಂತೆ ಇಲ್ಲದವನಿಗೆ ಸಂತೇಲೂ ನಿದ್ರೆ ಬಂತಂತೆ' ಎಂಬಂತೆ ಗಂಡನ ಸುಖದ ನಿದ್ರೆಯನ್ನು ಕಂಡು ತನ್ನ ಸಾವಿಗೆ ಮನ್ಸೂಚನೆಯಂತೆ ಕೇಡಿನ ನಿದ್ರೆಯಿದು ಎಂದು ಭಾವಿಸುತ್ತಾಳೆ. ಅದನ್ನ ಸೂಚ್ಯವಾಗಿ ಮತ್ತೆ ಮತ್ತೆ 'ಕೇಡಿನ ನಿದ್ರೆ ಎಂದು ಹೇಳುತ್ತಾ

ನಿಮ ಕೇಡಿನ ನಿದ್ರೆ ಹರಿದಿಲ್ವೆ ಮಾರಾಯರೆ
ಜೇನು ಕಲ್ಲಿಗ್ವಾಲೆ ಬರಿಯೇಳಿ [೧೫]

ಎಂದು ಎಚ್ಚರಿಸುತ್ತಾಳೆ. ಇಲ್ಲಿ ಗಂಡನಿಗೆ ಕವಿದಿರುವ ನಿದ್ರೆ 'ಮಾಯದ ನಿದ್ರೆ', 'ಸೋಗಿನ ನಿದ್ರೆ' ಎಂಬ ಮಾತಿನಲ್ಲಿ ಗಂಡ ನಿಶ್ಚಿಂತೆಯಿಂದ ಇರುವುದು ಅವಳಿಗೆ ಅನುಮಾನ ತರಿಸುತ್ತದೆ. ಆದರೆ ಕೆಂಚಮ್ಮನಿಗೆ ಮಾವನ ಚಿಂತೆ ಗೊತ್ತಾಗುತ್ತದೆ. ಬಾಯಿಬಿಟ್ಟು ಮಾವ ಕೆಂಚಮ್ಮನನ್ನು ಬಲಿಗಾಗಿ ನಿರ್ಧರಿಸುವುದಿಲ್ಲ. ಆದರೂ ತಾನೇ ತವರಿಗೆ ಓಲೆ ಬರೆಸಿ ತ್ಯಾಗಕ್ಕೆ ಅಣಿಯಾಗುತ್ತಾಳೆ.

ಜಗತ್ತಿನ ಯಾರೇ ಆದರೂಮಕ್ಕಳನ್ನು ಬಯಸದವರಿಲ್ಲ ಮಕ್ಕಳಿಲ್ಲದ ಮನೆ ಸ್ಮಶಾನ. ಬಂಜೆಯ ಬದುಕು ನಿರರ್ಥಕ. ಪುತ್ರರಿಲ್ಲದವರಿಗೆ ಮುಕ್ತಿ ಇಲ್ಲ. ಇತ್ಯಾದಿ ನಂಬಿಕೆಗಳು ರೂಢಿಯಲ್ಲಿವೆ. ಮಕ್ಕಳನ್ನು ಪಡೆಯದಿರುವ ದಂಪತಿಗಳ ಹೆಣ್ತನ, ಗಂಡಸುತನಗಳ ಅಸ್ತಿತ್ವವನ್ನೇ ಅಲುಗಾಡಿಸುವಂಥ ಮಾರ್ಮಿಕವಾದ, ಹೀನಾಯವಾದ ಕಟುನುಡಿಗಳಿಗೆ ತುತ್ತಾಗಬೇಕಾಗುತ್ತದೆ. ಕೊನೆಗೆ ಯಾವ ಮಟ್ಟಕ್ಕೆ ತಲುಪುತ್ತದೆಂದರೆ 'ಹೆತ್ತವರಿಗೆ ಹೆಗ್ಗಣ ಮುದ್ದು' ಎನ್ನುವ ತನಕ, ಯಾವುದೋ ಒಂದು ಮಗುವಾದರೆ ಸಾಕು ಎಂದು ಪರಿತಪಿಸುವಂತಾಗುತ್ತದೆ. ಕೆಲವೊಮ್ಮೆ ಮಕ್ಕಳಿಲ್ಲದ ಬಂಜೆಯಾಗಿ ಬಾಳುವುದಕ್ಕಿಂತ ಸಾಯುವುದೇ ಮೇಲು ಎನ್ನುವಂತ ಹಾಗೂ ಕೆಲವೊಮ್ಮೆ ತನ್ನ ಗಂಡನಿಗೆ ಇನ್ನೊಂದು ಲಗ್ನ ಮಾಡಿಸಿದರೆ ಅವಳಿಗಾದರೂ ಮಕ್ಕಳಾಗಬಹುದೆನ್ನುವಂಥ ಮಟ್ಟಕ್ಕೂ ತಲುಪುತ್ತದೆ.

ವಿಶೇಷವಾಗಿ ಪಿತೃಪ್ರಧಾನ ಸಮಾಜಗಳಲ್ಲಿ ಪ್ರಾಚೀನ ಕಾಲದಿಂದಲೂ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳೇ ಶ್ರೇಷ್ಠ ಅಪೇಕ್ಷಣೀಯ ಎಂಭ ಪರಿಭಾವನೆ ಬೆಳೆದು ಬಂದಿದೆ. ಇದಕ್ಕೆ ಕಾರಣಗಳಿಲ್ಲದೇ ಇಲ್ಲ. 'ಹೆಣ್ಣು ಎಂದಿದ್ದರೂ ಪರರೊಡವೆ', ಆಕೆ ಹೇಗಿದ್ದರೂ ದುರ್ಬಲಳು, ಗಂಡು ಕುಟುಂಬದ ಮುಖ್ಯ ಸದಸ್ಯ, ಮನೆಯ ದೀಪ ಬೆಳಗಿಸುವವನು, ವಂಶೋದ್ಧಾರಕ ಎಂದು ಭಾವಿಸಿರುವುದೇ ಆಗಿದೆ. ಈ ಬಗೆಯ ತಿಳುವಳಿಕೆಯನ್ನ ಹೊನ್ನಮ್ಮ ಕಥೆಯಲ್ಲಿ ಕಾಣುತ್ತೇವೆ. ತನ್ನ ಬಂಜೆತನಕ್ಕೆ ಶಪಿಸುತ್ತಾ ನಿರಂತರವಾಗಿ ಕಷ್ಟ ಅನುಭವಿಸುವವಳು. ಒಂದು ಕುಟುಂಬದಲ್ಲಿ ಎಷ್ಟೆಲ್ಲಾ ಸಂಪತ್ತು, ಸುಖ ಸವಲತ್ತುಗಳಿದ್ದರೂ ಮಕ್ಕಳಿಲ್ಲದವರ ಬಾಳು ಮರುಭೂಮಿಯಂತೆ ಎಂಬ ಭಾವನೆ ಹೊಂದಿರುವವಳು, 'ಬಂಜೆ ' ಎಂಬ ನುಡಿ ಕೇಳಲು ಎಂಥವರಿಗೂ ಅಳಕು. ಮಕ್ಕಳಾಗದಿದ್ದರೆ ಹೆಣ್ಣಿಗೆ ಬೆಲೆಯೇ ಇಲ್ಲ, ಆಕೆಯ ಬಾಳು ಬರೀ ಗೋಳಿನದು.

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡಿಗೆಯ ಎತ್ತು ದುಡಿದಂಗೆ ॥ಬಾಳೆಲೆಯ॥
ಹಾಸ್ಯೊಂಡು ಬೀಸಿ ಒಗೆದಂಗ [೧೬]

ಎಂಬಂತೆ ಹೊನ್ನಮ್ಮನ ಬದುಕು. ಹೀಗೆ ನಿಕೃಷ್ಟವಾಗುವ ಹೆಣ್ಣಿನ ಜನ್ಮ ನಾಯಿಗಿಂತ ಕೀಳೆನಿಸಿ ಜೀವ ಬೇಡವಾಗುತ್ತದೆ. ಮಕ್ಕಳಿಲ್ಲದವಳಿಗೆ ಮೋಕ್ಷವಿಲ್ಲ ಎನ್ನುವ ನಂಬಿಕೆ ನಮ್ಮಲ್ಲಿ ಆಳವಾಗಿ ಬೇರೂರಿದ್ದು ಅದರ ದುಷ್ಪರಿಣಾಮ ಅವರನ್ನು ತೀವ್ರವಾಗಿ ಕಾಡುತ್ತದೆ. ಇದಕ್ಕೆ ಕಷ್ಟವನ್ನನುಭವಿಸಿದವಳು ಈ ಹೊನ್ನಮ್ಮ.

ಬಂಜೆಯಾದವಳಿಗೆ ಸಮಾಜದಲ್ಲಿ ಗೌರವವಿಲ್ಲ, ಅವಳೊಂದು ಹಾಳು ಕೊರಡು, ಬರಡು, ಸಮಾಜದಲ್ಲಿ ಬಾಳಲು ಯೋಗ್ಯಳಲ್ಲ.ಆಕೆ ನೋಡಿದ್ದೆಲ್ಲ ಹಾಳು, ಮುಟ್ಟಿದ್ದೆಲ್ಲಾ ಹಾಳು ಎಂಬ ನಂಬಿಕೆ ಮನೆ ಮಾಡಿದೆ. ಅವಳ ಬಂಜೆತನಕ್ಕೆ ಯಾರೂ ಹೊಣೆಯಲ್ಲ. ಅದಕ್ಕೆ ಜೈವಿಕ ಕಾರಣಗಳೇ ಇವೆ. ಆದರೆ ಸಮಾಜದಲ್ಲಿ ಈ ಬಗೆಯ ವೈಜ್ಞಾನಿಕ ಕಾರಣಗಳನ್ನು ತಿಳಿಯ ಹೋಗುವುದಿಲ್ಲ. ಬದಲಾಗಿ, ಹೆಣ್ಣನ್ನೇ ನೇರವಾಗಿ ಕಾರಣ ಮಾಡಲಾಗುತ್ತದೆ. ಸಮಾಜದಲ್ಲಿನ ಮೌಢ್ಯ ಸಂಪ್ರದಾಯ ಮತ್ತು ನಂಬಿಕೆಗಳು ಹೆಣ್ಣನ್ನು ಕೇಂದ್ರಿಕರಿಸಿದೆ. ಆದ್ದರಿಂದ ಇಂಥ ಪಾಪಗಳಿಗೆ, ಕಷ್ಟಗಳಿಗೆ, ವಿಧಿಯ ಕೈವಾಡವಿದೆಯೆಂದೇ ನಂಬಲಾಗಿದೆ. ಹಣೆಬರಹ ಪೂರ್ವ ಜನ್ಮದ ಪಾಪಕ್ಕೆ ಶಿಕ್ಷೆ ಎಂಬ ನಂಬಿಕೆಗಳನ್ನು ಹೊತ್ತು ತರಲಾಗಿದೆ. ಇವುಗಳ ನಿವಾರಣೆಗೆ ಪುಣ್ಯದ ಕೆಲಸಗಳನ್ನು ಮಾಡಬೇಕು, ಹಾಗೆ ಮಾಡಿದರೆ ತಮಗೆ ಮಕ್ಕಳಾಗುತ್ತವೆ ಎಂದು ನಂಬುವವರೇ ಹೆಚ್ಚು. ಇಂಥ ನಂಬಿಕೆಗಳು ಜನಪದರಲ್ಲಿ ಆಚರಣೆಗೆ ಒಳಪಟ್ಟು ಸಂಪ್ರದಾಯವಾಗಿ ಉಳಿದುಬಿಡುತ್ತವೆ. ಅಂತೆಯೇ ಹೊನ್ನಮ್ಮ ಬಾವಿ ತೆಗೆಸಿ, ಸೀಬೆಯ ಗಿಡ, ಕಿತ್ತಲಿಯ ಗಿಡ ಹಾಕಿಸಿದಳು. ಗಂಗವ್ವನ ಪೂಜೆ ಮಾಡಿದಳು. ಆದರೆ ನೀರು ಕುಡಿಯಲು ಬಾವಿಗೆ ಬಂದ ಗೋವುಗಳು ಹಿಂದಿರುಗುವ ಪರಿಯನ್ನು ನಾವು ನೋಡಬಹುದು. ಅಂತೆಯೇ,

> ಬಂಜೈ ಕಟ್ಟಿದ್ದ ಬಾವಿ ।ಸು। ನಾವು ನೀರ ಕುಡಿದರೆ ।ಸು।
> ನಾವು ಬಂಜೇರಾಗುತೀವಿ ।ಸು। ಮಕ್ಕಳು ಬಂಜೇರಾಗುತ್ತಾರೆ ।ಸು।
> ಅವು ಹಿಂದಕೆ ಹೋಗುತ್ತವೆ ।ಸು।[೧೭]

ಇನ್ನು ಹಕ್ಕಿ ಪಕ್ಷಿಗಳು ಹಣ್ಣು ತಿನ್ನದೆ ಹಿಂದಿರುಗುತ್ತವೆ. ಅಣಕಿಸುವ ರೀತಿಯಲ್ಲಿ ಮಾತನಾಡಿದಂತೆ ಅನಿಸುತ್ತದೆ

> ಹಕ್ಕಿ ಪಕ್ಷಿ ಬಂದಿನ್ನ ।ಸು। ನಾವು ಹಣ್ಣು ತಿಂದರೆ ।ಸು।
> ನಾವು ಬಂಜೇರಾಗುತೀವಿ ।ಸು। ಮಕ್ಕಳು ಬಂಜೇರಾಗುತ್ತಾರೆ ।ಸು।
> ಅವು ಹಿಂದಕೆ ಹೋಗುತ್ತವೆ ।ಸು।[೧೮]

ಗಂಗವ್ವನ ಪೂಜೆ ಮಾಡಲು ಹೋದರೆ ಗಂಗೆಯೇ ಬತ್ತಿ ಹೋಗುತ್ತಾಳೆ. ಹೀಗೆ ಪ್ರಾಣಿ ಪಕ್ಷಿಯಾದಿಯಾಗಿ ಇವಳನ್ನು ಬಂಜೆ ಎಂದು ಮೂದಲಿಸುವುದು ಹೊನ್ನಮ್ಮನಿಗೆ ಶೂಲದಲ್ಲಿ ಇರಿದಂತಾಗುತ್ತದೆ. 'ಹಾಳಾದ ಪಾಪಿ ಜನ್ಮ ಎನ್ನ ಯಾತಕೆ ಕೊಟ್ಟೆಯೋ ಎಂದು ದುಃಖಿಸುತ್ತಾಳೆ. ಇದು ಹೆಣ್ಣಿಗೆ ಮಾತ್ರ ಆಗುವ ಅನ್ಯಾಯವೆಂಬುದನ್ನು ನಾವು ಗಮನಿಸಬೇಕು. ಮುಂದುವರೆದು ಸ್ವತಃ ಹೊನ್ನಮ್ಮನ ಸಹೋದರಿಯರೇ ಮೂದಲಿಸುವುದನ್ನು ಕಾಣಬಹುದು.

ನಮ್ಮ ಬಂಜ್ಹೊನ್ನಿ ಬರುತ್ತಾಳೆ।ಸು। ಮಕ್ಕಳ ಮಡಗಲಬೇಕು।ಸು।
ಬಂಜೆ ತಂದ ತಿಂಡಿ।ಸು। ಮಕ್ಕಳು ತಿಂದರ।ಸು।
ನಾವು ಬಂಜೇರಾಗುತೀವಿ।ಸು। ಮಕ್ಕಳು ಬಂಜೇರಾಗುತ್ತಾರೆ।ಸು।[೧೯]

ಇದು ಸಾಮಾಜಿಕವಾಗಿ ಪರಸ್ಪರ ಹೆಣ್ಣಿನ ಅವಮಾನವನ್ನು ಅವಳಿಗಾಗುವ ನೋವನ್ನು ಅರಿಯದಿರುವುದು ಕಳವಳಕರಿಯಾದುದು. ಆರೂ ಜನ ಅಕ್ಕಂದಿರು ತಮ್ಮ ಮಕ್ಕಳನ್ನು ಅಡಗಿಸಿಡುತ್ತಾರೆ. ಹೀಗೆ ಸಮಾಜದಲ್ಲಿ ಪ್ರಾಣಿಗಳು ನೀರು ಕುಡಿಯದೆ ಇರುವುದು, ಹಕ್ಕಿಪಕ್ಷಿಗಳು ಹಣ್ಣು ತಿನ್ನದೇ ಇರುವುದು, ಮಕ್ಕಳನ್ನು ನೋಡಿದರೆ, ಮುಟ್ಟಿದರೆ ತಾವೂ ಬಂಜೆರಾಗುತ್ತೇವೆ ಎಂಬ, ಭಯ, ಭೀತಿ ಇರುವುದೇ ಇದಕ್ಕೆಲ್ಲ ಕಾರಣವೆಂದು ಚಿತ್ರಿಸಲಾಗಿದೆ. ಹೀಗೆ ಭಯ ಹುಟ್ಟಿಸುವ ಸಮಾಜ ನಿರ್ಮಿಸಿದ ಮೂಢ ನಂಬಿಕೆಗಳ ತೀವ್ರತೆ ಮತ್ತು ಅದರ ಪರಿಣಾಮಗಳನ್ನು ಹೇಳಲು ಪ್ರಕೃತಿಯನ್ನು ಬಳಸಿಕೊಂಡಿರುವುದು ಸತ್ಯಕ್ಕೆ ದೂರವಾದದ್ದೇ ಸರಿ. ಇದೊಂದು ಶುದ್ಧ ಮೂಢನಂಬಿಕೆಯೇ ಆಗಿದೆ.

ಮನುಷ್ಯ ಮಾತ್ರದವರು ಬಂಜೆ ಎಂಬ ಕಾರಣಕ್ಕೆ ಅವಹೇಳನ ಮಾಡುವುದು ಯಥೇಚ್ಛವಾಗಿ ಜನಪದ ಸಾಹಿತ್ಯದಲ್ಲಿ ಮತ್ತು ನೈಜ ಲೋಕದಲ್ಲಿ ಕಾಣಬರುತ್ತದೆ. ಆದರೆ ಹೊನ್ನಮ್ಮನ ಕಥಾನಕದಲ್ಲಿ ಹಕ್ಕಿ ಪಕ್ಷಿಗಳು, ದನಕರುಗಳು ಅವಳು ಕಟ್ಟಿಸಿದ ಬಾವಿ ನೀರನ್ನು ನಿರಾಕರಿಸುವಂತೆ ನಿರೂಪಿಸಿದೆ. ಯಜಮಾನ ಸಂಸ್ಕೃತಿಯ ಒಳಗೆ ಪುರಷ ನಿರ್ಮಿತ ಸಮಾಜ ಹೆಣ್ಣನ್ನು ಎಂಥ ನಿರ್ದಯ ಸ್ಥಿತಿಯಲ್ಲಿ ಕಾಣುವುದು ಸಾಧ್ಯವೆಂಬುದಕ್ಕೆ ಈ ಕಥೆ ಸಾಕ್ಷಿಯಾಗಿದೆ.

ಎನಪದ ಕಥನಗೀತೆಗಳಲ್ಲಿ ಕಥೆಯ ಆರಂಭದಲ್ಲಿಯೇ ಅಂತಹ ಒಂದು ವೇದಿಕೆಯನ್ನು ಸಿದ್ಧಮಾಡುವ ನಂಬಿಕೆ, ಆಚರಣೆಗಳು ಎದುರಾಗುತ್ತವೆ. ಇದು ಒಂದು ಬಗೆಯ ಬಲಿಪೀಠವನ್ನು ಸಿದ್ಧಮಾಡುವಂತೆ ಕಾಣುತ್ತವೆ. ಇಲ್ಲಿ ಆಯ್ಕೆಮಾಡಿಕೊಳ್ಳಲಾದ ಬಹುತೇಕ ಕಾವ್ಯಗಳಲ್ಲಿ ಕನಸಿನ ಪ್ರಸಂಗಗಳು ಅಪಶಕುನದ ಪ್ರಸಂಗಗಳು ಕಂಡುಬರುತ್ತವೆ. ಕಥಾನಾಯಕಿಗೆ ಮುಂದೆ ಎದುರಾಗಬಹುದಾದ ಸಮಸ್ಯೆ ಇಲ್ಲವೆ ಸವಾಲನ್ನು ಸ್ವೀಕರಿಸುವಂಥ ರೀತಿಯಲ್ಲಿ ನಂಬಿಕೆ, ಆಚರಣೆಗಳು, ಸಂಪ್ರದಾಯಗಳು ವಿಜೃಂಭಿಸಲ್ಪಟ್ಟಿವೆ.

ನಂಬಿಕೆಗಳ ವಿಚಾರದಲ್ಲಿ ಗಮನಿಸಬಹುದಾದ ಇನ್ನೊಂದು ಸಂಗತಿಯೆಂದರೆ, ನಂಬಿಕೆಗಳು ಹುಟ್ಟುತ್ತಲೇ ನಂಬಿಕೆಗಳಾಗಿ ಹುಟ್ಟುವುದಿಲ್ಲ. ಯಾವುದೋ ಒಂದು ಅನುಭವದ ಹಿನ್ನಲೆಯಲ್ಲಿ ಮೂಡಿ ಬಂದ ಜ್ಞಾನವೇ ಹೇಳಿಕೆಯ ರೂಪ ಪಡೆದುಕೊಂಡು ಪರಂಪರೆಯಲ್ಲಿ ನಂಬಿಕೆಯಾಗಿ ರೂಪುಗೊಂಡಿರುತ್ತವೆ. ಸಾಮಾನ್ಯವಾಗಿ ಮನುಷ್ಯ ಯಾವ ವಿಷಯದ ಬಗ್ಗೆ ಹೆಚ್ಚು ಕಾಳಜಿವಹಿಸುತ್ತಾನೋ ಅಂತಹ ವಿಷಯದ ಬಗ್ಗೆಯೇ ಆತಂಕವೂ ಹೆಚ್ಚಾಗಿರುತ್ತದೆ. ಆದ್ದರಿಂದ ಅಂತಹ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ನಂಬಿಕೆಗಳು ರೂಪುಗೊಂಡಿರುತ್ತವೆ.[೨೦]

ಜನಪದ ಗೀತೆ ಜನಪದ ಸಂಸ್ಕೃತಿಯೊಂದರ ಅಂಗವಾಗಿರುವುದರಿಂದ ಸಾಮಾಜಿಕ ನಡಾವಳಿಗಳು, ಆಚರಣೆಗಳು, ಸಂಪ್ರದಾಯಗಳು, ಕಥೆಯ ಹೊರಗಿದ್ದುಕೊಂಡೇ ಪ್ರಭಾವ ಬೀರುತ್ತವೆ.[೨೧] ತಮ್ಮ ತಮ್ಮ ಕರ್ಮಗಳಿಗೆ, ಪುಣ್ಯಕ್ಕೆ, ಪಾಪಕ್ಕೆ ಅನುಸಾರವಾಗಿ ವಿಧಿಲಿಖಿತ ಅನುಸಾರವಾಗಿ ತಾವು ನಡೆಯಬೇಕೆಂಬುದು ಜನಪದರ ನಂಬಿಕೆಯ ವಿಚಾರ. ಇದು ಜನಪದರಲ್ಲಿ ಆಳವಾಗಿ ಬೇರೂರಿರುವ ಸಾಮಾನ್ಯ ತತ್ವ. ಅದನ್ನು ಪ್ರತಿಬಿಂಬಿಸುವ ವಿಚಾರಗಳು ಇಲ್ಲಿಯ ಕಥಾನಕಗಳಲ್ಲಿ ಬಹಳಷ್ಟಿವೆ.

'ಕೆರೆಗೆ ಹಾರ 'ದ ಇಡೀ ಕತೆಯ ದುರಂತವೇ ಒಂದು 'ಮೂಢ' ನಂಬಿಕೆಯ ಮೇಲೆ ನಿಂತಿದೆ. ಹೊಸದಾಗಿ ಕಟ್ಟಿಸಿದ ಕೆರೆಗೆ ನೀರು ಬಾರದಿದ್ದರೆ ಜ್ಯೋತಿಷ್ಯ ಕೇಳುವುದೂ, ಅದಕ್ಕೆ ಪರಿಹಾರವಾಗಿ

ಮನೆಯ ಸೊಸೆಯನ್ನು ಹಾರವಾಗಿ ಕೊಡಬೇಕೆನ್ನುವುದೂ ಈಗ ನಮಗೆ ಅರ್ಥವಿಲ್ಲದ್ದಾಗಿ ಕಾಣುವ ಅಮಾನುಷ ಸಂಪ್ರದಾಯ. ಆದರೆ ಜನಪದರಿಗೆ ಇದೊಂದು ಸತ್ಯ. ಅವರ ಸುತ್ತಲಿನ ಸಮಾಜಕ್ಕೆ ಒಪ್ಪಿಗೆಯಾದ ನಂಬಿಕೆಗಳಲ್ಲಿ ಇದೂ ಒಂದು. ಆ ನಂಬಿಕೆಯಲ್ಲಿ ಯಾವ ಸಂದೇಹವೂ ಇಲ್ಲದೆ ಅವನು ಹೃತ್ಪೂರ್ವಕವಾಗಿ ಪಾಲ್ಗೊಳ್ಳುತ್ತಾನೆ."

ಕಲ್ಲನ ಕೇರಿ ಮಲ್ಲನ ಗೌಡ ಜೋಯಿಸರ ಮಾತಿನಂತೆ ಕಿರಿಸೊಸೆ ಭಾಗೀರತಿಯನ್ನು ಸಕಲ ಆಚರಣೆಗಳೊಂದಿಗೆ ಶಾಸ್ತ್ರೋಕ್ತವಾಗಿ 'ಕರೆಗೆಹಾರ' ವಾಗಿ ಒಪ್ಪಿಸುತ್ತಾನೆ. ಒಂದು ಹೆಣ್ಣಿನ ಅಂತ್ಯವನ್ನು ಕಾಣಿಸುವ, ಈಗಾಗಲೇ ತನ್ನ ಸಾವಿನ ಕ್ಷಣಗಳನ್ನು ಎದುರಿಸುತ್ತಿರುವ ಅಮಾಯಕ ಹೆಣ್ಣಿನ ಆಸೆಗಳನ್ನು ಚೂರು ಚೂರಾಗಿಸುವ ಅಸಂಬದ್ಧ ಆಚರಣೆಗಳಾಗಿ, ಭಯಾನಕವಾಗಿ ಕಾಣಿಸುತ್ತವೆ. ಅದೇನೇ ಇದ್ದರು ಒಟ್ಟಿನಲ್ಲಿ ಅವರ ನಂಬಿಕೆಯಂತೆ ಸೊಸೆಯ ಬಲಿದಾನದೊಂದಿಗೆ ಕೆರೆ ತುಂಬುತ್ತದೆ. ಗೌಡನಿಗೆ ಒಂದು ಹೆಣ್ಣಿನ ಜೀವಕ್ಕಿಂತ ಜೋಯಿಸರ ಪಂಚಾಂಗದಂತೆ ಕೆರೆ ತುಂಬಿದ್ದು ಗೌಡನಂಥ ಎಷ್ಟೋ ಗೌಡರಿಗೆ ಅಷ್ಟೇ ಏಕೆ ಇಡೀ ಊರಿಗೆ ನಂಬುವಂಥ ದೃಷ್ಯವಾಗುತ್ತದೆ. ಇಂಥ ಮೂಢನಂಬಿಕೆಗಳೇ ಆಚರಣೆಗೊಳಪಟ್ಟು ಸಂಪ್ರದಾಯವಾಗಿ ಉಳಿದು ಬರುತ್ತವೆ.

ಇಲ್ಲಿ ನಡೆಯುವ ಆಚರಣೆಗಳು ಬಲಿಯಾಗುವ ಹೆಣ್ಣಿನ ಕಡೆ ಯಾವುದೇ ಅನುಕಂಪವನ್ನು ವ್ಯಕ್ತಪಡಿಸುವುದಿಲ್ಲ. ಅಥವಾ ಆಕೆ ಅನುಭವಿಸುತ್ತಿರುವ ನೋವಿಗೆ ಕಿಂಚಿತ್ತು ಸ್ಪಂದಿಸಿದಂತೆ ಕಥಾನಕಗಳಲ್ಲಿ ಕಂಡುಬರುವುದಿಲ್ಲ. ಆಚರಣೆಗಳು ಅದ್ದೂರಿಯಾಗೇ ನಡೆಯುತ್ತವೆ. ಅಡುಗೆ ಮಾಡುವುದು, ಸ್ನಾನ ಮಾಡುವುದು, ಪೂಜೆ ಮಾಡುವುದು, ಬಟ್ಟಲನ್ನು ಉದ್ದೇಶಪೂರ್ವಕವಾಗಿ ಕೆರೆಯಲ್ಲಿ ಬಿಟ್ಟು ಬರುವುದು, ತರುವುದಕ್ಕೆ ನೀ ಹೋಗು, ನೀ ಹೋಗು ಎನ್ನುವುದು ಇವೆಲ್ಲ ಆಚರಣೆಗಳು ನೆಪಮಾತ್ರ. ಇಂಥ ಆಚರಣೆಗಳು ಬಲಿಯಾಗಲು ಸಿದ್ಧಳಾಗಿರುವ ಹೆಣ್ಣನ್ನು ಮತ್ತಷ್ಟು ಕುಗ್ಗಿಸುತ್ತವೆ. ಇಂಥ ಮೂಢನಂಬಿಕೆಗೆ ಬಲಿಯಾದ ಭಾಗೀರತಿ, ಮದಗದ ಕೆಂಚವ್ವ ಹುಳಿಯಾರು ಕೆಂಚವ್ವ ಸಮಾಜದ ಹಿತಕ್ಕಾಗಿ, ಮಾವನ ಗೌರವವನ್ನು ಕಾಪಾಡುವಲ್ಲಿ ಮೂಢನಂಬಿಕೆಗಳಿಗೆ ಬಲಿಯಾಗಿ ತಮ್ಮನ್ನೇ ಆತ್ಮಾರ್ಪಣೆ ಮಾಡಿಕೊಂಡ ಗಟ್ಟಿಗಿತ್ತಿಯರು. ಭಾಗೀರತಿಯಾಗಲಿ, ಮದಗದ ಕೆಂಚವ್ವನಾಗಲಿ, ಹುಳಿಯಾರು

ಕೆಂಚವ್ವನಾಗಲೀ ಇವರೆಲ್ಲ ಬುದ್ಧಿವಂತೆಯರು, ಹಾಗೂ ಸೂಕ್ಷ್ಮಮತಿಯುಳ್ಳವರು. ತಮ್ಮ ಸೂಕ್ಷ್ಮಮತಿಯಿಂದಲೇ ತಮ್ಮ ಸಾವು ನಿಶ್ಚಿತವೆಂದು ಕಂಡುಕೊಂಡವರು. ಇಂಥ ಅನ್ಯಾಯವನ್ನು ವಿರೋದಿಸಿ ಮೆಟ್ಟನಿಲ್ಲಬಹುದಾದಷ್ಟು ಆತ್ಮ ಬಲವುಳ್ಳವರು. ಆಚರೆ ಇವರಿಗೆ ಬೆಂಬಲವಾಗಿ, ಇದನ್ನು ವಿರೋಧಿಸುವ, ಪ್ರತಿಭಟಿಸುವ ತಂದೆಯಾಗಲಿ, ಗಂಡನಾಗಲೀ, ಊರಿನ ಹಿರಿಯರಾಗಲಿ, ಸ್ನೇಹಿತರಾಗಲೀ ಯಾರೂ ಇಲ್ಲ. ಎಲ್ಲರೂ ಊರಿನ ಹಿತಕ್ಕಾಗಿ ಇಂಥ ಬಲಿಯನ್ನು ನೋಡುವ ಕಾತುರದಲ್ಲಿದ್ದವರೇ. ಹೀಗಿರುವಾಗ ತನ್ನೊಬ್ಬಳ ವಿರೋಧ ಉದ್ಧಟತನವಾಗಬಾರದೆಂದು ಸಮಸ್ತ ಹಿತಕ್ಕಾಗಿ ಪ್ರಾಣಾರ್ಪಣೆ ಮಾಡಿಕೊಂಡವರು. ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಕೀರ್ತಿ ತಂದು ಎಲ್ಲರ ಮನದಲ್ಲು ಶಾಶ್ವತವಾಗಿ ನಿಂತವರು. ಸಮಾಜ ಅಪೇಕ್ಷಿಸುವುದೂ ಇದನ್ನೇ ಅಲ್ಲವೇ ?

ಸತಿ ಸಹಗಮನ ಪದ್ಧತಿ ಒಂದು ಕಾಲದಲ್ಲಿ ಪ್ರಚಲಿತದಲ್ಲಿದ್ದ ಧಾರ್ಮಿಕ ಆಚರಣೆಯಾಗಿತ್ತು. ಗಂಡನನ್ನು ಕಳೆದುಕೊಂಡ ಹೆಣ್ಣು ಗಂಡನ ಶವದೊಂದಿಗೆ ತಾನೂ ಕೊಂಡವೇರಬೇಕಿತ್ತು. ಅದೇ ಸ್ತ್ರೀ ಧರ್ಮ ಎಂಬ ನಂಬಿಕೆ ಪುರಾಣಕಾಲದಿಂದಲೂ ಬೆಳೆದುಕೊಂಡು ಬಂದಿದೆ. ಕೆಲವೊಮ್ಮೆ ಇದು ಸ್ವ-ಇಚ್ಛೆಯಿಂದ ನೆರವೇರುತ್ತಿತ್ತು. ಇನ್ನು ಕೆಲವು ವೇಳೆ ಬಲತ್ಕಾರದಿಂದಲೂ ಚಿತೆಗೆ ದೂಡಲಾಗುತ್ತಿತ್ತು. ಈ ಎರಡೂ ಸಂದರ್ಭಗಳಲ್ಲಿ ಹಾಗೆ ಸತಿ ಹೋದವಳನ್ನು 'ಮಹಾಸತಿ' ಎಂದು ಕರೆದು ಆ ಪದ್ಧತಿಯನ್ನು ವೈಭವೀಕರಿಸುತ್ತಿದ್ದರು. ಕ್ರಮೇಣ ಇದೊಂದು ಸಂಪ್ರದಾಯವಾಗಿ ರೂಢಿಗೆ ಬಂದಿತು. ಧರ್ಮಕ್ಕೆ ದೇವರಿಗೆ ಹೆದರಿ, ಸತ್ತ ನಂತರ ತಾನೇ ದೇವತೆಯಾಗುವುದನ್ನು ನೆನೆದು ಪ್ರಾಣಾರ್ಪಣೆಗೆ ಮುಂದಾಗುವ ಅಮಾಯಕ ಹೆಣ್ಣುಮಕ್ಕಳ ಭಯ ಹುಟ್ಟಿಸುವ ರೋಮಾಂಚನಕಾರಿಯಾದ, ಕೆಲವೊಮ್ಮೆ ದೇವರು, ಧರ್ಮ, ಆಚರಣೆಗಳ ಬಗ್ಗೆಯೇ ಗೊಂದಲವೇರ್ಪಡಿಸುವ ಎಷ್ಟೋ ಸಂಗತಿಗಳು ಜನಪದ ಕಥನಕಾವ್ಯಗಳಲ್ಲಿ ಕಾಣಸಿಗುತ್ತವೆ.

ಸೀರೆ ಉಡಲಲರಿಯದ ಚಿಕ್ಕವಯಸ್ಸಿನ ನಾಗವ್ವ ಈರೋಬಿ, ಹಿರಿದಿಮ್ಮಿ ಇವರೆಲ್ಲ ಗಂಡನನ್ನು ಕಳಕೊಂಡವರ ನೋವು ಸಂಕಟವನ್ನು ಅರಿತವರೆಂದು ಕಾಣುತ್ತದೆ. ಹಾಗಾಗಿ ಅಂಥ ಹೀನ ಬದುಕನ್ನು ಬಾಳುವುದಕ್ಕಿಂತ ಸಮಾಜದ ಕಣ್ಣಲ್ಲಿ ಅಪರಾಧಿಗಳಾಗಿ ಬಾಳುವುದಕ್ಕಿಂತ ಗಂಡನ ಜೊತೆ ಕೊಂಡ ಏರಿ ಮಹಾಸತಿಯರಾಗುವುದೇ ಲೇಸೆಂದು ಬಗೆದು ಸಮಾಜದ ಕೆಂಗಣ್ಣು ಬೀಳಬಾರದೆಂದುಕೊಂಡು

ತಮ್ಮಿಚ್ಛೆಯಿಂದಲೇ ಸಹಗಮನ ಮಾಡಿಕೊಂಡು ಬದುಕಿನ ಆಸೆ ಆಕಾಂಕ್ಷೆಗಳನ್ನು ಬೂದಿಯಾಗಿಸಿಕೊಂಡ ಅಸಹಾಯಕ ಹೆಣ್ಣುಗಳಿವರು ಹೀಗ ಬೆಂದು ಹೋದವರು ಮಹಾಸತಿಯರಾಗಿ ಎಲ್ಲರ ದೃಷ್ಟಿಯಲ್ಲಿ ಬೇಡಿದ್ದನ್ನು ಕೊಡುವ ದೇವತೆಯರಾಗಿ ಪೂಜನೀಯರಾಗಿದ್ದಾರೆ. ಇಂಥ ನಂಬಿಕೆಗಳು ಮುಂದಿನವರೂ ಇದೇ ರೀತಿ ದೇವತೆಯರಾಗಬೇಕೆನ್ನುವುದನ್ನು ಪ್ರೇರೇಪಸುತ್ತಿರುತ್ತವೆ.

ಜನಪದ ಸಾಹಿತ್ಯ ಮುಖ್ಯವಾಗಿ ಪರಂಪರೆಯನ್ನು ಪೋಷಿಸಿಕೊಂಡು ಬರುವುದರಿಂದ ಬಹುಪಾಲ ಸಾಹಿತ್ಯ ಪ್ರತ್ಯಕ್ಷವಾಗಿಯೋ, ಅಪ್ರತ್ಯಕ್ಷವಾಗಿಯೋ ಕಾಲದಿಂದ ಕಾಲಕ್ಕೆ ಸ್ಥಾಪಿತಗೊಂಡ ಮೌಲ್ಯಗಳನ್ನು ಸ್ವೀಕರಿಸುತ್ತಲೇ ಸಾಗುತ್ತಿರುತ್ತದೆ. ಶೀಲ ಪಾತಿವ್ರತ್ಯ ವಿಧೇಯತೆ, ತ್ಯಾಗ, ಸಹನೆ, ಕಷ್ಟಸಹಿಷ್ಣುತೆ ಇವೆಲ್ಲ ಗುಣಗಳು ಹೆಣ್ಣಿನ ಪರಮೋಚ್ಚ ಆದರ್ಶ ಗುಣಗಳೆನಿಸಿಕೊಂಡಿವೆ. ಇದರ ಹಿನ್ನಲೆಯಲ್ಲಿ ಹೆಣ್ಣನ್ನು ನಿರಂತರವಾಗಿ ತನ್ನ ಅಧೀನದಲ್ಲಿಯೇ ಉಳಿಸಿಕೊಳ್ಳಲು ಪುರುಷ ಅನೇಕ ತಂತ್ರಗಳನ್ನು ಬಳಸುತ್ತಲೇ ಬಂದಿದ್ದಾನೆ. ಸಮಸ್ತ ಒಳಿತನ ಹುಸಿ ನಂಬಿಕೆಯನ್ನಿರಿಸಿ ಹೆಣ್ಣನ್ನು ಕ್ರೂರ ಆಚರಣೆಗೆ ಒಳಗು ಮಾಡಿರುತ್ತಾನೆ. ಆದುದರಿಂದ ಹೆಣ್ಣು ನಡೆಸುವ ಅನೇಕ ಆಚರಣೆ, ಸಂಪ್ರದಾಯಗಳ ಹಿಂದೆ ಪುರುಷನ ಸ್ವಾರ್ಥ ರಾಜಕೀಯವಿರುವುದು ಸ್ಪಷ್ಟ.[೧೨]

ನಂಬಿಕೆ, ಆಚರಣೆ, ಸಂಪ್ರದಾಯಗಳಿಂದ ದೂರ ಉಳಿದು ಬದುಕುವ ಸಾಮರ್ಥ್ಯ ಎಲ್ಲರಿಗೂ ಇರುವುದಿಲ್ಲ ಅಥವಾ ಅದು ಸಾಧ್ಯವೂ ಇಲ್ಲ. ಬದುಕಿನಲ್ಲಿ ಕೆಲವನ್ನಾದರೂ ನಂಬಲೇಬೇಕಾಗುತ್ತದೆ. ಗೊತ್ತಿದ್ದೋ, ಗೊತ್ತಿಲ್ಲದೆಯೋ ರೂಢಿಗತವಾಗಿ ಬಂದುಬಿಟ್ಟಿರುತ್ತವೆ. ಹಳೆಯ ಸ್ವರೂಪವನ್ನು ಬಿಟ್ಟು ಹೊಸರೂಪಗಳನ್ನು ಪಡೆದುಕೊಂಡಿರುತ್ತವೆಯಷ್ಟೆ. ಇಂದಿಗೂ ಕೂಡ ಇಂಥ ನಂಬಿಕೆಗಳಿಗೆ ಬಲಿಯಾಗುತ್ತಿರುವವಳು ಹೆಣ್ಣೆ ಆಗಿದ್ದಾಳೆ. ಎಲ್ಲ ಕಾಲಕ್ಕೂ ಸ್ತ್ರೀಯನ್ನು ವ್ಯವಸ್ಥೆಯ ಬಂಧಿಯಾಗಿ ಮಾಡಿ, ಎರಡನೆಯ ಆಲೋಚನೆಗೆ ಅವಕಾಶ ಮಾಡಿಕೊಡದೆ ಬಾಹ್ಯ ಪ್ರಪಂಚದಿಂದ ದೂರವಿಟ್ಟು ಕೇವಲ ಅಡುಗೆ ಮನೆಯ ಸೊತ್ತು ಎನ್ನುವ ಹಾಗೆ ಮಾಡಿದೆ. ಲೋಕದ ಸತ್ಯಾಸತ್ಯತೆಗಳನ್ನು ಅರ್ಥಮಾಡಿಕೊಳ್ಳದೆ ವೈಚಾರಿಕತೆಗೆ ಬೆಲೆ ಕೊಡದೆ ವ್ಯವಸ್ಥೆಯ ಒಳಗೆ ಬಂಧಿಸಿಟ್ಟಿದೆ. ಒಳಗಿರಲೂ ಆಗದ, ಹೊರ ಬರಲೂ ಆಗದೆ ಗಾಳಕ್ಕೆ ಸಿಕ್ಕಿಕೊಂಡ ಮೀನಂತೆ ಎಷ್ಟೋ ಜನ ಹೆಣ್ಣುಮಕ್ಕಳು ಇಂದಿಗೂ ನೋವನ್ನು ಅನುಭವಿಸುತ್ತಿದ್ದಾರೆ.

ಅಡಿ ಟಿಪ್ಪಣಿಗಳು:

ಅ. **ಸಾಮುದಾಯಿಕ ಸ್ವೀಕೃತ ನೆಲೆಗಳು :**

೧. ಮದಗದ ಕಂಚವ್ವ ಕಥನ ಗೀತೆಯ ಒಂದು ಅವಲೋಕನ - ಗುರುಪುತ್ರ ಪಟ್ಟಣಶೆಟ್ಟಿ ಜಾನಪದ - ೧೯೯೧, ಸಂ.ಜಿ.ಎಸ್.ಭಟ್ಟ, ಪುಟ - ೬೮

(i) **ನಂಬಿಕೆಗಳು, ಆಚರಣೆಗಳು ಮತ್ತು ಸಂಪ್ರದಾಯಗಳು**

೧. ಕರ್ನಾಟಕದ ಜನಪದ ನಂಬಿಕೆಗಳು : ಬಿ.ಎ.ವಿವೇಕ ರೈ ಕರ್ನಾಟಕ ಜಾನಪದ ಸಂಪಾದಕರು - ಜಿ.ಎಸ್.ಶಿವರುದ್ರಪ್ಪ ಬೆಂಗಳೂರು ವಿ.ವಿ. ಪುಟ-೧೭೮

೨. ಅದೇ,. ಪುಟ-೧೭೧

೩. ಅದೇ, ಪುಟ-೧೭೦

೪. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೧೯

೫. ಅದೇ, ಪುಟ-೨೦

೬. ಅದೇ, ಪುಟ-೨೦

೭. ಮಾತೃರೂಪಿ ಸಂಸ್ಕೃತಿ ಮತ್ತು ಕರಾವಳಿ ಜನಪದ ಸಾಹಿತ್ಯ : ಡಾ|| ಗಾಯತ್ರಿ ನಾವಡ, ಪುಟ-೮೨

೮. ಜನಪದ ಸಾಹಿತ್ಯ, ಡಾ|| ತೀ.ನಂ.ಶಂಕರನಾರಾಯಣ, ಪುಟ -೧೪೪

೯. ಜನಪದ ಸಾಹಿತ್ಯ, ಡಾ|| ತೀ.ನಂ.ಶಂಕರನಾರಾಯಣ, ಪುಟ -೧೫೫

೧೦. ಅದೇ, ಪುಟ -೧೫೭

೧೧. ಅದೇ, ಪುಟ -೧೫೭

೧೨. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೩೨

೧೩. ಅದೇ, ಪುಟ-೩೨

೧೪. ಅದೇ, ಪುಟ-೩೪

೧೫. ಅದೇ, ಪುಟ-೩೨

೧೬. ಜನಪದ ಸಾಹಿತ್ಯ, ಪ್ರಧಾನ ಸಂಪಾದಕರು - ಡಾ|| ತೀ ನಂ.ಶಂ. ಪುಟ - ೧೩೭

೧೭. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೫೧

೧೮. ಅದೇ, ಪುಟ-೫೧

೧೯. ಅದೇ, ಪುಟ-೫೧

೨೦. ಜಾನಪದ ಸ್ವರೂಪ ಮತ್ತು ಸಾಹಿತ್ಯ : ಪ್ರೊ. ಡಿ.ಲಿಂಗಯ್ಯ, ಡಾ|| ಕೆ.ಆರ್.ಸಂಧ್ಯಾರೆಡ್ಡಿ ಪುಟ-೬೭

೨೧. ಮದಗದ ಕೆಂಚವ್ವ ಕಥನಗೀತೆಯ ಒಂದು ಅವಲೋಕನ - ಗುರುಪುತ್ರ ಪಟ್ಟಣಶೆಟ್ಟಿ

೨೨. ಜನಪದ ೧೯೯೧ : ಸಂಪಾದಕರು - ಜಿ.ಎಸ್.ಭಟ್ಟ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

೨೩. ಜನಪದ ಸಾಹಿತ್ಯದಲ್ಲಿ ಸ್ತ್ರೀಮಾದರಿಗಳ ಶೋಧ - ಶಾಲಿನಿ ರಘುನಾಥ - ಪುಟ-೧೮೮ ಮಹಿಳಾ ಜಾನಪದ -ಪ್ರಧಾನ ಸಂ. ಪ್ರೊ. ಹಿ.ಶಿ.ರಾಮಚಂದ್ರೇಗೌಡ, ಸಂಪಾದಕರು : ಡಾ||ಕೆ.ಆರ್.ಸಂಧ್ಯಾರೆಡ್ಡಿ

ಆ : ವೈಯುಕ್ತಿಕ ಪ್ರತಿಭಟನೆಯ ನೆಲೆಗಳು

ಜನಪದ ಕಥನಗೀತೆಗಳಲ್ಲಿ ದುರಂತದ ಅಂತಗಳು ಕಥೆಯ ಕೇಂದ್ರ ವಸ್ತು. ಅದಕ್ಕೆ ಪೂರಕವೆಂಬಂತೆ ಇತರ ಪಾತ್ರಗಳು, ಘಟನೆಗಳು ವರ್ತಿಸುತ್ತವೆ. ಭಾರತೀಯ ಸಮಾಜ, ಕುಲ, ಜಾತಿ, ಮತ, ಧರ್ಮಗಳಲ್ಲಿ ಶ್ರದ್ಧೆ ಇಟ್ಟು ಒಂದು ನಂಬಿಕೆಯ ತಳಹದಿಯಲ್ಲಿ ಮೌಲ್ಯಗಳನ್ನಾಗಿ ಸ್ವೀಕರಿಸಿರುವುದು ನೈಜ ಸಂಗತಿಯಾದರೆ, ಸಮೂಹದ ಒಳಿತನ್ನೇ ಮುಖ್ಯ ಮಾಡುವುದು ಸಾಮಾಜಿಕ ಸಂಗತಿ. ಹಾಗಾಗಿ ಸಮೂಹದ ಒಳಿತಿಗಾಗಿ ವೈಯುಕ್ತಿಕ ಹಾನಿಗಳು, ನಷ್ಟಗಳು ಮುಖ್ಯವೆನಿಸುವುದಿಲ್ಲ. ಈ ಮಾತು ಸ್ತ್ರೀಯರ ಬದುಕಿನಲ್ಲಿಯೂ ಅಕ್ಷರಶಃ ನಿಜಗೊಳ್ಳುತ್ತದೆ. ಆದ್ದರಿಂದ ಕಥನಗೀತೆಗಳ ಉದ್ದಕ್ಕೂ ಕಂಡುಬರುವ ಬಲಿದಾನಗಳು ತ್ಯಾಗಮಯಿ ಹೆಣ್ಣಿನ ಪಾಲಿಗೆ ವೈಯುಕ್ತಿಕ ಬದುಕು ಮುಖ್ಯವೆನಿಸಿದರೂ ಸಮಾಜದ ಸಾಮೂಹಿಕ ಹಿತಕ್ಕಾಗಿ ತಾವು ಬಲಿಯಾಗುವುದು ಎಷ್ಟೋ ಸಲ ಪವಿತ್ರವಾದ ಕಾರ್ಯವೇ ಎಂದು ಭಾವಿಸಿದಂತೆ ಮೇಲುನೋಟಕ್ಕೆ ಕಾಣುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರ ಅಸಹಾಯಕತೆಯೇ ಕಾರಣವೆಂಬುದನ್ನು ನಾವು ಮರೆತುಬಿಡುತ್ತೇವೆ. ಆದ್ದರಿಂದ ಸೂಕ್ಷ್ಮಪರಿಶೀಲನೆಯಲ್ಲಿ ಕೆರೆ ಕಟ್ಟೆಗಳಿಗೆ ಬಲಿಕೊಟ್ಟು ಸಾಮೂಹಿಕ ಹಿತ ಕಾಪಾಡುವ ವ್ಯವಸ್ಥೆಯನ್ನು ತುಂಬಾ ಸೂಕ್ಷ್ಮವಾಗಿ ಪ್ರತಿಭಟಿಸುವುದನ್ನು ಕಾಣಬಹುದು. ಈ ಜಾನಪದ ಕಥನಗೀತೆಗಳಲ್ಲಿ ಮಹಾಕಾವ್ಯಗಳಲ್ಲಿ, ಖಂಡಕಾವ್ಯಗಳಲ್ಲಿ ಕಾಣಸಿಗುವ ಪ್ರತಿಭಟನೆಯ ನೆಲೆ ನೇರವಾಗಿರದೆ ಅದು ಬೇರೊಂದು ರೂಪದಲ್ಲಿ ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಸ್ವಾಭಿಮಾನದಿಂದ ಮಾತಿನ ಮೂಲಕವೇ ಅಭಿವ್ಯಕ್ತಿಸುವ ಸಂದರ್ಭಗಳನ್ನು ಈ ಹಿನ್ನಲೆಯಲ್ಲಿ ಪರಿಶೀಸಲೇಬೇಕು. ಪ್ರತಿಭಟನೆ ಎಂಬುದು ಜಗಳಕಾಯುವ, ಹೊಡೆದಾಡುವ, ರೂಪದಲ್ಲಷ್ಟೇ ವ್ಯಕ್ತವಾಗುವುದಿಲ್ಲ. ಬದುಕುವ ಒಳ ಆಸೆಯಿಂದ ತನಗಿಷ್ಟವಿಲ್ಲದ ಬಲಿದಾನ, ಆತ್ಮಾರ್ಪಣೆಗಳನ್ನು ನಿರಾಕರಿಸಲು ತವರಿನ ಆಶ್ರಯ ಬಯಸುವುದು. ಒಗಟಿನ ರೂಪದಲ್ಲಿ ತನ್ನ ಸ್ಥಿತಿಯನ್ನು ನಿವೇದಿಸಿಕೊಳ್ಳುವುದು ದೈನಂದಿನ ಕೆಲಸ ಮಾಡುತ್ತಲೇ ಕಣ್ಣೀರು ಸುರಿಸುವುದು ನಿಜವಾಗಲೂ ಪ್ರತಿಭಟನೆಯ ವ್ಯಕ್ತರೂಪ. ಆದ್ದರಿಂದ ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು. ಹೊತ್ತಾಗಿ ನೀಡಿದರೂ ಉಣಬೇಕು. 'ಕೊಟ್ಟಹೆಣ್ಣು ಕುಲಕ್ಕೆ

ಹೊರಗು' ಎಂಬ ಹೆತ್ತವರ, ಸಮಾಜದ ಬಲವಂತದ ನಿರ್ದಯ ವ್ಯವಸ್ಥೆಯಲ್ಲಿ ಹೀಗೆ ತನ್ನದೇ ಆದ ರೀತಿಯಲ್ಲಿ ಪ್ರತಿಭಟಿಸುವ ರೂಪ ಸ್ವರೂಪಗಳನ್ನು ಕಥನ ಗೀತೆಗಳಲ್ಲಿ ಗುರುತಿಸಬಹುದು.

ಜನಪದ ಕವಿಗಳೆಲ್ಲ ತಮ್ಮ ಸಾಮಾಜಿಕ ವ್ಯವಸ್ಥೆಗೆ ಒಪ್ಪಿತವಾಗಿದ್ದ ಮೌಲ್ಯಗಳನ್ನು ಒಪ್ಪಿಕೊಂಡವರು. ವ್ಯಕ್ತಿಗಳ ಸುಖಕ್ಕೆ ಮೌಲ್ಯಗಳು ಅಡ್ಡಿಯಾದಾಗ ಪ್ರತಿಭಟನೆಯ ಧ್ವನಿಗಳು ಕೇಳಿ ಬರುವುದು ಸಾಮಾನ್ಯ ಸಂಗತಿ. ಇದು ಒಂದು ಜನಾಂಗದ ಜೀವಂತಿಕೆಯ ಲಕ್ಷಣವೂ ಹೌದು. ಆದರೆ ಜನಪದ ಕಾವ್ಯದಲ್ಲಿ ಇಂಥ ಬಂಡಾಯದ ಧ್ವನಿ ಕೇಳಿ ಬರುವುದೇ ಇಲ್ಲ. ಪ್ರತಿಭಟನಾ ಮನೋಭಾವವಿದ್ದರೂ ಪ್ರತಿಭಟಿಸಲಾರದೆ ಅನಿವಾರ್ಯವೆಂಬಂತೆ ಮೌನವಾಗಿ ಅವುಗಳನ್ನು ಒಪ್ಪಿಕೊಂಡು, ಅದರಿಂದುಂಟಾದ ನೋವು ನಲಿವುಗಳಿಗೆ ತಮ್ಮನ್ನು ಒಡ್ಡಿಕೊಂಡವರೇ ಹೆಚ್ಚು.[1]

ಆದರೂ. ಹೆಣ್ಣು ಎಲ್ಲ ಸಂದರ್ಭದಲ್ಲಿಯೂ ಮೌನವಾಗಿಯೇ ಪುರುಷ ನಿರ್ಮಿತ ಸಮಾಜದ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸುತ್ತಾ ಬಂದಿದ್ದಾಳೆಂದು ಬಾವಿಸುವಂತಿಲ್ಲ. ಅನ್ಯಾಯವಾದಾಗ ಕೆಲವರಾದರೂ ಪ್ರತಿಭಟಿಸುವ ಧೈರ್ಯ ತೋರಿಸಿದ್ದಾರೆ.

'ಉತ್ತರದೇವಿ ' ಗೀತೆಯಲ್ಲಿ ಉತ್ತರದೇವಿ ಅಪರಾಧ ತಾನು ಮಾಡಿಲ್ಲ ಎನ್ನುವ ಧೈರ್ಯ ತೋರಿಸಿದರೂ ಅನಿವಾರ್ಯವಾಗಿ ಬಲಿಪಶುವಾಗುವ ಪರಿಸ್ಥಿತಿ ಉಂಟಾಗುತ್ತದೆ. ಆದರೂ ತನ್ನ ಹಕ್ಕನ್ನು ಸ್ಥಾಪನೆ ಮಾಡುವಂಥ ಧೈರ್ಯವನ್ನು ಉತ್ತರೆ ತೋರಿಸುತ್ತಾಳೆ. ನೀರಿಗೆ ಹೋದ ಉತ್ತರದೇವಿ ತಡವಾಗಿ ಬಂದದ್ದಕ್ಕೆ ಸಂಶಯಿಸಿ 'ಉತ್ತರೆ ನೀರಿಗೋಗ್ಗಿ ಮತ್ತ್ಯಾಕೆ ಬರಲಿಲ್ಲ ಎಂದು ಕೇಳಿದ ಅತ್ತೆಗೆ ಉತ್ತರದೇವಿ ಪ್ರತ್ಯುತ್ತರವಾಗಿ 'ಉತ್ತುರ ದೇಶದ ಮಳೆಹೊಡು ಕೆರೆತುಂಬಿ, ಬಸುಳೆ, ಮುಳ್ಳಡಿ ಅಡಗಿದ್ದೆ' ಎಂದಾಗ ಅತ್ತೆಗೆ ' ಬಸುಳೆ, ಮುಳ್ಳಡಿ ಅಡಗಿದ್ದೆ' ಎಂಬ ಮಾತು ಉತ್ತರೆಯ ಮೇಲಿನ ಅನುಮಾನವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಅತ್ತೆ ಉತ್ತರೆಯ ಮಾತನ್ನು ಅಷ್ಟು ಸುಲಭವಾಗಿ ನಂಬದೆ

ಬಸುಳೆಗೆ ಮುಳ್ಳುಂಟೆ, ಬದನೆಗೆ ಚಪ್ಪರುಂಟೆ
ಸೊಸೆಯಮ್ಮ ನಿನ ಮಾತು ನಿಜವುಂಟೆ ?[2]

ಕತ್ತೆಗೆ ಕೋಡುಂಟೆ ಎತ್ತಿಗೆ ಮಾತುಂಟೆ
ಅತ್ತೆಮ್ಮ ನಿನ ಮಾತು ನಿಜವುಂಟೆ ?

ಹೀಗೆ ಅತ್ತೆ ಸೊಸೆಯರಿಗೆ ಕಾಳಗ ನಡೆಯುತ್ತದೆ ಯಾವ ರೀತಿ ರಿವಾಜುಗಳಿಲ್ಲದೆ ಅವಮಾನವೀಯವಾಗಿ ಪ್ರಾಣಿಯನ್ನು ಹೊರಹಾಕುವಂತೆ ಸೊಸೆಯನ್ನು ಹೊರ ಹಾಕಲು ಆಜ್ಞಾಪಿಸುತ್ತಾಳೆ. ಮಗನಿಗೆ ಬೇರೆ ಇನ್ನೊಂದು ಹೆಣ್ಣನ್ನು ತಂದು ಮದುವೆ ಮಾಡುವುದಾಗಿ ಹೇಳುತ್ತಾಳೆ. ತಾಯಿ ಮಾತಿಗೆ ಮಗನೂ ಸೈ ಎಂದಾಗ ಅಸಹಾಯಕಳಾದ ಉತ್ತರದೇವಿ ಗಂಡನ ಮನೆ ತೊರೆಯುತ್ತಾಳೆ. ಮನೆ ಬಿಟ್ಟು ಹೊರಡಲು ಸಿದ್ಧಳಾದ ಉತ್ತರೆಯನ್ನು ಕಂಡು, ಬೇಗಿ ತನ್ನ ಕಾರ್ಯ ಫಲಿಸಿತು ಎಂದುಕೊಂಡಂತೆ ಸೊಸೆಗೆ

'ಅಟ್ಟದ ಮೇಗಳ ಪುಟ್ಟ ಗುಂಬಳಕಾಯಿ
ಮಾಡ್ಯಾರ ಉಣ್ಣೆ ಸೊಸೆ ಬಾಲೆ '
'ತೆಂಗಿನ ತೋಟದಲ್ಲಿ ಪುಟ್ಟ ಬದನೆ ಕಾಯ
ಅಟ್ಟುಂಡು ಹೋಗೆ ಸೊಸೆ ಮುದ್ದೆ'
'ಪೆಟ್ಟಿಗೇಲಿರುವ ಪಟ್ಟೆಯ ಸೀರೆಯ
ಉಟ್ಟರ ಹೋಗೆ ಸೊಸೆ ಬಾಲೆ '
'ಪೆಟ್ಟಿಗೇಲಿರುವ ಬಂಗಾರದೊಡವೇಯ
ಇಕ್ಕಾರ ಹೋಗೆ ಸೊಸೆಬಾಲೆ ' [೩]

ಎಂದು ಕರೆಯುತ್ತಾಳೆ.

ಅತ್ಯಮ್ಮನ ಈ ರೀತಿಯ ಸೋಗಿನ ಮಾತುಗಳು 'ಉರಿವ ಬೆಂಕಿಗೆ ತುಪ್ಪ ಸುರಿದ ಹಾಗೆ ' ಉತ್ತರೆಗೆ ಕೋಪ ನೆತ್ತಿಗೆ ಏರುತ್ತದೆ. ಆಕೆಗೆ ಇದ್ದ ಕೋಪ, ಪ್ರತಿಭಟನಾ ಮನೋಭಾವದ ನೆಲೆಗಳನ್ನು ಅವಳ ಬಿರು ಮಾತಿನಲ್ಲಿ ವ್ಯಕ್ತವಾಗಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು.

ಹಾದಿಬೀದಿಯೋರ ಕರೆದಿಕ್ಕೆ - ಅತ್ಯಮ್ಮ
ನಾಳೆ ಬರುವೋಳಿಗೆ ಮಡಗಿಕ್ಕೆ [೪]

ಎಂದು ಹೇಳುತ್ತಾ ತನ್ನ ದಾರ್ಷ್ಟ್ಯತನವನ್ನು ತೋರಿಸಿದ್ದಾಳೆ. 'ನಾಳೆ ಬರುವೋಳಿಗೆ ಮಡಗಿಕ್ಕೆ ' ಎಂದು ಒತ್ತಿ ಒತ್ತಿ ಹೇಳುವಾಗ ಉತ್ತರೆಗೆ ತಾನು ಹೋದ ನಂತರ ತನ್ನ ಸ್ಥಾನಕ್ಕೆ ನಾಳೆ ಇನ್ನೊಬ್ಬಳು ಬರುವುದು ಸತ್ಯ ಎಂದು ಖಚಿತವಾಗಿದೆ. ಆದರೂ ಆಕೆ ಇಂಥ ತೀಕ್ಷ್ಣವಾದ ಮಾತುಗಳನ್ನು ನೇರವಾಗಿ ಯಾವುದೇ

ಮುಲಾಜಿಲ್ಲದೆ ನಾಳೆ ಬರುವ್ರೋಳಿಗೆ ಮಡಗಿಕ್ಕೆ ಎಂದು ಹೇಳುತ್ತಾಳೆ. ಬದುಕನ್ನೇ ಕಸಿದುಕೊಂಡ ಮೇಲೆ ಉತ್ತರದೇವಿಗೆ ಇನ್ನು ಬದುಕಿನ ಯಾವ ವ್ಯಾಮೋಹವೂ ಉಳಿಯುವುದಿಲ್ಲ

ಹಾವ ಹೆಣ್ಣೇ ಆಗಲಿ ಕುಟುಂಬದಲ್ಲಿ ತಮ್ಮದೇ ಆದ ಭಾವುಕವಾದ ಒಂದು ಜಗತ್ತನ್ನು ಸೃಷ್ಟಿಸಿಕೊಂಡಿರುತ್ತಾರೆ. ಉತ್ತರದೇವಿಯ ಭಾವುಕ ಜಗತ್ತು ಆಕೆ ಸಾಕಿ ಸಲುಹಿದ ಗಿಡಮರಗಳಲ್ಲಿ ಪ್ರಾಣಿಗಳಲ್ಲಿತ್ತು ಅಂಥ ಭಾವುಕ ಲೋಕದಿಂದ ಹೊರಹೋಗುವಾಗ ಅವಳ ಮನದಾಳದಿಂದ ಹೊರಬಂದ ಮಾತುಗಳಿವು.

ನಾನು ಬರುವಾಗ ತೆಂಗೆಲ್ಲ ಕಿರುಸೊಸಿ
ನೀರೂದ ನಾನು ಸಲವಿದ್ದೆ - ಸೊಸಿಗಳಿರ
ನಾನು ಹೋಯ್ತಿನಿ ವನದೇಶ-ಸೊಸಿಗಳಿರ
ನೀವು ಉರುದಾರ ಹೋಗಿ ಸೊಸಿಗಳಿರ [೫]

ಹೀಗೆ ತಾನು ಸಾಕಿ ಬೆಳೆಸಿದ ಎಲ್ಲಾ ಸಸಿಗಳಿಗೂ 'ನೀವು ಉರಿದಾರ ಹೋಗಿ' ಎನ್ನುವುದು ಹಾಗೆಯೇ ಪ್ರಾಣಿಗಳಿಗೆ

ಹಸುನೂರು ಹಸಿನ ಕರುನೂರು ನಮ್ಮನೆಯ
ನಾನು ನಿಮ್ಮನೆ ಸಲುಬಿದ್ದ-ಹಸುಗಳಿರ
ನೀವು ಆಡಗ್ಯಾರ ಹೋಗಿ ಹಸುಗಳಿರ [೬]

ಹೀಗೆ ತಾನು ಸಾಕಿ ಬೆಳೆಸಿದ ಎಲ್ಲಾ ಸಸಿಗಳಿಗೆ 'ನೀವು ಉರಿದಾರ ಹೋಗಿ ' ಎನ್ನುವುದು. ತಾನು ಸಾಕಿ ಸಲಹಿದ ಪ್ರಾಣಿಗಳಿಗೆ 'ನೀವು ಆಡಗ್ಯಾರ ಹೋಗಿ' ಎನ್ನುವುದು ಉತ್ತರದೇವಿಯಲ್ಲಿದ್ದ ಪ್ರತಿಭಟನಾತ್ಮಕ ಮನೋಭಾವ. ಇದು ಅವಳ ಬೈಗುಳಗಳಲ್ಲಿ ಶಾಪಗಳಲ್ಲಿ ವ್ಯಕ್ತವಾಗುವುದನ್ನು ಕಾಣಬಹುದು. ತನಗೇ ಆ ಮನೆಯಲ್ಲಿ ಸ್ಥಾನೌಇಲ್ಲದಿದ್ದಾ ತಾನು ಸಾಕಿ ಸಲಹಿದ, ಒಪ್ಪ ಓರಣ ಮಾಡಿದ ವಸ್ತುಗಳು ಅಲ್ಲಿ ಇನ್ನು ಇರಬಾರದೆನ್ನುವ ಹೊಟ್ಟೆಯಲ್ಲಿನ ಬೆಂಕಿ ಈ ರೀತಿ ಹೊರಹೊಮ್ಮುತ್ತದೆ.

ಭಾರತೀಯ ಸಂಸ್ಕೃತಿ ಹೆಂಡತಿಗೆ ಗಂಡನೇ ದೈವ, ಆತನೇ ಸರ್ವಸ್ವ ಎಂದು ಪ್ರತಿಪಾದಿಸುತ್ತದೆ. ಆ ಮೌಲ್ಯದಡಿಯಲ್ಲಿ ವಿವಾಹವಾಗಿ ಬಂದ ಉತ್ತರೆಗೆ ಅಸಹಾಯಕ ಗಂಡನ ಪರಿಸ್ಥಿತಿಯನ್ನು ವಿರೋಧಿಸಲಾಗದೆ 'ಅಪ್ಪ ಕೊಟ್ಟ ಎಮ್ಮೆಯನ್ನು ' ಬಿಡದೆ ತೆಗೆದುಕೊಂಡು ತನ್ನ ಕಂದನನ್ನು ಕರಕೊಂಡು ಹೊರಟುಹೋಗುತ್ತಾಳೆ. ಉತ್ತರದೇವಿಯ ಪ್ರತಿಭಟನೆಯ ತೀವ್ರ ಸ್ವರೂಪ ವ್ಯಕ್ತವಾಗುವುದು 'ಉತ್ತರದೇವಿ' 'ಮಳೆ'ಯಾಗಿ ಹೋಗುವುದರ ಮೂಲಕ ಎಂದೆನಿಸುತ್ತದೆ.

'ತಿಮ್ಮಕ್ಕನ ಪದಗಳು' ಎಂಬ ಗ್ರಂಥದಲ್ಲಿಯ ಪಾಠಾಂತರದಲ್ಲಿ ಉತ್ತರದೇವಿ ಬೇರೆಯಾಗಿಯೇ ಕಾಣುತ್ತಾಳೆ. ತಾಯಿಯ ಮಾತಿನಂತೆ ಪತಿವ್ರತೆಯಾಗಬೇಕೆಂದು 'ಮಳೆ' ಯಾಗಿ ಹೋದವಳಲ್ಲ. ಹೂಬನಕ್ಕೆ ನೀರೆಯುವಾಗ ಕೊಡ ಒಡೆದುದಕ್ಕೆ ಅತ್ತೆ ಸೊಸೆಯನ್ನು ಜರೆದಿದ್ದನ್ನೆ ನೆಪ ಮಾಡಿಕೊಂಡು ಮನೆ ಬಿಟ್ಟು ಹೋಗುತ್ತಾಳೆ. ಇಲ್ಲಿ ಉತ್ತರೆಯ ಗಂಡ ದಂಡಿಗೆ ಹೋಗಿರುತ್ತಾನೆ. ಉತ್ತರದೇವಿಯ ಕಷ್ಟಸುಖಗಳಿಗೆ ಸ್ಪಂದಿಸಲು ಯಾರು ಇಲ್ಲ. ಗಂಡ ದಂಡಿನಿಂದ ಬರುವಷ್ಟರಲ್ಲಿ ಉತ್ತರೆ ತನ್ನ ತವರೂರಿನಲ್ಲಿ ಇನ್ನೊಬ್ಬ ಪುರುಷನ ತೋಳಲ್ಲಿರುತ್ತಾಳೆ. ಗಂಡ ಅರ್ಜುನ ಬಂದು 'ಉತ್ತರದೇವಿ ನೀ ಕೇಳೂ, ಚೆಂದದಿಂದೇಲೂ ಮನೆಗ್ಹೋಪ, ದಂಡೀಗೆ ಹೋಗಿದ್ದೆ ವರಗಲ ತಂದಿದ್ನೆ, ಕಟ್ಟುಲಕ್ಕು, ಏಲೂ ಮನೆಗ್ಹೋಪ ' ಎಂದು ಅಂಗಲಾಚಿದರೂ ಕೇಳದೆ ' ನೀ ತಂದ ವರಹಚಿನ್ನಗಳನ್ನು ನಿನ್ನ ಸೂಳೆಗೆ ಕೊಡು, ಪಟ್ಟೆ ತಂದರೆ ನಿನ್ನ ತಾಯಿಗೆ ಕೊಡು, ಹೂ ತಂದರೆ ಬೀದಿಯಲ್ಲಿ ಒಗೆ ನಾನು ನಿನ್ನ ಮಡದಿಯಲ್ಲ ಎಂದು ಖಂಡ ತುಂಡವಾಗಿ ಹೇಳುತ್ತಾಳೆ. ಈ ಕಥಾನಕ ನಿಜಕ್ಕೂ ಕುತೂಹಲಕಾರಿಯಾದುದು. ಹಾಗೆ ನೋಡಿದರೆ ಸಂಪ್ರದಾಯ, ರೂಢಿ, ಆಚರಣೆಗಳೆನ್ನಲ್ಲ ನಿರಾಕರಿಸಿ, ಮತ್ತೊಬ್ಬನೊಂದಿಗೆ ಬದುಕುವುದು ಸಾಮಾನ್ಯ ಸಂಗತಿಯಲ್ಲ. ಆದರೆ ಉತ್ತರೆ ನಿಜಕ್ಕೂ ದಿಟ್ಟ ಹೆಣ್ಣೆ ಸರಿ. ಲೋಕ ನಿಂದೆಗಳನ್ನು ಲೆಕ್ಕಿಸದೆ ಸಂಪ್ರದಾಯಗಳನ್ನು ಮುರಿದು ತನ್ನ ಸಹಜ ಜೀವನದ ಲಹರಿಯನ್ನು ಕಂಡುಕೊಳ್ಳುವ ಮನಸ್ಥಿತಿ ನಿಜಕ್ಕೂ ಆರೋಗ್ಯ ಪೂರ್ಣವಾದದ್ದು. ಈ ದೃಷ್ಟಿಯಿಂದ ಎಲ್ಲಾ ಬಗೆಯ ಸವಾಲುಗಳನ್ನು ಮೆಟ್ಟಿ ನಿಲ್ಲುವ ಧೈರ್ಯತೋರಿಸಿದ್ದಾಳೆ. ಉತ್ತರದೇವಿ. ದುರಂತವೆಂದರೆ ಉತ್ತರದೇವಿಯ, ತೌರಿನವರಿಗೆ ಮಾನ

ಮರ್ಯಾದೆಯೇ ಹೆಚ್ಚಾಗುತ್ತದೆ. ಈ ರೀತಿ ಬಾಳುವುದನ್ನು ಅವರು ಸಹಿದೆ ಉತ್ತರದೇವಿ ಗಂಡ ಅರ್ಜುನನಿಗೆ ಉತ್ತರೆಯನ್ನು ಸಿಗಿದು ಹಾಕಲು ಹೇಳುತ್ತಾರೆ. ಆದರಂತೆ ಉತ್ತರೆಯ ಗಂಡ ಅರ್ಜುನ ಉತ್ತರೆಯನ್ನು ಸಿಗಿದುಹಾಕುತ್ತಾನೆ. ಇದು ಉತ್ತರೆಯ ಪ್ರತಿಭಟನೆಗೆ ಸಿಕ್ಕ ನ್ಯಾಯ ?

ಪುರುಷ ಪ್ರಧಾನ ಸಾಮಜದಲ್ಲಿ ಪ್ರಾಣಿಯಂತೆ ಬದುಕುವ ಹೆಣ್ಣು ಹರಕೆಯ ಕುರಿಯಂತೆ ಬಲಿಗೆ ಸಿದ್ಧವಾಗುವುದು ಈರೋಬಿಯ ಗೀತೆಯಲ್ಲಿ ಈರೋಬಿಯ ಮಾತಿನಿಂದ ತಿಳಿದು ಬರುತ್ತದೆ. ತಾನೊಂದು ಹೋತ ಎಂದು ಭಾವಿಸಿಕೊಂಡಿರುವುದು ಸಮಾಜದಲ್ಲಿ ತಾನೊಂದು ಪ್ರಾಣಿ ಎಂದು ತಿಳಿದುಕೊಂಡುಬಿಟ್ಟಿದ್ದಾಳೆ. ರಣದಲ್ಲಿ ಈರೋಬಿಯ ಗಂಡ ಮಡಿದಿದ್ದಾನೆಂಬ ಸುದ್ದಿ ಮುಟ್ಟುತ್ತದೆ. ಈರೋಬಿ ತನ್ನ ಗಂಡ ವೀರ, ರಣದಲ್ಲಿ ಮಡಿದಿರಲಾರನೆಂದೇ ಭಾವಿಸಿ

ಸತ್ತ ಸುದ್ದಿ ಬರಲಿ, ನೆತ್ತರದರಬಿ ಬರಲಿ
ಕಿತ್ತೋಳ್ಳಿ ಬರಲಿ ಗುರುತೀಗೆ-ಸೋಮವಾರದ
ಹೊತನಂತೆ ಕೊಂಡ ಹೋಗುತೀನಿ. [೭]

ಸಾವಿನ ಗುರುತುಗಳು ಬರುವ ತನಕ ತನ್ನ ಆತ್ಮಾರ್ಪಣೆಯನ್ನು ಮುಂದೂಡುವುದು ಅವಳಲ್ಲಿ ಬದುಕುವ ಒತ್ತಾಸೆಯನ್ನು ಗುರುತಿಸಲು ಸಾಧ್ಯ. ಈರೋಬಿಯ ನಿರೀಕ್ಷೆಯಂತೆ ಕೊನೆಗೂ

ಸತ್ತ ಸುದ್ದಿ ಬಂತು ನೆತ್ತರದರಿಬಿ ಬಂತು
ಕತ್ತಿ ಬಂತು ಅವನ ಗುರತೀಗೆ [೮]

ಈರೋಬಿ ಮರು ಮಾತಾಡದೆ ಯಾರ ಅಪ್ಪಣೆಯನ್ನು ಪಡೆಯದೆ ಕೊಂಡವೇರಲು ನಿರ್ಧರಿಸಿದಳು. 'ಸೋಮವಾರದ ಹೋತನಂತೆ ಕೊಂಡ ಹೋಗತೀನಿ' ಎಂದಿದ್ದ ಅವಳ ಒಳನೋವಿನ ಎಳೆ ಯಾರಿಗೂ ಗೋಚರಿಸುವುದಿಲ್ಲ. ತಾನೊಂದು ಪ್ರಾಣಿ ಎಂದುಕೊಂಡು ಹೋತನಂತೆ ಬಲಿಯಾಗಲು ಸಿದ್ಧವಾಗಬೇಕಿದೆ. ಇದು ಈರೋಬಿಯ ಸೂಕ್ಷ್ಮ ಮನಸ್ಸಿನ

ಪ್ರತಿಭಟನಾ ಸ್ವರೂಪ. ತನ್ನ ಕಾವ್ಯದ ವಾಕ್ಯದ ಮೂಲಕ ಮಾತ್ರ ತನ್ನ ಮನಸ್ಸಿನ ನೋವಿನ ಎಳೆಯನ್ನು ಸೂಕ್ಷ್ಮವಾಗಿ ತಿಳಿಸಲು ಸಾಧ್ಯವೇ ಹೊರತು, ಬೇರೆ ಇನ್ನೇನೂ ಮಾಡಲಾರಳು.

ಗಂಡ ಸಾಯೋಕಿಂತ ಮುಂಡ್ಯಾಗೊಕಿಂತ
ಕಂಡೋರ ಮನೆಯ ಕಸವ್ಹಾಕಿ - ಸಾಯೊಕಿಂತ
ಕೊಂಡವನ್ನೋದೆ ಕಡುಲೇಸು [೮]

ಎಂದು ಭಾವಿಸಿ ಕೊಂಡವೇರಲು ಸಿದ್ಧಳಾಗುತ್ತಾಳೆ.

ಈರೋಬಿ ಈಗಾಗಲೇ ಅತ್ತೆ, ನಾದಿನಿ, ಅತ್ತಿಗೆಯರಿಂದ ಕಷ್ಟವನ್ನು ಅನುಭವಿಸಿದವಳು. ಆಗ ಪ್ರತಿಭಟಿಸಲಾರದೆ, ಮೌನವಾಗಿ ಸಹಿಸಿಕೊಂಡಿದ್ದ ಈರೋಬಿ ಈಗ ತನ್ನ ಮನದಾಳದಲ್ಲಿದ್ದ ಅವರೆಲ್ಲರ ಮೇಲಿದ್ದ ಆಕ್ರೋಶವನ್ನು ಕೊಂಡ ಹೋಗುವ ಸಂದರ್ಭದಲ್ಲಿ ನೇರವಾಗಿ ಒಬ್ಬೊಬ್ಬರಿಗೂ ಹೇಳಿ ತನ್ನ ಸೇಡನ್ನು ತೀರಿಸಿಕೊಂಡಂತೆ ಕಾಣುತ್ತಾಳೆ.

ರಾಗಿ ಮಾಡಿದ ಕಲ್ಲ ಬೀದಿಗೆ ಚೆಲ್ಲೋಳೆ
ನಾದಿನಿ ನಿನ್ನ ವಿಷವ ಬಿಡಲಿಲ್ಲ-ನಮ್ಮಿಬ್ಬರ
ಗುದ್ದಾಟವಿಲ್ಲೀಗೆ ಸವೆದೋದ್ದೆ [೯]

ಅಕ್ಕಿ ಮಾಡಿದ ಕಲ್ಲ ಹಟ್ಟೀಗೆ ಚೆಲ್ಲೋಳೆ
ಅತ್ತಿಗೆ ನಿನ್ನ ವಿಷಯವ ಬಿಡಲಿಲ್ಲ -ನಮ್ಮಿಬ್ಬರ
ಕಿತ್ತಾಟ ಇಲ್ಲಿ ಸರಿಯಾದೊ [೧೦]

ಬತ್ತ ಮಾಡಿದ ಕಲ್ಲ ಬಚ್ಚಲಿಗೆ ಚೆಲ್ಲೋಳೆ
ಅತ್ಯಮ್ಮ ನಿನ್ನ ವಿಷಯವ ಬಿಡಲಿಲ್ಲ-ನಮ್ಮಿಬ್ಬರ
ಗುದ್ದಾಟ ಇಲ್ಲಿಗೆ ಸರಿಯಾದೆ [೧೧]

ಈ ರೀತಿಯ ಪ್ರತಿಭಟನಾತ್ಮಕ ನೇರ ನುಡಿಗಳನ್ನು ಹೇಳುವಾಗ ಈರೋಬಿಗೆ ನೋವಿದೆ, ವಿಷಾದವಿದೆ, ಕೋಪವಿದೆ. ಗಂಡ ಇದ್ದಾಗಲೇ ಕಷ್ಟ ಕೊಟ್ಟವರು ಇನ್ನು ಗಂಡ ಸತ್ತ ಮೇಲೆ ತನಗೆ ಕೊಡಬಹುದಾದ ಕಷ್ಟವನ್ನು ನೆನೆದು ಕೊಂಡ ಎರುವ ನಿರ್ಧಾರಕ್ಕೆ ಬರುತ್ತಾಳೆ. ಬರೀ ಗಂಡನ ಮನೆಯವರ ಮೇಲಷ್ಟೆ ಆಕೆಗೆ ಕೋಪವಿಲ್ಲ ತನ್ನ ತೌರಿನವರ ಬಗ್ಗೆಯೂ ಅಸಹನೆಯಿದೆ. ತಂದೆ ತಾಯಿ, ಅಣ್ಣ ಎಲ್ಲರನ್ನು ಕರೆಸುತ್ತಾಳೆ. ಆದರೆ ಈರೋಬಿಗೆ ತನ್ನ ಹಸನಾದ ಬದುಕು ಮುರಿದು ನುಚ್ಚು ನೂರಾಗಿರುವಾಗ ಇನ್ನು ತವರಿನವರಾದರೂ ಯಾಕೆ ? ಎಂದುಕೊಂಡು ಅವರನ್ನು ನೋಡುವ, ಮಾತನಾಡಿಸುವ, ಆಸಕ್ತಿಯನ್ನು ತೋರಿಸುವುದಿಲ್ಲ. ಅಲ್ಲಿದ್ದವರೆಲ್ಲ 'ನಿಮ್ಮ ತಾಯಿ ತಂದೆ, ಅಣ್ಣ ಬಂದವರೆ ಮಕತೋರೆ' ಎಂದು ಕರೆದಾಗ

ತಾಯಿ ಬಂದರೆ ಬರಲಿ ಹಾಲ ತಂದರೆ ತರಲಿ
ನನ್ನ ಹಾಲಿನಂಥ ಬದುಕು ಅಡವೀಲಿ - ಈಡಾಡುವಾಗ
ತಾಯಮ್ಮ ಗೊಡವೆ ನಮಗೇನು [೧೨]

ಅಪ್ಪ ಬಂದರೆ ಬರಲಿ ತುಪ್ಪ ತಂದರೆ ತರಲಿ
ತುಪ್ಪದಂಥ ಬದುಕು ಅಡವೀಲಿ - ಈಡಾಡುವಾಗ
ನಮ್ಮಪ್ಪನ ಗೊಡವೆ ನಮಗೇನು [೧೩]

ಎಣ್ಣೆಯಂಥ ಬದುಕು ಅಡವೀಲಿ ಈಡಾಡುವಾಗ
ನಮ್ಮಣ್ಣನ ಗೊಡವೆ ನಮಗೇನು [೧೪]

ಹೀಗೆ ಅವಳು ಹೆತ್ತವರನ್ನು ತಿರಸ್ಕರಿಸುತ್ತಾಳೆ. ತನ್ನ ಹಾಲಿನಂಥ ಬದುಕು ಅಡವಿ ಪಾಲಾಗಿರುವಾಗ ಯಾರು ಬಂದೇನು ಪ್ರಯೋಜನ ? ಏನು ತಂದೇನು ಪ್ರಯೋಜನ ? ಅವರೆಲ್ಲರ ಮೇಲೆ ಅಸಹನೆಯಿದೆ ಬರೀ ಹೆತ್ತವರನ್ನಷ್ಟೆ ಅಲ್ಲ ಇಡೀ ಸಮಾಜವನ್ನೇ ತಿರಸ್ಕರಿಸುವ ಮಾತುಗಳಿವು. ಸತ್ತ ಗಂಡ ಬರುವುದಿಲ್ಲ, ತಾನು ಬದುಕಿದ್ದೂ ಸತ್ತಂತೆ. ಈರೋಬಿಗೆ ಗಂಡನಿಲ್ಲದೆ ಬದುಕುವುದು ಬಹಳ

ದುಸ್ತರವೆನಿಸಿತು. ಯಾರ ಹಂಗನ್ನೂ ಬಯಸದೇ, ಯಾರು ಎಷ್ಟೆ ಬುದ್ಧಿವಾದ ಹೇಳಿ ಸಾಂತ್ವನ ಮಾಡಿದರೂ ಯಾರ ಮಾತನ್ನೂ ಕೇಳದಾದಳು. ಇವಳಿಗೆ ಹೊಸ ಬದುಕನ್ನೇ ಕೊಡುತ್ತೇನೆಂದು ಬಂದ 'ಕೂಡಾವಳಿ' ಗೆ ಸಿದ್ಧನಾಗಿರುವ ಚೆನ್ನಪಟ್ಟಣದ ನಿಂಗೇಗೌಡ ಕೊಟ್ಟು ಕಳಿಸಿದ ಚೆನ್ನದುಂಗುರವನ್ನು ಹಿಂದಕ್ಕೆ ಕಳಿಸುತ್ತಾಳೆ. ಅಷ್ಟೇ ಅಲ್ಲ ಒಡಲ ಕಿಚ್ಚನ್ನು ಆತನಿಗೆ ಹಿಡಿ ಶಾಪ ಹಾಕುವ ಮೂಲಕ ತೀರಿಸಿಕೊಳ್ಳುತ್ತಾಳೆ.

ಹಟ್ಟಿಕಲ್ಲಡಗಲಿ ಕೊಟ್ಟಿಗೆ ಬರಿದಾಗಲಿ
ಹಿಂಡೆಮ್ಮೆ ಸಾಲು ಆಡಗಲಿ – ನಿಂಗನಗೌಡ
ನನಗೋಳು ನಿಮ್ಮೆಣ್ಣಗೆ ಮಡಗಿರಲಿ [೧೫]

ನನ್ನನ್ನು ಆಸೆ ಪಡುವ ನಿನ್ನಂಥವನ, ವಂಶವೇ ನಾಶವಾಗಲಿ, ನಿನ್ನ ಹೆಂಡತಿಗೂ ನನ್ನಗೋಳೇ ಬಂದೊದಗಲಿ ಎಂದು ಕಿಡಿಕಾರುತ್ತಾಳೆ. ಇಡೀ ಸಮಾಜವನ್ನೇ ಕುರಿತು ಶಾಪ ಹಾಕುವಂತೆ ತೀಕ್ಷ್ಣವಾಗಿವೆ ಈರೋಬಿಯ ಮಾತುಗಳು.

ವ್ಯವಸ್ಥೆಯ ವಿರುದ್ಧ ಮಾತನಾಡಲಾಗದ ಮೌನ ಎದುರಿಗಿದ್ದವರನ್ನು ಪ್ರತಿಭಟಿಸಲಾರದೆ ಎಲ್ಲವನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ. ಆದರೆ ಅದೇ ಮೌನ ಇನ್ಯಾವುದೋ ರೂಪದಲ್ಲಿ ಸದ್ದಿಲ್ಲದಂತೆ ಪ್ರತಿಭಟಿಸುತ್ತಲೇ ಇರುತ್ತದೆ. ಆದರೆ ಅಂಥ ಪ್ರತಿಭಟನೆಗೆ ನ್ಯಾಯ ಸಿಗುತ್ತದೆಂದು ಹೇಳಲಾಗದು. ಹೀಗೆ ಮೌನವಾಗಿ ಗೊತ್ತಿದ್ದೂ ಗೊತ್ತಿಲ್ಲದಂತೆ ತನ್ನ ಬಲಿಯನ್ನು ಒಪ್ಪಿಕೊಂಡವಳು ಭಾಗೀರತಿ.

'ಕಡೆಸೊಸಿ ಭಾಗೀರತಿಯನ್ನು ಹಾರವ ಕೊಡಬೇಕೆಂತ ಮಾತಾತು ಮನೆಯಾಗ ' ಎಂಬಂಥ ನಿರ್ಧಾರ ಭಾಗೀರತಿಯಿಂದ ವಿರೋಧಿಸಲಾಗದಂತದ್ದು. ಕಾರಣ ಆಕೆಯ ಗಂಡ ದಂಡಿಗೆ ಹೋಗಿದ್ದಾನೆ. ಇಂಥ ಸಮಯದಲ್ಲಿ ಭಾಗೀರತಿ ಒಂದು ವೇಳೆ ಅಸಮ್ಮತಿ ನೀಡಿದ್ದರೂ ಪ್ರಯೋಜನವಾಗುತ್ತಿರಲಿಲ್ಲ. ಹೀಗಾಗಿ ಭಾಗೀರತಿ ಕೆರೆಗೆ ಹಾರವಾಗಲು ಇಷ್ಟವಿಲ್ಲದಿದ್ದರೂ ಸಿದ್ಧವಾಗಲೇಬೇಕಾಯಿತು. ತತ್‌ಕ್ಷಣವೇ ತೌರಿಗೆ ಹೋಗಿ ಬರಲು ನಿರ್ಧರಿಸುತ್ತಾಳೆ. ಅವರಿಂದಾದರೂ ತನಗೆ ಸಹಾಯ ಸಿಗಬಹುದೆಂಬ, ನೈತಿಕ ಬೆಂಬಲಕೊಡಬಹುದೆಂಬ ಅಪೇಕ್ಷೆ ಇರುತ್ತದೆ. ಅವರೆಲ್ಲರೂ (ತಂದೆ, ತಾಯಿ, ಅಕ್ಕ),

ಎಂದಿಲ್ಲದ ಭಾಗೀರತಿ ಇಂದ್ಯಾಕ ಬಂದೆವ್ವ?
ಬಾಡಿದ ಮರ್‍ಯಾಗ ಕಣ್ಣಾಗ ನೀರ್‍ಯಾಕ?[೧೬]

ಎಂದು ಸ್ವಲ್ಪ ಆತಂಕಗೊಂಡವರಂತೆ ಕೇಳುತ್ತಾರೆ. ಆದರೆ ಭಾಗೀರತಿ ತನ್ನ ಮನದ ಇಂಗಿತವನ್ನು ತನ್ನ ಅತ್ತೆ ಮಾವರು 'ಕೆರೆಗೆ ಹಾರ' ಕೊಡುವ ವಿಚಾರವನ್ನು ನೇರವಾಗಿ ಹೇಳಲಾಗದೆ, 'ನಮ್ಮಾವ ನಮ್ಮತ್ತೆ ಬ್ಯಾರೆ ಇಡತಾರಂತೆ' ಎಂದು ಬಹಳ ಸೂಚ್ಯವಾಗಿ ಹೇಳುತ್ತಾಳೆ. ಮಗಳ ದುಃಖವನ್ನು ಅರಿತುಕೊಳ್ಳಲಾರದೆ ಭಾಗೀರತಿಯ ಅಪ್ಪ 'ಇಟ್ಟರೆ ಇಡಲೇಳು ಹೊಲಮನಿ ಕೊಡತೇನು' ಎನ್ನುತ್ತಾನೆ. ಹೆತ್ತ ಕರುಳಿಗೂ ಭಾಗೀರತಿಯ ನೋವು ಅರ್ಥವಾಗದೆ 'ಇಟ್ಟರೆ ಇಡಲೇಳು ವಾಲಿಜೋಡು ಕೊಡುತೇನ' ಎನ್ನುತ್ತಾಳೆ ಅವಳವ್ವ. ಇನ್ನು ಅವಳ ಅಕ್ಕ 'ಇಟ್ಟರೆ ಇಡಲೇಳು ಮಕ್ಕಳ ಜೋಡಿಗೆ ಕಳವತೇನ' ಎನ್ನುತ್ತಾಳೆ. ಇಂಥ ಸಮಾಧಾನದ ಮಾತುಗಳು ಭಾಗೀರತಿಗೆ ಬೇಕಿರಲಿಲ್ಲ. 'ಹೊಲಮನಿ ಒಯ್ದು ಹೊಳಿ ದಂಡ್ಯಾಗಾಕಪ್ಪ' ಎನ್ನುವಾಗ 'ಹೊಳಿ' ಎನ್ನುವ ಮಾತು ಬಹಳ ಮಾರ್ಮಿಕವಾದದ್ದು, ಧ್ವನಿಪೂರ್ಣವಾದದ್ದು. ಹಾಗೆಯೆ 'ವಾಲಿಯ ಜೋಡೊಯ್ದು ಒಲಿಯಾಗ ಹಾಕವ್ವ' ಎನ್ನುವುದು, 'ಮಕ್ಕಳಿದ್ದರೇನಕ್ಕ ದುಕ್ಕ ಕಳುದಾವೇನ' ಹೀಗೆ ಹೇಳುವಾಗ ಪ್ರತಿಭಟನೆಯ ತೀವ್ರತೆ ಎದ್ದು ಕಾಣುತ್ತದೆ.

ಭಾಗೀರತಿ ಅಪೇಕ್ಷಿಸಿ ಬಂದಿದ್ದು ತನಗೊದಗಿದ ದುರಂತಕ್ಕೆ ಪರಿಹಾರ ಹುಡುಕಲು ಆದರೆ ಅಲ್ಲಿ ಯಾರಿಂದಲೂ ಪರಿಹಾರ ಸಿಗುವ ಹಾಗೆ ಕಾಣಲಿಲ್ಲ. ಇವಳ ನೋವನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗುತ್ತಾರೆ. ಭಾಗೀರತಿಯ ಮಾತಿನ ಮರ್ಮ ಯಾರಿಗೂ ಅರ್ಥವಾಗುವುದಿಲ್ಲ. ಭಾಗೀರತಿ 'ಕೆರೆಗೆ ಹಾರ'ವಾಗುವುದಂತೂ ನಿಶ್ಚಿತವಾದದ್ದೇ. ಇನ್ನು ಹೊಲಮನಿ, ವಾಲಿಜೋಡು, ಮಕ್ಕಳು ಇವೆಲ್ಲ ಭಾಗೀರತಿಯ ಸಾವನ್ನು ತಪ್ಪಿಸಲಾರವು. ಅವರೆಲ್ಲ ಲೌಕಿಕ ಸಂಪತ್ತನ್ನು ಕೊಟ್ಟು ಕೈತೊಳೆದುಕೊಳ್ಳಬಲ್ಲರೇ ಹೊರತು ಭಾಗೀರತಿಗಾದ ಅನ್ಯಾಯಕ್ಕೆ ಪ್ರತಿಭಟಿಸುವ ಸೊಲ್ಲು ಯಾರಿಂದಲೂ ಬರಲಿಲ್ಲ. ಭಾಗೀರತಿ ಮತ್ತೇನನ್ನು ಹೇಳದೆ ಗೆಳತಿಯಿಂದಲಾದರೂ ಪರಿಹಾರ ಸಿಕ್ಕಬಹುದೆಂದು ಹೋಗುತ್ತಾಳೆ. ಗೆಳತಿ ಕೇಳುತ್ತಾಳೆ. 'ಎಂದಿಲ್ಲದ ಭಾಗೀರತಿ ಇಂದ್ಯಾಕ ಈ ಅಳುವು? ಗೆಳತಿಗೆ ಏನೋ ಅನುಮಾನ. ಭಾಗೀರತಿ 'ನಮ್ಮತ್ತೆ ನಮ್ಮಾವ ಕರೆಗ್ಹಾರ ಕೊಡತಾರಂತೆ' ಎಂದು

ನೇರವಾಗಿ ವಿಷಯ ತಿಳಿಸುತ್ತಾಳೆ. ಭಾಗೀರತಿ ನಿರೀಕ್ಷಿಸಿದಂತೆ ಗೆಳತಿಯಿಂದಲೂ ನ್ಯಾಯ ಸಿಗಲಿಲ್ಲ. ಗೆಳತಿಯೂ ಭಾಗೀರತಿಯಂತೆ ಅಸಹಾಯಕ ಹೆಣ್ಣು. ಹೆಣ್ಣಿನ ಜನ್ಮವೇ ಇಷ್ಟು ಎಂದು ಭಾವಿಸಿದವಳು. ಹಾಗಾಗಿ ಆಕೆಯ ಗೆಳತಿ 'ಕೊಟ್ಟರೆ ಕೊಡಲೇಳು ಇಟ್ಹಾಂಗ ಇರಬೇಕು' ನಿನಗೆ ಈಗ ಏನು ಕಷ್ಟ ಒದಗಿದೆಯೋ ಅದನ್ನು ಸ್ವೀಕರಿಸಲೇಬೇಕು ಎಂದು ನಿರ್ಧಾರದ ಮಾತಾಡಿದಾಗ ಭಾಗೀರತಿ ಒಂದರಗಳಿಗೆಯೂ ನಿಲ್ಲದೆ ಭರದಿಂದ ಗಂಡನ ಮನೆಗೆ ಹೋಗುತ್ತಾಳೆ. ಬದುಕುವ ಆಸೆ ನುಚ್ಚುನೂರಾಗುತ್ತದೆ. ಭಾಗೀರತಿಗೆ ಕೆರೆಗೆ ಹಾರವಾಗುವುದು ಆಕೆಯ ಮನಃಪೂರ್ತಿಯಿಂದಲ್ಲ ಎನ್ನುವುದನ್ನು ಆಕೆ ಸುರಿಸುವ ಕಣ್ಣೀರೇ ಹೇಳುತ್ತದೆ.

ಭಾಗೀರತಿಗೀಗ 'ಕೆರೆಗೆ ಹಾರ ' ವಾಗುತ್ತೇನಲ್ಲ ಎಂಬುದೊಂದೇ ಯೋಚನೆ. ಇಷ್ಟವಿಲ್ಲದಿದ್ದಾಗ ಪ್ರತಿಭಟನೆ ಕಣ್ಣೀರಿನ ಮೂಲಕ ವ್ಯಕ್ತವಾಗುತ್ತದೆ.

ಬ್ಯಾಳಿಯ ಹಸಮಾಡುತ್ತಾ ಬಿಟ್ಟಳು ಕಣ್ಣೀರ
ಎಂದಿಲ್ಲದ ಭಾಗೀರತಿ ಇಂದ್ಯಾಕ ಕಣ್ಣೀರು?
ಬ್ಯಾಳ್ಯಾಗಿನ ಹಳ್ಳ ಬಂದು ಕಣ್ಣಾಗೆರಚಿದವುಮಾವಾ
ಅಕ್ಕಿಯ ಹಸಮಾಡುತ್ತ ಉಕ್ಕಾವು ಕಣ್ಣೀರು.
ಅಕ್ಯಾಗಿನ ಹಳ್ಳೊಂದು ಕಣ್ಣಾಗ ಬಿತ್ತತ್ತಿ. [೧೬]

ಹೀಗೆ ತನ್ನ ದುಃಖಕ್ಕೆ ಹಾರಿಕೆಯ ಉತ್ತರ ಕೊಡುತ್ತಾಳೆ. ಭಾಗೀರತಿಯ ಮೌನವಾಗಲಿ, ಕಣ್ಣೀರಾಗಲಿ ಅವರೆಲ್ಲರ ನಿರ್ಧಾರವನ್ನೇನೂ ಬದಲಾಯಿಸಲಿಲ್ಲ. ಅಂತೂ ಭಾಗೀರತಿ 'ಕೆರೆಗೆ ಹಾರ' ವಾಗುತ್ತಾಳೆ. ಮದಗದ ಕೆಂಚವ್ವ ಹುಳಿಯಾರು ಕೆಂಚಮ್ಮನಂಥವರೂ ಭಾಗೀರತಿಗಿಂತ ಬೇರೆಯಲ್ಲ ಅವರೆಲ್ಲರೂ ಇಷ್ಟವಿಲದಲದಿದ್ದರೂ ಕೆರೆಗೆ ಹಾರವಾದವರೇ.

ಹೆಣ್ಣಿಗೆ ದುಃಖ ಒಂದೇ ಎಂದು ಹೇಳುವಂತೆಯೇ ಇಲ್ಲ, ಒಂದಲ್ಲ ಒಂದು ದುಃಖಕ್ಕೆ ಈಡಾಗುತ್ತಲೇ ಇರುತ್ತಾಳೆ. ಹೊನ್ನಮ್ಮನ ದುಃಖ ಮಕ್ಕಳಿಲ್ಲ ಎನ್ನುವುದು. ಬಂಜೆ ಎಂಬ ಶಬ್ದ ಹೊರಲಾರದೆ ಕಂಗೆಟ್ಟವಳು. ಸಂತತಿಗಾಗಿ ಧರ್ಮ ಕಾರ್ಯಗಳನ್ನು ಮಾಡಿದವಳು. ಆದರೇನು

ಪ್ರಯೋಜನ ? ಮನುಷ್ಯರಿರಲಿ, ಪ್ರಾಣಿ ಪಕ್ಷಿಗಳಿಂದಲೂ ನಿಂದೆಗೆ ಗುರಿಯಾಗುತ್ತಾಳೆ. ಮಕ್ಕಳಿಲ್ಲದ ಹೊನ್ನಮ್ಮನನ್ನು ಬಂಜೆ ಎಂದು ಹಕ್ಕಿಪಕ್ಷಿಗಳು, ದನಕರುಗಳು ನೀರು ಕುಡಿಯದೆ, ಹಣ್ಣನ್ನು ತಿನ್ನದೆ ತಾವೂ ಬಂಜೆಯರಾದೇವು, ತಮ್ಮ ಮಕ್ಕಳು ಬಂಜೆಯರಾಗುತ್ತಾರೆಂದು ಹಿಂದಕ್ಕೆ ಹೋಗುವುದು, ಗಂಗೆ ಪೂಜೆಗೆ ಹೋದರೆ ನೀರು ಬತ್ತಿ ಹೋಗುವುದು. ಇವೆಲ್ಲಾ ವಾಸ್ತವವಲ್ಲದಿದ್ದರೂ ಬಂಜೆಯಾದವಳನ್ನು ಸಮಾಜ ನೋಡುವ ರೀತಿ ಇವುಗಳ ತಿರಸ್ಕಾರದಿಂದ ಸೂಚಿಸಿದ್ದಾರೆ. 'ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ ' ನೊಂದು ಬೆಂದ ಹೊನ್ನಮ್ಮನಿಗೆ ಸ್ವಂತ ಅಕ್ಕಂದಿರೇ ತಮ್ಮ ಮಕ್ಕಳನ್ನು ಬಂಜೆಯಾದ ಹೊನ್ನಮ್ಮ ಮುಟ್ಟಬಾರದೆಂದು ತಮ್ಮ ಮಕ್ಕಳನ್ನು ಕಾಣಿಸದೆ ಅಡಗಿಸಿಟ್ಟುಕೊಂಡು ಆಕೆಯನ್ನು ಹೊಡೆದು ಕೊರಕಲಿಗೆ ತಳ್ಳುತ್ತಾರೆ. ಇಂಥದ್ದೊಂದು ಅನಿರೀಕ್ಷಿತ ಅವಮಾನ, ಹೊನ್ನಮ್ಮನನ್ನು ಕೆರಳಿಸುತ್ತದೆ. 'ಇವರ ವಾಡೇಲಿದ್ದ ಮಕ್ಕಳು ಹುಳುತೇಯ ಹೋಗಲಿ' ಎಂದು ಶಾಪ ಹಾಕುತ್ತಾಳೆ. ಕೆಲವು ಸಂದರ್ಭಗಳಲ್ಲಿ ನೇರವಾಗಿ ಪ್ರತಿಭಟಿಸಲಾಗದಿದ್ದಾಗ ಈ ರೀತಿಯ ಶಾಪಗಳ ಮೂಲಕ ಹೊರಹೊಮ್ಮುವುದು ಆಕೆಗಾದ ಅವಮಾನದ ನೋವಿನ ತೀವ್ರತೆಯಿಂದ ಎದ್ದು ಕಾಣುತ್ತದೆ,

ಲೋಕಾಪವಾದ ಹೆಣ್ಣನ್ನು ಮತ್ತಷ್ಟು ಕಂಗೆಡಿಸುತ್ತದೆ. ಈ ಪಾಪಿ ಹೆಣ್ಣಾಗಿ ಹುಟ್ಟಲೇಬಾರದು ಎನ್ನುವ ಮಟ್ಟಕ್ಕೆ ಹೋಗುತ್ತದೆ. ಇದಕ್ಕೆ ಪುರಾಣದ ಸ್ತ್ರೀಯರೇನೂ ಹೊರತಲ್ಲ. ಮಹಾಪತಿವ್ರತೆಯರು ಎನಿಸಿಕೊಂಡ ಸೀತೆ, ಅಹಲ್ಯೆ, ಶಕುಂತಲೆಯರೂ ಲೋಕಾಪವಾದಕ್ಕೆ ಗುರಿಯಾದವರು. ಅವರ ಶೀಲದ ಬಗ್ಗೆಯೇ ಶಂಕಿಸಿ ಗಂಡನಿಂದ ದೂರಾದವರು. ಇಂಥ ಸ್ತ್ರೀಯರಂತೆ ಲೋಕಾಪವಾದಕ್ಕೆ ಶಂಕೆಗೆ ಗುರಿಯಾಗಿ ಗಂಡನ ಮನೆಯಿಂದ ಹೊರಹಾಕಲ್ಪಟ್ಟವಳು ಗುಣಸಾಗರಿ.

ವಾಸ್ತವವಾಗಿ ತನ್ನದಲ್ಲದ ತಪ್ಪಿಗೆ ಉದ್ದಕ್ಕೂ ಜೀವ ತೇಯುತ್ತಾ ಕಣ್ಣೀರಿನಲ್ಲಿ ಕೈತೊಳೆಯುತ್ತಾ ಸತ್ಯವನ್ನು ಲೋಕಕ್ಕೆ ಸಾರಲು ಕಾದವಳು ಗುಣಸಾಗರಿ. ತನಗಾದ ಅನ್ಯಾಯಕ್ಕೆ ಮೌನವಾಗೇ ಕಣ್ಣೀರಿಟ್ಟವಳು. ಗುಣಸಾಗರಿಯ ಗಂಡ ಚಂಪಾಲುಸೆಟ್ಟಿ ದಂಡಿಗೆ ಹೋದವನು ಎಂದೋ ಒಂದು ದಿನ ರಾತ್ರಿವೇಳೆಯಲ್ಲಿ ಗುಟ್ಟಾಗಿ ಬಂದು ಗುಣಸಾಗರಿಯು ಗರ್ಭಿಣಿಯಾಗಲು ಕಾರಣನಾದವನು. ಅಲ್ಲದೆ ಆತ ತಾನು ಬಂದು ಹೋದ ವಿಷಯವನ್ನು ಯಾರಿಗೂ ಹೇಳಬೇಡವೆಂದಿರುತ್ತಾನೆ.

ನಾಹೋದ ಮರದಿವ್ಸಕೇಽಽಽ ಅತ್ತಗದಿರು ಬರ್ವ್ರುಽ
ಅತ್ತಗದಿರೀಗೆ ದಾರಿಽಽಽ ಕೊಡಬೇಡಲಽ ||ಸುವ್ವಿ||
ಅಷ್ಟೊಂದು ಮಾತಾಽಽಽ ಹೇಳಿದ ಚಂಪಾಲುಸೆಟ್ಟಿಽಽ
ದುಕ್ಕಽಽಽ ದಾಽಽಽ ದಾರಿಽಽಽ ಹಿಡೀದಽನ್ಯೇಽ |ಸುವ್ವಿ||[೧೭]

ತನ್ನ ಗಂಡ ಬಂದಿದ್ದಕ್ಕೆ ಅವನೇ ಕೊಟ್ಟುಹೋದ ಉಂಗುರವಿದೆ. ಅದೇ ಸಾಕ್ಷಿಯೆಂದು ತೋರಿಸಲು ಮುಂದಾಗುತ್ತಾಳೆ. ನಾದಿನಿಯರಾದ ಅಲ್ಲಕ್ಕ-ಮಲ್ಲಕ್ಕ ಗುಣಸಾಗರಿಯ ಮೇಲೆ ಅಪವಾದ ಬರಲೆಂದೇ ಉಂಗುರವನ್ನು ನಾಪತ್ತೆ ಮಾಡಿರುತ್ತಾರೆ. ತನ್ನ ಮೇಲೆ ಹೊರಿಸಲಾದ ಕಳಂಕವನ್ನು ನಿವಾರಿಸಿಕೊಳ್ಳಲು ಬಂದ ವಿಪತ್ತಿನಿಂದ ಪಾರಾಗಲು ಇದ್ದ ಒಂದೇ ದಾರಿ ಉಂಗುರವಾಗಿತ್ತು. ಆದರೀಗ ಆ ಉಂಗುರವೂ ಇಲ್ಲ. ಬಂದ ಜನರು ಗುಣಸಾಗರಿಯ ಶೀಲವನ್ನು ಶಂಕಿಸುತ್ತಾರೆ. ಇಂಥ ಸಂದರ್ಭವನ್ನೇ ಕಾಯುತ್ತಿದ್ದ ನೆರುವಾಣಿ ನಿರಪರಾಧಿಯಾದ ಗುಣಸಾಗರಿಯ ತಲೆ ಒಡೆಯಲು ಐದು ಜನ ಸಿಪಾಯಿಗಳನ್ನು ಕಳಿಸುತ್ತಾನೆ. ಇಂಥ ಸಂದರ್ಭದಲ್ಲಿ ಗುಣಸಾಗರಿ ಪ್ರತಿಭಟಿಸಲಾರದೇ ಮೌನವಾಗಿ ಸಿಪಾಯಿಗಳ ಹಿಂದೆ 'ಹರಕೆಗೆ ಹೋಗುವ ಕುರಿಯಂತೆ ' ಸಾಗುತ್ತಾಳೆ. ಆದರೆ ಗುಣಸಾಗರಿ ಬುದ್ಧಿವಂತೆ ಅಲ್ಲಿ ಪ್ರತಿಭಟಿಸಲಾಗದಿದ್ದನ್ನು ಮುಂದೆ ಸಾಧಿಸುತ್ತಾಳೆ. ತಲೆ ಒಡೆಯಲು ಬಂದ ಸೀಪಾಯಿಗಳಗೆ

ನನ್ನ ತಲೀ ಹ್ಯಾಂಗೇ ಽಽಽ ಹೊಡ್ವಿರೇ ಽಽಽ ? ನೀವಿನ್ನು
ನಿಮುತಾಽಯುಽಲುಽ ತಲ್ಯ ಽಽ ಹೊಡಿದಂತೆ ಽಽ [೧೮]

ಎಂದು ಹೇಳಿದಾಗ ತಾಯಿಯನ್ನೆ ಕಂಡಂತೆ ಕನಿಕರಗೊಂಡ ಸಿಪಾಯಿಗಳು ಗುಣಸಾಗರಿಯ ತಲೆ ಒಡೆಯದೆ ಬಿಟ್ಟು ಹೋಗುತ್ತಾರೆ. ನಿರಿಪರಾಧಿಯಾದ ತಾನು ನಿರಪರಾಧಿಯೆಂದು ಸಾಭೀತುಪಡಿಸುವ ಕಾಲಕ್ಕೆ ಅಗಸನ ಮನೆಯಲ್ಲಿ ಆಶ್ರಯ ಪಡೆದು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಹೀಗೆ ಕಾಯುವುದು ಒಂದು ಬಗೆಯ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಯೇ ಸರಿ. ತನ್ನ ಭಾವ, ನಾದಿನಿಯರು ತನಗೆ ಮಾಡಿದ ಅನ್ಯಾಯವನ್ನು ಮರೆತಿಲ್ಲ. ತನ್ನ ಮೇಲೆ ಹೊರಿಸಿದ ಆರೋಪವನ್ನು ಸುಖಾ ಸುಮ್ಮನೆ ಒಪ್ಪಿಕೊಳ್ಳುವವಳಲ್ಲ. ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಿ ತನ್ನ ಪಾವಿತ್ರ್ಯತೆಯನ್ನು ಜಗಜ್ಜಾಹೀರುಗೊಳಿಸಿ

ಸಮಾಜದ ಕಣ್ಣಿನಲ್ಲಿ ತಾನು ಶೀಲವಂತೆ ಎಂಬುದನ್ನು ಸತ್ಯಕ್ಕೆ ಜಯ ಎಂಬುದನ್ನು ಸಾಬೀತು ಮಾಡಿದವಳು.

ಗುಣಸಾಗರಿಯ ಪ್ರತಿಭಟನಾತ್ಮಕ ಮನೋಭಾವದ ತೀವ್ರತೆ ಗೊತ್ತಾಗುವುದು ಗಂಡ ಚೆಂಪಾಲುಸೆಟ್ಟಿ ಬಂದು ಸುಂಕದಂಗಡಿಯ ಮುಂದೆ ನಿಂತಾಗ ಗುಣಸಾಗರಿ ಮಗನಿಗೆ ನಿನ್ನ ಅಪ್ಪ ಸುಂಕ ಕೊಡದ ಹೊರತು ಬಿಡಬೇಡ ಎನ್ನುವುದು, ದಾಹ ಎಂದು ನೀರು ಕೇಳಲು ಮನೆಯೊಳಗೆ ಹೋದಾಗಲೂ ತನ್ನ ಗಂಡ ಬಂದ ಎಂದು ಉದ್ವೇಗಕ್ಕೊಳಗಾಗದೆ, ಸಂತೋಷವನ್ನು ವ್ಯಕ್ತಪಡಿಸದೆ ಗಂಡ ಬಂದು ಬಿಟ್ಟ ಇನ್ನು ನನ್ನ ಸಮಸ್ಯೆ ಬಗೆಹರಿಯಿತೆಂದು ಸಂತೋಷಿಸಿ ಸ್ವಾಗತಿಸದೆ ಗಂಡನನ್ನು ಉದಾಸೀನವಾಗಿ ಕಾಣುವುದು ಒಂದು ರೀತಿಯ ಪ್ರತಿಭಟನೆಯೇ. ಕಾರಣ ತನಗೆ ಒದಗಿದ ದುಃಸ್ಥಿತಿಗೆ ಗಂಡನೇ ಕಾರಣ ಎನ್ನುವ ಅಸಮಾಧಾನವಿದೆ.

ನೀರು ಕೊಡಲು ಬಂದ ಹೆಂಡತಿ ಗುಣಸಾಗರಿಯನ್ನು ಕಂಡು ಚೆಂಪಾಲುಸೆಟ್ಟಿ ಕಣ್ಣೀರು ಸುರಿಸುತ್ತಾನೆ. ಆಗ ಗುಣಸಾಗರಿ

ಯಾಕ್ಯಾಕೆಽಽ ಬಣಜಿಗಾಽಽಯೇಕಾರೇ ಅಳ್ಳುತೇ ಽಽ
ನಿನ್ನ ಹೆಂಡೂತಿ ಽಽ ಸತ್ತದ್ಯೋ ಮನಿಯಲ್ಲೀ ।ಸುವ್ವೇ ಽಽ।
ಯಾಕ್ಯಾಕೆಽಽ ಬಣಜಿಗ್ಯಾಽಽಯೇಕಾರೇ ಅಳ್ಳುತೇ ಽಽ
ನಿನ್ ಅಕ್ಕ ತಂಗದಿರ್ ಸತ್ತಾರ್ಯೋಽಽ ಮನಿಯಲ್ಲೀ ಽಽಽ [೧೯]

ಗುಣಸಾಂಗರಿ ತನಗೆ ತನ್ನ ಅಕ್ಕ ತಂಗಿಯರಾದ ಅಲ್ಲಕ್ಕ-ಮಲ್ಲಕ್ಕ ಹಾಗೂ ಭಾವ ನೆರುವಾಣೆಯಿಂದಾದ ಅನ್ಯಾಯವನ್ನು ಮರೆತಿಲ್ಲ. ನ್ಯಾಯಕ್ಕಾಗಿ ಕಾದು ಪ್ರತಿಭಟಿಸಿ ನಿಂತವಳು.ಗಂಡನ ಕಣ್ಣೀರಿಗೆ ಕರಗದೆ ಎಲೋ ಬಣಜಿಗಾ ಮನೆಯಲ್ಲಿ ನಿನ್ನ ಹೆಂಡತಿ ಸತ್ತಳೆಂದು ಅಳುತ್ತಿದ್ದೀಯಾ ? ಇಲ್ಲ ನಿನ್ನ ಅಕ್ಕತಂಗಿಯರು ಸತ್ತರೆಂದು ಅಳುತ್ತಿದ್ದೀಯಾ ಎಂದು ಚುಚ್ಚಿ ನುಡಿದಾಗ ಚೆಂಪಾಲುಸೆಟ್ಟಿಗೆ ಹೆಂಡತಿಯ ಮಾತಿನ ಮರ್ಮ ತಿಳಿಯುತ್ತದೆ. ನೇರವಾಗಿ ತನ್ನ ಮನೆಗೆ ಬಂದು ವಿಚಾರಿಸಿದಾಗ ನಿಜಾಂಶವೇನೆಂದು ತಿಳಿಯುತ್ತದೆ. ಕೊನೆಗೂ ಗುಣಸಾಗರಿಯ ಪ್ರತಿಭಟನೆಗೆ ನ್ಯಾಯ ದೊರಕುತ್ತದೆ.

ಪುರುಷ ಪ್ರಧಾನ ಸಮಾಜದ ಮೌಲ್ಯಗಳ ಪ್ರಾಬಲ್ಯದಿಂದ ವಿವಿಧ ರೀತಿಯ ಶೋಷಣೆಗೆ ಒಳಗಾಗಿಯೂ, ಅಸ್ತಿತ್ವವನ್ನು ಉಳಿಸಿಕೊಳ್ಳಲು ತನ್ನದೇ ಆದ ರೀತಿಯಲ್ಲಿ ಹೋರಾಟ ನಡೆಸಿದಾಗ ಮಹಿಳೆಯ ಸಂವೇದನೆಗಳನ್ನು ತಿಳಿದುಕೊಳ್ಳಲು ಜನಪದ ಸಾಹಿತ್ಯ ಹೇರಳ ಮಾಹಿತಿಗಳನ್ನು ಒದಗಿಸುತ್ತದೆ.[೨೦]

ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಉತ್ತರದೇವಿ 'ಮಳೆ' ಯಾಗಿ ಭಾಗೀರತಿ 'ಕೆರೆಗೆ ಹಾರ' ವಾಗಿ, ಮದಗದ ಕೆಂಚಮ್ಮ ಮದಗದ ಕೆರೆಗೆ ಹಾರವಾಗಿ, ಹುಳಿಯಾರು ಕೆಂಚಮ್ಮ ಹುಳಿಯಾರು ಕೆರೆಗೆ ಹಾರವಾಗಿ ನೀರನ್ನು ತಂಪನ್ನು ತರುವುದು ಆದರ್ಶದ ಪ್ರತೀಕ. ತನಗೆ ಕೇಡನ್ನು ಬಯಸಿದವರಿಗೂ ಒಳ್ಳೆಯದನ್ನೇ ಬಯಸುವುದು ಹೆಣ್ಣಿನ ಚಾರಿತ್ರ್ಯವನ್ನು ಸೂಚಿಸುತ್ತದೆ. ಹಾಗಾಗಿಯೇ ಹೆಣ್ಣನ್ನು ಭೂಮಿಗೆ, ನೀರಿಗೆ ಹೋಲಿಸಲಾಗಿದೆ.

ಅಂತಿಮವಾಗಿ ಎಲ್ಲ ಕಥನ ಕಾವ್ಯಗಳು ನಮಗೆ ಸ್ಪಷ್ಟವಾಗಿ ತಿಳಿಸುವುದೇನೆಂದರೆ ಆ ಹೊತ್ತಿನ ಸಾಮಾಜಿಕ ಸಂದರ್ಭವನ್ನು ಹಾಗೂ ಆ ಹೊತ್ತಿನ ಅವರ ಹಿನ್ನೆಲೆಯಾಗಿ ನಿಂತಿರುವ ಆರ್ಥಿಕ ಸ್ಥಿತಿಯನ್ನು ತಿಳಿಸುತ್ತದೆ. ಹೆಣ್ಣೊಬ್ಬಳಿಗೆ ಆದಿ ಕಾಲದಲ್ಲಿ ಆರ್ಥಿಕ ಸದೃಢತೆ ಸ್ತ್ರೀ ಕೇಂದ್ರಿತವಾಗಿದ್ದದ್ದು ಈಗ ಪುರುಷ ಪ್ರಧಾನವಾಗಿರುವುದಕ್ಕೆ ಈ ಕಥನ ಕಾವ್ಯಗಳು ಸಾಕ್ಷಿಯನ್ನು ಒದಗಿಸುತ್ತವೆ. ಇಂಥ ಸಂದರ್ಭದಲ್ಲಿ ಹೆಣ್ಣುಮಗಳೊಬ್ಬಳು ತನ್ನ ಅಸಹಾಯಕತೆಯನ್ನು ಕಥನ ಕಾವ್ಯದ ಮೂಲಕ ಕಣ್ಣೀರನ್ನು ಸುರಿಸುವುದರ ಮೂಲಕ ಪ್ರತಿಭಟನೆಯ ಸಾಕ್ಷಿಯನ್ನು ನೀಡುತ್ತಾಳೆ.

ಅಡಿ ಟಿಪ್ಪಣಿಗಳು:

೪. ವೈಯುಕ್ತಿಕ ಪ್ರತಿಭಟನೆಯ ನೆಲೆಗಳು

೧. ಸಮಗ್ರ ವಿಮರ್ಶೆ - ಡಾ|| ಗಿರಡ್ಡಿ ಗೋವಿಂದರಾಜ - ಪುಟ ೨೨೭

೨. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೧೦

೩. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೧೪

೪. ಅದೇ, ಪುಟ-೧೪

೫. ಅದೇ, ಪುಟ-೧೪

೬. ಅದೇ, ಪುಟ-೧೩

೭. ಅದೇ, ಪುಟ-೨೦

೮. ಅದೇ, ಪುಟ-೨೪

೯. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೨೫

೧೦. ಅದೇ, ಪುಟ-೨೪

೧೧. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೨೬

೧೨. ಅದೇ, ಪುಟ-೨೪

೧೩. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೨೬

೧೪. ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿನೆಲೆಗಳು - ಗಾಯತ್ರಿ ನಾವಡ, ಪುಟ-೮೨

೧೫. ಅದೇ, ಪುಟ-೮೨

೧೬. ಪರಮೇಶ್ವರಿಯ ಪದಗಳು - ಪುಟ - ೭೪

೧೭. ಅದೇ, ಪುಟ - ೮೨

೧೮. ಅದೇ, ಪುಟ - ೯೮

೧೯. ಜನಪದ ಸಾಹಿತ್ಯದಲ್ಲಿ ಸ್ತ್ರೀಮಾದರಿಗಳ ಶೋಧ - ಶಾಲಿನಿ ರಘುನಾಥ - ಪುಟ-೧೮೭

೨೦. ಮಹಿಳಾ ಜಾನಪದ -ಪ್ರಧಾನ ಸಂ. ಪ್ರೊ. ಹಿ.ಶಿ.ರಾಮಚಂದ್ರೇಗೌಡ, ಸಂಪಾದಕರು : ಡಾ||ಕೆ.ಆರ್.ಸಂಧ್ಯಾರೆಡ್ಡಿ

ಜನಪದ ಕಥನಗೀತೆಗಳು ಮತ್ತು ಸುಖಾಂತದ ಪರಿಕಲ್ಪನೆ

ಭಾರತದ ಹಿಂದೂ ಸಮುದಾಯಗಳ ಜೀವನದರ್ಶನ ಅಂತಿಮವಾಗಿ ಮೋಕ್ಷ ಸಂಪಾದಿಸುವುದೇ ಆಗಿದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ಇಲ್ಲಿನ ಜೀವನವನ್ನು ನಿಯಂತ್ರಿಸುತ್ತವೆ. ಅಂತೆಯೇ ಸಮಾಜ, ಧರ್ಮ, ಕಲೆ, ಸಾಹಿತ್ಯ, ಸಂಸ್ಕೃತಿ, ಜ್ಞಾನ ವಿಜ್ಞಾನಗಳ ಮೂಲಕವಾದರೂ ಅಂತಿಮವಾಗಿ ಮೋಕ್ಷಕ್ಕೆ ಸಲ್ಲುವುದೇ ಪರಮ ಗಂತವ್ಯವೆಂಬ ಭಾವನೆ ಇಲ್ಲಿ ಬಲವಾಗಿ ಬೇರೂರಿದೆ. ಆದ್ದರಿಂದ ಈ ದೇಶದ ಚಿಂತನೆಗಳು, ಆಲೋಚನೆಗಳು, ಭಾವನೆಗಳು, ಅಭಿಪ್ರಾಯಗಳು, ರೂಪುಗೊಳ್ಳುವುದೇ ಈ ಆಧ್ಯಾತ್ಮ ಜೀವನದ ಹಿನ್ನಲೆಯಲ್ಲಿ.

ಅಂತೆಯೇ ವೈಧಿಕ ಧರ್ಮ ಪೋಷಿಸಿಕೊಂಡು ಬಂದ ಅಲೌಕಿಕ ನೆಲೆಗಳು ಬಾರತದ ಎಲ್ಲಾ ಸಮುದಾಯಗಳ ಮೇಲೆ ಅಚ್ಚಳಿಯದ ಪ್ರಭಾವ ಬೀರಿದೆ. ಹೀಗಾಗಿ ಜನಪದರು ಕೂಡ ಈ ಲೋಕದ ಬದುಕನ್ನೂ ಕ್ಷಣಿಕವೆಂದೂ, ಈ ಜೀವ, ನೀರಮೇಲಿನ ಗುಳ್ಳೆಯೆಂದೂ ಭಾವಿಸಿರುವುದೇ ಹೆಚ್ಚು ಹಾಗಾಗಿ ಈ ಲೌಕಿಕದ ಬದುಕಿನ ವ್ಯಾಪಾರವನ್ನು ಅತ್ಯಂತ ಗೌರವದಿಂದ ತುಂಬು ಬಾಳನ್ನು ಬದುಕುವುದಕ್ಕೆ ಅಷ್ಟಾಗಿ ಮಾನ್ಯತೆ ನೀಡಲಿಲ್ಲ. ಸದಾ ದೇವರು, ಧರ್ಮ, ಭಕ್ತಿ ಪೂಜೆ, ಆರಾಧನೆಗಳಿಗೆ ಇಂಬು ಕೊಡಲಾಗಿದೆ. ಆದರೂ ಭೌತಿಕ ಸುಖಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟವರಲ್ಲ. ಹಾಗೆಯೇ ಸಾಂಸಾರಿಕ ಜೀವನವನ್ನು ತೊರೆದು ಸಗಟಾಗಿ ಸನ್ಯಾಸವನ್ನು ಸ್ವೀಕರಿಸಲಿಲ್ಲ. ಇಲ್ಲಿ ಕುಟುಂಬ ಮದುವೆ, ಮಕ್ಕಳು, ಆಸ್ತಿ, ಅಧಿಕಾರ, ಮುಂತಾದ ಲೋಕದ ಆಸೆಗಳಿಗೆ ಬರವಿಲ್ಲ. ಮಾತ್ರವಲ್ಲದೆ ವಿವಾಹದಂತಹ ಸಾಮಾಜಿಕ ಸಂಸ್ಥೆಯ ಬಗ್ಗೆ ತಮ್ಮದೇ ಆದ ಧೋರಣೆಗಳನ್ನೂ ನಿಲುವುಗಳನ್ನು ಹೊಂದಲಾಗಿದೆ. ಈ ಬಗೆಯ ಲೌಕಿಕ ಜೀವನವನ್ನು ಅನುಭವಿಸುತ್ತಲೇ ಪಾರಮಾರ್ಥಿಕ ಸುಖವನ್ನು ಪಡೆಯುವುದು. ಇಲ್ಲಿ ಮುಖ್ಯವೆನಿಸಿದೆ. ಯಥಾ ಪುರುಷ ಪ್ರಾಧ್ಯಾನ್ಯತೆ ಹೊಂದಿದ ಈ ಸಮಾಜಗಳಲ್ಲಿ ಹೆಣ್ಣು ಗಂಡಿನ ಜೀವನಗಳಿಗೆ ಬೇರೆಯದೇ ಆದ ರೀತಿ, ನೀತಿ, ರಿವಾಜುಗಳನ್ನು ಅಸಮಾನತೆಯ ನೆಲೆಯಲ್ಲಿಯೇ ರೂಪಿಸಲಾಗಿದೆ. ಈ ದೃಷ್ಟಿಯಿಂದ ಹೆಣ್ಣಿಗೆ ಹತ್ತು ಹಲವು ನಿರ್ಬಂಧಗಳನ್ನು ವಿಧಿಸಿ ಗಂಡಿನ ಅಡಿಯಾಳಾಗಿ ಅವಳು ಬಾಳಬೇಕು. ಅವಳಿಗೆ ಸ್ವತಂತ್ರವಾದ ನಿರ್ಧಾರಗಳನ್ನು ಮಾಡುವ

ಅಧಿಕಾರವಿಲ್ಲವೆಂಬ ಭಾವನೆ ಒಂದು ಮೌಲ್ಯವಾಗಿ ಸಮಾಜದಲ್ಲಿಕಟ್ಟುನಿಟ್ಟಿನ ಆಚರಣೆಯಾಗಿ ಉಳಿದು ಬಂದಿದೆ. ಈ ದಿಸೆಯಲ್ಲಿ ಭಾರತದ ನಾರಿ ತನ್ನ ಬದುಕನ್ನು ಗಂಡಸಿನ ಸುಖದಲ್ಲಿ ಕಾಣಬೇಕಾಯಿತು. ಅವಳ ಎಲ್ಲಾ ಬಗೆಯ ಬದುಕನ್ನು ಬಾಲ್ಯದಲ್ಲಿ ಹೆತ್ತವರಿಗೆ, ಯೌವ್ವನದಲ್ಲಿ ಗಂಡನಿಗೆ, ಮುಪ್ಪಿನಲ್ಲಿ ಮಕ್ಕಳು ಮೊಮ್ಮಕ್ಕಳಿಗೆ ಧಾರೆಯೆರೆಯಬೇಕಾಗಿದೆ. ಇದು ಈ ನೆಲದ ಸತ್ಯ. ಇದು ಅವಳ ಸುಖದ ಪರಿಕಲ್ಪನೆಯೂ ಆಗಿದೆ.

ಸುಖ ಎಂಬುದು ಒಂದು ಮಾನಸಿಕ ಸ್ಥಿತಿ, ಆದರೂ ಲೌಕಿಕದ ಆಸ್ತಿ ಅಧಿಕಾರ, ಹಣ ಹೆಣ್ಣು ಪ್ರತಿಷ್ಠೆ ಗೌರವಗಳೆಂಬ ವಿಚಾರಗಳಿಗೆ ಜೋತು ಬೀಳಲಾಗಿದೆ. ಇವು ನಮಗೆ ಸುಖ-ಶಾಂತಿ ನೆಮ್ಮದಿ ತಂದು ಕೊಡುವ ವಿಷಯಗಳೆಂಬ ಭಾವನೆ ಬೇರೂರಿದೆ. ಆದರೆ ಈ ಬಗೆಯ ಸುಖ ಕೇವಲ ಗಂಡಿನದೆಂದೂ ಇದಕ್ಕೆ ಪೂರಕವಾಗಿ ಮಾತ್ರವೇ ಹೆಣ್ಣು ಇರಬೇಕು ಇಲ್ಲವೇ ಇರುತ್ತಾಳೆಂದು ಬಹುಕಾಲದಿಂದ ನಂಬಿಸಲಾಗಿದೆ. ನೈಜ ಸಂಗತಿ ಎಂದರೆ ಹೆಣ್ಣು ತನ್ನ ನಿತ್ಯದ ಜಜೀವನದಲ್ಲಿ ಗಂಡಿನಷ್ಟೇ ಸಹಜ ಭಾವನೆಗಳನ್ನು, ಅಭಿಪ್ರಾಯಗಳನ್ನು, ಚಿಂತನೆಗಳನ್ನು ಹೊಂದಿರುವ ವ್ಯಕ್ತಿತ್ವವೇ ಆಗಿದೆ. ಹೀಗಿದ್ದೂ ಲೌಕಿಕವಾಗಿ ಪಡೆಯಬಹುದಾದ, ಭೌತಿಕ ಸುಖಗಳನ್ನು ಅವಳಿಗೆ ದೊರಕಗೊಡಲಿಲ್ಲ. ಇದು ಅಂದಿನಿಂದ ಇಂದಿನತನಕ ನಡೆದುಕೊಂಡು ಬಂದ ಇತಿಹಾಸವೇ ಆಗಿದೆ. ಬಹುಪಾಲು ಇಲ್ಲಿಯ ಸ್ತ್ರೀಯರು ತಮ್ಮ ಜೀವನದಲ್ಲಿ ಮಾನಸಿಕ ಹಾಗೂ ದೈಹಿಕ ಸುಖವನ್ನು ಪಡೆಯದೆ ಮತ್ತೊಬ್ಬರ ಸುಖಕ್ಕೆ ಒಪ್ಪಿಸಿಕೊಂಡದ್ದೇ ಹೆಚ್ಚೆನ್ನಬೇಕು. ಇಂತಹ ಪರಂಪರೆಯ ನಡುವೆಯೂ ಶಿಷ್ಟ ಹಾಗೂ ಜನಪದ ಸಾಹಿತ್ಯಗಳೆರಡರಲ್ಲಿಯೂ ಅಪರೂಪಕ್ಕೆಂಬಂತೆ ಸಂತೋಷ, ನೆಮ್ಮದಿ ಅಥವಾ ಸುಖವನ್ನು ಕಂಡುಕೊಳ್ಳುವ ಚಿತ್ರಣಗಳು ಅಪರೂಪಕ್ಕೆ ದೊರೆಯುತ್ತವೆ. ಅದರಲ್ಲೂ ಜನಪದ ಸಾಹಿತ್ಯದ ಕಥನಕಾವ್ಯದಲ್ಲಿ ಸುಖಾಂತಗೊಳ್ಳುವ ಸಂದರ್ಭಗಳಿಗಿಂತ ದುಃಖಾಂತ್ಯಗೊಳ್ಳುವ ಗೀತೆಗಳೇ ನಮಗೆ ಹೆಚ್ಚಾಗಿ ದೊರೆಯುತ್ತವೆ. ಸುಖಾಂತಗೊಳ್ಳುವ ಕಥನ ಗೀತೆಗಳು ವಿರಳಾತಿವಿರಳ ಹಾಗೆ ಸುಖಾಂತಗೊಳ್ಳುವ ಕಥನಗೀತೆಗಳ ಸಂದರ್ಭದಲ್ಲಿಯೂ ಅಲ್ಲಿಯ ಪಾತ್ರಗಳು ಭಯಾನಕ ಕಷ್ಟಪರಂಪರೆಯನ್ನು ಅನುಭವಿಸಿ ಅಂದರೆ ವ್ಯವಸ್ಥೆ ವಿಧಿಸಿದ ಅಗ್ನಿದಿವ್ಯಗಳಲ್ಲಿ ಗೆಲ್ಲಬೇಕು. ನಂತರವಷ್ಟೆ ಅವಳು ತನ್ನ ಜೀವನದಲ್ಲಿ ಸಾವಿನಿಂದ ಪಾರಾಗಿ ಸುಖ ಹೊಂದುವುದಾಗಿದೆ.

ಈ ನೆಲಯಲ್ಲಿ ನಾವು ಉತ್ತರದೇವಿ, ಹೊನ್ನಮ್ಮ, ಗುಣಸಾಗರಿ, ಮಲ್ಲಿಗೆರಾಯ ಗೀತೆಗಳನ್ನು ಮುಖ್ಯವಾಗಿ ಗಮನಿಸಬಹುದು. ಈಗಾಗಲೇ ಪ್ರಸ್ತಾಪಿಸಿದಂತೆ ಸುಖದ ಪರಿಕಲ್ಪನೆ ಭಾವನಾತ್ಮಕ ನೆಲೆಯದು ಎಂಬುದು ಗಮನಾರ್ಹ ಸಂಗತಿ.

ಆದರೆ ಇದು ಸುಖ, ಇದು ದುಃಖ, ಇದು ರುಚಿ, ಇದು ಅರುಚಿ, ಇದು ಶ್ರೇಷ್ಠ ಇದು ಕನಿಷ್ಠ ಎಂಬ ಭಾವನೆಗಳನ್ನು ಸಮಾಜದ ಒಳಗೆ ರೂಪಿಸುವಂತಹ ಒಂದು ಪ್ರಬಲವಾದ ವರ್ಗ ಭಾರತದಂತಹ ದೇಶದಲ್ಲಿ ಬಹುಕಾಲದಿಂದ ನೆಲೆಸಿದೆ. ಈ ಬಗೆಯ ವಿಚಾರಗಳು ಇಲ್ಲಿ ನೆಲೆ ನಿಂತಿರುವುದೇ ಪುರುಷ ನಿರ್ಮಿತ ಸಮಾಜದಲ್ಲಿ. ನಮ್ಮ ಉಡುಗೆ-ತೊಡುಗೆ, ಆಹಾರ ಪದ್ಧತಿ, ಒಳಿತು, ಕೆಡಕುಗಳೆಂಬ ವಿಷಯಗಳ ಪರಿಕಲ್ಪನೆಯನ್ನು ರೂಪಿಸುತ್ತಿರುವುದು ಕೂಡ ಅನ್ಯರೆಂಬ ನಿಜ ನಮಗೆ ತಿಳಿಯುವುದಿಲ್ಲ. ಆದ್ದರಿಂದ ಅನೇಕ ಕಥನ ಗೀತೆಗಳಲ್ಲಿ ಯಾರದೋ ಕನಸಿನಲ್ಲಿ ಬಂದು ಕೆರೆ ಬಲಿ ಕೇಳುವುದು, ಇಲ್ಲವೇ ಆ ಊರಿನ ಜೋಯಿಸರು ತಮ್ಮ ಪಂಚಾಂಗಗಳ ಮೂಲಕ ಬಲಿಯ ವಿಚಾರವನ್ನು ನಿರ್ಧರಿಸುತ್ತಾರೆ. ಕನಸುಗಳು, ಪಂಚಾಂಗದಂತಹ ಅವೈಜ್ಞಾನಿಕ ಫಲ, ಜ್ಯೋತಿಷ್ಯಗಳು ಅವೈಜ್ಞಾನಿಕವಾದವು ಎಂಬ ಸತ್ಯವನ್ನು ಜನ ತಿಳಿಯಗೊಡದಂತೆ ಅವರನ್ನು ಅಜ್ಞಾನದಲ್ಲಿಡಲಾಗಿದೆ. ಇಂತಹ ಸ್ಥಿತಿಯೊಂದನ್ನು ಶತಮಾನಗಳಿಂದ ವ್ಯವಸ್ಥಿತವಾಗಿ ಕಾಪಾಡಿಕೊಂಡು ಬಂದಿರುವುದು ಯಾರ ಹಿತ ಕಾಪಾಡುವುದಕ್ಕೆ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಊರ ಗೌಡನಂತಹವನು ಸಹ ಈ ವಿಷಯದಲ್ಲಿ ಪುರೋಹಿತಶಾಹಿಗಳ ಕೈಗೊಂಬೆಯಂತೆ ವರ್ತಿಸುವುದನ್ನು ಭಾಗೀರತಿಯಂಥ ಕಥನಗಳಲ್ಲಿ ಗುರುತಿಸಬಹುದು. ಆದರೆ ಇಲ್ಲಿ ಹುಸಿ ಮೌಲ್ಯವನ್ನು ಸಾರ್ವತ್ರಿಕ ಸತ್ಯದಂತೆ ಬಿಂಬಿಸಲಾಗಿದೆ. ಅದೇನೆಂದರೆ ವ್ಯಕ್ತಿ ಜೀವನದ ಸುಖ-ಸಂತೋಷಗಳಿಗಿಂತ ಸಮೂಹ ಜೀವನದ ಒಳಿತು, ಅದರ ಉಪಯೋಗವೇ ಪ್ರಧಾನ ಪಾತ್ರವಹಿಸುತ್ತದೆಂಬ ಹುಸಿ ಕಲ್ಪನೆಯೇ ಆಗಿದೆ. ಇದನ್ನು ತ್ಯಾಗ-ಬಲಿದಾನವೆಂಬ ದೊಡ್ಡ ಮಾತುಗಳಲ್ಲಿ ಸಂಬೋಧಿಸಿ ಸಾಮಾಜಿಕ ಮೌಲ್ಯವಾಗಿಸಿದೆ. ಇಂಥ ಸಮೂಹದ ಸುಖವನ್ನು ನಿಷ್ಪಾಪಿ ಅಸಹಾಯಕ ಹೆಣ್ಣುಗಳನ್ನು ಬಲಿ ತೆಗೆದುಕೊಂಡು ಸಮಾಜ ಸಮೂಹದ ಸುಖ ಮುಖ್ಯವೆನ್ನುವುದು ಜೀವ ವಿರೋದಿ ನಿಲುವೇ ಆಗಿದೆ. ಅದು ಜೀವಪರವೆಂದಾಗಲಿ, ಮಾನವೀಯವೆಂದಾಗಲಿ ಹೇಳಲು ಸಾಧ್ಯವಿಲ್ಲ. ಹೀಗೆ ಅನ್ಯರ ಮಕ್ಕಳನ್ನು ಅಸಹಾಯಕ ಸ್ಥಿತಿಯಲ್ಲಿರುವಾಗ ಮೌಢ್ಯ ನಂಬಿಕೆಗಳನ್ನು ತಮ್ಮ ಸ್ವಾರ್ಥ

ಗುರಾಣಿಯಾಗಿಸಿಕೊಂಡು ಸಮೂಹದ ಹಿತಕ್ಕೆ ಊರಿನ ಹಿತಕ್ಕೆ ಸಮುದಾಯಗಳ ಹಿತಕ್ಕೆ ಬಲಿ ಅನಿವಾರ್ಯವೆಂಬ ವಾದಗಳು ರೋಗಗ್ರಸ್ಥ ಮನಸ್ಸುಗಳೇ ಸರಿ. ಯಾಕೆಂದರೆ ಬಲಿಕೊಡುವ ಕಲ್ಲಿನ ಕೇರಿ ಮಲ್ಲನ ಗೌಡನಾಗಲಿ ಹೊತ್ತಗಿ ಮೂಲಕ ಜ್ಯೋತಿಷ್ಯ ಹೇಳುವವರಾಗಲಿ ತಮ್ಮ ಮಕ್ಕಳನ್ನು ಬಲಿದಾನ ಮಾಡಿ ಊರ ಹಿತ ಬಯಸುವವರಲ್ಲ. ಹಾಗೇ ನೋಡಿದರೆ ತಮ್ಮ ಮಕ್ಕಳನ್ನು ಬಲಿ ನೀಡುವುದಾದರೂ ಅದು ಖಂಡನೀಯವೇ ಸರಿ, ಆದರೆ ಇಲ್ಲಿ ಹಾಗಾಗುವುದಿಲ್ಲ. ಆದ್ದರಿಂದ ಈ ಬಗೆಯ ಸಮೂಹದ ಸುಖಕ್ಕೆ ಮಾನವ ಬಲಿ ಅಥವಾ ಯಾವುದೇ ಜೀವ ಬಲಿ ಅಕ್ಷಮ್ಯವೆಂದೇ ಹೇಳಬೇಕು.

ಹೀಗಾಗಿ ಸುಖದ ಪರಿಕಲ್ಪನೆ ನಮ್ಮ ಸಾಮಾಜಿಕ, ಧಾರ್ಮಿಕ ರಾಜೀಯ ಸಂದರ್ಭಗಳಲ್ಲಿ ಬದಲಾಗಬೇಕಿದೆ. ಊರಿನ ಆಗು-ಹೊಗುಗಳನ್ನು ನೋಡಿಕೊಳ್ಳುತ್ತೇವೆಂಬ ಗೌಡಣ್ಣಗಳ, ಜ್ಯೋತಿಷಿಗಳ ಗುತ್ತಿಗೆಯ ಮನೋಧರ್ಮ ಬದಲಾಗಬೇಕಿದೆ. ಇಂಥ ವಿಷಯ ಸಂದರ್ಭಗಳನ್ನು ಮೀರಿ ನಿಲ್ಲುವಂತಹ ಬೆರಳೆಣಿಕೆಯ ಕಥನಗೀತೆಗಳನ್ನು ಪರಿಶೀಲಿಸಬಹುದು.

ಡಾ॥ ಜೀ.ಶಂ. ಪರಮಶಿವಯ್ಯರವರು ಸಂಗ್ರಹಿಸಿರುವ ಖಂಡಕಾವ್ಯಗಳಲ್ಲಿ 'ಉತ್ತರದೇವಿ' ದುಃಖದ ಕಾವ್ಯವಾಗಿದ್ದು, ಅದೇ ಕಾವ್ಯ ಸುಖಾಂತವಾಗುವ ಮತ್ತೊಂದು ಕೃತಿ ಗುಬ್ಬಿ ತಾಲ್ಲೂಕಿನಲ್ಲಿ ಇದೇ ಸಂಗ್ರಹಕಾರರಿಗೆ ದೊರೆತಿದ್ದು, ಈ ಸಂಗ್ರಹದಲ್ಲಿ ಉತ್ತರದೇವಿ ಉತ್ತರಮಳೆಯಾಗಿ ಹೋಗುವುದಿಲ್ಲ, ಮನೆಬಿಟ್ಟು ಹೋಗುವುದಿಲ್ಲ, ಮಗನ ಒತ್ತಾಯಕ್ಕೆ ಮಣಿದ ತಾಯಿ, ಸೊಸೆಯ ಪರೀಕ್ಷೆಗೆ ಬರುತ್ತಾಳೆ. ಉತ್ತರದೇವಿಯ ಶೀಲದ ಬಗ್ಗೆ ಸಂಶಯಪಟ್ಟಿದ್ದರಿಂದ ಉತ್ತರದೇವಿಗೆ ಹಲವು ಪರೀಕ್ಷಗಳನ್ನು ಒಡ್ಡುತ್ತಾಳೆ. ಉತ್ತರದೇವಿ ಪರಿಶುದ್ಧಳಾದ್ದರಿಂದ ಜಯಶೀಲಳಾಗುತ್ತಾಳೆ.

ಹೆಣ್ಣು ಪತಿವ್ರತೆಯಾಗಿದ್ದರೆ ಸಾಲದು, ಕೆಲವೊಮ್ಮೆ ಅವಳು ತನ್ನ ಪಾತಿವ್ರತ್ಯವನ್ನು ಪರೀಕ್ಷೆಗಳ ಮೂಲಕ ಗೆದ್ದು ತೋರಿಸಬೇಕಾಗುತ್ತಿತ್ತು ಶೀಲಗೆಟ್ಟ ಹೆಣ್ಣಿಗೆ ಸಮಾಜದಲ್ಲಿ ಸ್ಥಾನವೇ ಇರಲಿಲ್ಲ.[೧]

ಇಂಥದೊಂದು ಶೀಲದ ಶಂಕೆಗೆ ಗುರಿಯಾದ ಉತ್ತರದೇವಿ ತನ್ನ ಪಾತಿವ್ರತ್ಯವನ್ನು ಸಾಬೀತುಪಡಿಸಲು ಪರೀಕ್ಷೆಗೆ ಒಳಗಾದಳು. ಹುತ್ತದ ಒಳಗೆ ಕೈಹಾಕಬೇಕು. ಆಕೆ ಪತಿವ್ರತೆಯಾಗಿದ್ದರೆ ಆಕೆಗೆ ಅಲ್ಲಿ ಏನೂ ತೊಂದರೆಯಾಗದು. ಇಲ್ಲದಿದ್ದಲ್ಲಿ ಹುತ್ತದಲ್ಲಿದ್ದ ಹಾವು ಕಚ್ಚುತ್ತದೆ ಆಗ ಉತ್ತರದೇವಿಯ ಮೇಲಿದ್ದ ಅಪವಾದ ನಿಜವಾಗುತ್ತದೆಂಬ ನಂಬಿಕೆ, ಅದರಂತೆ ಉತ್ತರೆ

"ಒಂದು ಕಣ್ಣ ನೀರ ಸುರಸುತ ಉತ್ತರದೇವಿ
ಒಂದು ಕಣ್ಣ ನೀರ ಒರಸುತ - ಆಗಲೆ
ಹುತ್ತದಾಗಳ ಸರುಪನ ತರುದಾಳೆ - ಉತ್ತರದೇವಿ
ಇತ್ತ ನೋಡತ್ಯಾಮ್ಮ ಕೆಂಡಸಂಪಿಗೆ [7]

ಇಷ್ಟಕ್ಕೆ ಅತ್ಯಮ್ಮ ಒಪ್ಪಿಕೊಳ್ಳಲಿಲ್ಲ, ಒಂದರಲಿ ಗೆದ್ದರೇನು, ಇನ್ನೊಂದರಲ್ಲಿ ಗೆಲು ಬಾ ಎಂದು ಸವಾಲ್ಹಾಕಿ ನಿಲ್ಲುತ್ತಾಳೆ.

"ಇದೊಂದು ಗೆಲವ ಗೆದ್ದಲ್ಲ ಉತ್ತರದೇವಿ
ಇನ್ನೊಂದು ಗೆಲುವ ಗೆಲಬಾರೆ ಸೊಸಿಬಾಲೆ
ಒಲಿಯಾಗಳ ಕೆಂಡ ಮುಡಿಬಾರೆ [8]

ಉತ್ತರೆ ಈ ಪರೀಕ್ಷೆಗೂ ಸಿದ್ಧಳಾಗಿ

" ಶಿವ ಶಿವ ಅಂದಲು ಶಿವಗ್ಯಾನ ಮಾಡ್ಯಾಳು
ಒಲೆಯಾಗಳ ಕೆಂಡ ತೆಗೆದಳು - ಉತ್ತರದೇವಿ
ಇತ್ತ ನೋಡತ್ಯಮ್ಮ ಮಲ್ಲಿಗ್ಹೊವು [9]

ಹೀಗೆ ಉತ್ತರದೇವಿ ಅತ್ತೆಯ ಮನಸ್ಸಿನಲ್ಲಿದ್ದ ಅನುಮಾನವನ್ನು ದೂರ ಮಾಡುತ್ತಾಳೆ. ವಿಚಿತ್ರವೆಂದರೆ ಅತ್ತೆ ಇಂಥ ಅಮಾನುಷ ಪರೀಕ್ಷೆಗಳನ್ನು ನಂಬುತ್ತಾಳೆ. ಆದರೆ ತನ್ನ ಮನೆಯ ಉದ್ಧಾರದ ಸೂತ್ರವಿಡಿದು ಮಗನ ಜೀವನದಲ್ಲಿ ಪ್ರವೇಶ ಮಾಡಿದ ಉತ್ತರೆಯ ಮಾತನ್ನು ನಂಬುವುದಿಲ್ಲ. ಇಂಥಾ

ಹಿಂಸಾ ಜಗತ್ತಿನೊಳಗೆ ಬದುಕಬೇಕೆಂಬ ಹಠ ಹಿಡಿದು ಗೆಲ್ಲುವುದಿದೆಯಲ್ಲ ಅದು ಜೀವನ ಪ್ರೀತಿ. ಅಂಥ ಜೀವ -ಜೀವನ ಪ್ರೀತಿಯನ್ನು ಉಳಿಸಿಕೊಳ್ಳುತ್ತಾಳೆ (★ ಪಾಠಾಂತರ ಟಿಪ್ಪಣಿ) ಉತ್ತರದೇವಿ.

ಅತ್ಯಂತ ವೈಯಕ್ತಿಕವಾದ ಆಸೆ ಆಕಾಂಕ್ಷೆಗಳಿಗೂ ಸಮಾಜದ ಅಪೇಕ್ಷೆಗಳೇ ಕಾರಣವಾಗುತ್ತವೆ." ಇಂಥ ಅಪೇಕ್ಷೆಗೆ ಒಳಗಾಗಿ ಸಮಾಜದ ಕಣ್ಣಲ್ಲಿ ಉಪೇಕ್ಷೆಗೆ ಒಳಗಾದ ಕಾರಣವಾಗುತ್ತವೆ. ಹೊನ್ನಮ್ಮ ಕಥಾನಕ ಇನ್ನೊಂದು ಸಾಮಾಜಿಕ ಅವೈಜ್ಞಾನಿಕ ನಂಬುಗೆಯ ಪರಮಾವಧಿ. ಮಕ್ಕಳಿಲ್ಲವೆಂಬ ಏಕೈಕ ಕಾರಣಕ್ಕಾಗಿ ಸಮಾಜದ ನಿಂದನೆಗೆ ಅಪಮಾನಕ್ಕೆ ಅಗೌರವಗಳಿಗೆ ಈಡಾಗುತ್ತಾಳೆ. ಈ ಕಥಾನಕದ ವಿಶಿಷ್ಟತೆ ಏನೆಂದರೆ ತನ್ನ ಒಡಹುಟ್ಟಿದ ಅಕ್ಕತಂಗಿಯರಿಂದಲೇ ಅವಮಾನಕ್ಕೆ ಈಡಾಗುವುದು. ಮುಂದುವರೆದು ಮಾನವನ ವಿಕೃತಿಯ ಧ್ಯೋತಕವೆಂಬಂತೆ ನಿಸರ್ಗಕ್ಕೆ ನಿಸರ್ಗವೇ ಬಂಜೆ ಹೊನ್ನಮ್ಮನಿಗೆ ವೈರಿಯಂತೆ ಚಿತ್ರಣಗೊಂಡಿರುವುದು.

ಗೋವುಗಳು	ಬಂಜೆ ಕಟ್ಟಿದ್ದ ಬಾವಿ। ನಾವು ನೀರ ಕುಡಿದರೆ। ನಾವು ಬಂಜೆರಾಗುತೀವೆ। ಮಕ್ಕಳು ಬಂಜೇರಾಗುತ್ತಾರೆ ೬
ಹಕ್ಕಿಪಕ್ಷಿಗಳು	ನಾವು ಹಣ್ಣತಿಂದರೆ। ನಾವು ನಮ್ಮ ಮಕ್ಕಳು ಬಂಜೇರಾಗುತ್ತೇವೆ ಎನ್ನುವುದು
ಒಡಹುಟ್ಟಿದವರು	
	ನಮ್ಮ ಬಂಜ್ಹೋನ್ನಿ ಬರತಾಳೆ। ಮಕ್ಕಳ ಮಡಗಲಬೇಕು ಬಂಜೆ ತಂದ ತಿಂಡಿ ಮಕ್ಕಳು ತಿಂದರ। ನಾವು ಬಂಜೇರು ಆಗುತೀವಿ। ನಮ್ಮ ಮಕ್ಕಳು ಬಂಜೇರಾಗುತ್ತಾರೆ ೭

ಎಂದುಕೊಂಡು ಮಕ್ಕಳನ್ನು ಅಡಗಿಸಿಟ್ಟು ಕೈಕಾಲು ಮುರಿದು ಕೊರಕಲಿಗೆ ಎಸೆಯುತ್ತಾರೆ.

ಹೀಗೆ ನಿಸರ್ಗ ಜೀವ ವಿರೋಧಿಯಾಗುವುದು ಈ ಕಥಾನಕದ ಸೃಷ್ಟಿಯ ಹಿಂದಿರುವ ಮನೋಧರ್ಮವನ್ನು ತುಂಬಾ ಅದ್ಭುತವಾಗಿ ಕಟ್ಟಿಕೊಡುತ್ತದೆ. ಈ ಬಗೆಯ ಕಷ್ಟದಿಂದ ಅವಳು ಶಿವಪಾರ್ವತಿಯರ ಕೃಪೆಯಿಂದ ಪಾರಾಗುತ್ತಾಳೆ. ಆದಾಗ್ಯೂ ತಾನು ವರವಾಗಿ ನೀಡುವ ಮಗುವನ್ನು ನನಗೆ ಮುಂದೆ ಕಡಿದು ಅಡುಗೆ ಮಾಡಿ ಬಡಿಸಬೇಕೆಂಬ ಷರತ್ತನ್ನು ವಿಧಿಸುತ್ತಾರೆ. ಈ ಘಟನೆ ಭಕ್ತ

ಸಿರಿಯಾಳವೆಂಬ ಶಿಷ್ಟ ಪುರಾಣದ ಕಥೆಯ ನೆನಪು ತರಿಸುತ್ತದೆ. ಬಂಜೆ ಹೊನ್ನಮ್ಮ ಬಂಜೆತನ ಹೋದರಷ್ಟೆ ಸಾಕೆಂಬ ಭಾವನೆಯಲ್ಲಿರುತ್ತಾಳೆ. ಏಕೆಂದರೆ ನಮ್ಮ ಸಾಮಾಜಿಕ ಸಂದರ್ಭ ಹಾಗಿದೆ. 'ಇಂದೇನೇ ಹುಟ್ಟಲಿ ಇಂದೇನೆ ಸಾಯಲಿ' ಬಂಜೆಂಬ ಶಬುದ ಕಳೆಯಲಿ' ಎಂಬ ಮನೋಧರ್ಮ ಜನಪದರಲ್ಲಿ ಗಟ್ಟಿಯಾಗಿ ಉಳಿದುಬಿಟ್ಟಿದೆ. ಅಂತೆಯೇ ತನ್ನ ಬಂಜೆತನವನ್ನು ದೈವಸಾಕ್ಷಾತ್ಕಾರದಿಂದ ಕಳೆದುಕೊಂಡು ಸಮಾಜದ ಕಣ್ಣಲ್ಲಿ ಎಲ್ಲರಂತೆ ಬದುಕುವ ಹಕ್ಕನ್ನು ಸ್ಥಾಪಿಸಿಕೊಳ್ಳುವ ಹೊನ್ನಮ್ಮನ ಹೋರಾಟ ಮೆಚ್ಚುವಂತಹದ್ದು. ಹೀಗೆ ಈ ಕಥಾನಕದ ಹೊನ್ನಮ್ಮ ಒಂದು ಬಗೆಯ ಸುಖಾಂತದಿಂದ ಕೊನೆಗೊಳ್ಳುವ ಪಾತ್ರ. ಆದರೆ ಶುದ್ಧ ಮೂರ್ಖರಂತೆ ವ್ಯವಸ್ಥೆಯ ಕನ್ನಡಿಯಂತೆ ಕಂಡುಬರುವ ಹೊನ್ನಮ್ಮನ ಸಹೋದರಿಯರನ್ನು ಗಮನಿಸಲೇಬೇಕು. ಇವರ ಮನೋಭಾವವನ್ನು ರೂಪಿಸಿರುವವರ ಕಡೆ ನಾವು ವಿಚಾರಿಸಬೇಕಿದೆ. ವ್ಯವಸ್ಥೆಯನ್ನು ನಿಯಂತ್ರಿಸುವ ಶಕ್ತಿಗಳು ಯಾವಾಗಲೂ ಇರುತ್ತಾರೆ. ಅಂತಹ ತಡೆಗಳನ್ನು, ನಿಯಂತ್ರಣಗಳನ್ನು ಮೀರಿ ಬೆಳೆಯುವುದು ಬದುಕಿ ತೋರಿಸುವುದು ನಿಜವಾದ ಬದುಕು. ಅಂತೆಯೇ ಹೊನ್ನಮ್ಮ ಬದುಕಿನಲ್ಲಿ ಸೋತು ಗೆಲ್ಲುತ್ತಾಳೆ.

ಈ ಪ್ರಬಂಧದ ವ್ಯಾಪ್ತಿಗೆ ತೆಗೆದುಕೊಂಡ ಇನ್ನೆರಡು ಸುಖಾಂತ ಕಥನಗೀತೆಗಳೆಂದರೆ 'ಗುಣಸಾಗರಿ' ಮತ್ತು 'ಮಲ್ಲಿಗೆ ರಾಯ'.

'ಗುಣಸಾಗರಿ' ಅತ್ಯಂತ ದೀರ್ಘ ಕಥನಗೀತೆ. ತನ್ನ ಗಂಡ ಚೆಂಪಾಲುಸೆಟ್ಟಿ ವ್ಯಾಪಾರಕ್ಕೆಂದು ಹೋದವನು ತನ್ನ ಪ್ರೀತಿಯ ಮಡದಿಯ ನೆನಪಾಗಿ ರಾತ್ರೋರಾತ್ರಿ ಗುಟ್ಟಾಗಿ ಬಂದು ಸೇರಿ ಹೋದವನು. ಇದೇ ಕಾರಣವಾಗಿ ಬಸುರಿಯಾದ ಗುಣಸಾಗರಿಗೆ ನಾದಿನಿಯರು, ಭಾವಂದಿರು, ಇನ್ನಿಲ್ಲದ ಕಿರುಕುಳ ನೀಡುತ್ತಾರೆ. ಅವಳ ಗಂಡ ನೆನಪಿಗಾಗಿ ಕೊಟ್ಟ ಉಂಗುರವನ್ನು ಅಪಹರಿಸಿದ ನಾದಿನಿಯರು ಉದ್ದೇಶಪೂರ್ವಕವಾಗಿ ಕಳ್ಳ ಬಸುರಿನವಳು ಎಂದು ಸಾರ್ವಜನಿಕವಾಗಿ ಅವಮಾನಿಸುತ್ತಾರೆ. ತನ್ನ ನಿಜಸ್ಥಿತಿಯನ್ನು ಮನವರಿಗೆಕ ಮಾಡಿಕೊಡುವ ಪ್ರಯತ್ನದಲ್ಲಿ ಗುಣಸಾಗರಿ ಸೋತುಹೋಗುತ್ತಾಳೆ. ಈ ಕಥೆ ಪ್ರಸಿದ್ಧ ಕಾಳಿದಾಸ ನಿರ್ಮಿತ 'ಅಭಿಜ್ಞಾನ ಶಾಕುಂತಲ'ವನ್ನು ನೆನಪಿಸುತ್ತದೆ. ಅಂತೆಯೇ ಇಲ್ಲಿಯೂ ಕೂಡ ಗುಣಸಾಗರಿ ಸಮಾಜಕ್ಕೆ ಹೆದರಿ ಆತ್ಮಹತ್ಯೆ

ಮಾಡಿಕೊಳ್ಳುವಂತಹ ಹೇಡಿಯಲ್ಲ. ಬದಲಾಗಿ ತನ್ನ ಗರ್ಭಕ್ಕೆ ಕಾರಣರಾದ ತನ್ನ ಪತಿ ಬರುವವರೆಗೂ ಕಾಯುತ್ತಾಳೆ. ಈ ಕಾಯುವಿಕೆಯಲ್ಲಿ ಹತ್ತು ಹಲವು ತೊಂದರೆಗಳನ್ನು ಎದುರಿಸುವ ಛಲಗಾತಿ ಈ ಗುಣಸಾಗರಿ.

ಜಾರೆ ಎಂಬ ಅಪವಾದವನ್ನು ಹೊತ್ತುಕೊಂಡು ತುಂಬು ಗರ್ಭಿಣಿಯಾದರೂ ಮಡಿವಾಳಪ್ಪನ ಮನೆಯಲ್ಲಿ ಆಶ್ರಯಪಡೆದು ಮಗವಿಗೆ ಜನ್ಮ ನೀಡುತ್ತಾಳೆ. ಹೀಗೆ ಪರಕೀಯನೊಬ್ಬನ ಮನೆಯಲ್ಲಿ ತನ್ನ ಗಂಡ ಬರುವವರೆಗೂ ಕಾಯ್ದ ತನ್ನ ಸತ್ಯವಂತಿಕೆಯನ್ನು ನಿರೂಪಿಸುತ್ತಾಳೆ, ಮಾತ್ರವಲ್ಲ ಶಾಕುಂತಲ ಮತ್ತು ದುಷ್ಯಂತರಂತೆಯೇ ಈ ಕಥೆಯ ಕೊನೆಗೆ ಗುಣಸಾಗರಿ ಮತ್ತು ಚೆಂಪಾಲುಸೆಟ್ಟಿ ಸಂತೋಷವಾಗಿ ಬದುಕುತ್ತಾರೆ.

ಗುಣಸಾಗರಿಯಂಥ ಸಮಾನ ಆಶಯವುಳ್ಳ ಇನ್ನೊಂದು ಕಥನ ಗೀತೆ 'ಮಲ್ಲಿಗೆ ರಾಯ' ಮಲ್ಲಿಗೆರಾಯನ ಮಡದಿ ದುಂಡಮ್ಮ ತನ್ನ ಗಂಡನಿಂದಲೇ ಶೀಲ ಶಂಕೆಗೆ ತುತ್ತಾಗುತ್ತಾಳೆ. ಮನೆಯಲ್ಲಿ ಯಾರೂ ಇಲ್ಲದಿರುವಾಗ ಬಳೆಗಾರಶೆಟ್ಟಿಯ ಸಲುಗೆಯ ವರ್ತನೆ ಇಡೀ ಊರಿನವರಿಗೆ ಅನುಮಾನಕ್ಕೆ ಗ್ರಾಸ ಒದಗಿಸುತ್ತದೆ. ಅಂತೆಯೇ ಬಳೆಗಾರಶೆಟ್ಟಿಯಿಂದ ಬಸುರಾದ ದುಂಡಮ್ಮ ನೀತಿಗೆಟ್ಟವಳೆಂದು ಎಲ್ಲರಿಂದಲೂ ತಿರಸ್ಕಾರಕ್ಕೆ ಒಳಗಾಗುತ್ತಾಳೆ.

"ನಿನ ದುಂಡಿ ಅವಳಮ್ಮ ತಾಯಿ
ಬಳಗಾರನ್ಗೆ ಬಸುರಂತೆ" [೮]

ಹೀಗೆ ತನ್ನ ಹೆಂಡತಿಯ ಬಗ್ಗೆ ಅಪಚಾರದ ಮಾತುಗಳನ್ನು ಕೇಳಿ ಮನದಲ್ಲೇ ಕುದಿದು 'ನೊರೆನೊರ್ನೆ ಹಲ್ಲುಕಡ್ದು' ಉಪಾಯವಾಗಿ ಹೆಂಡತಿಯನ್ನು ಅವಳ ತವರಿಗೆ ಕರೆದುಕೊಂಡು ಹೋಗುವ ನೆಪ ಮಾಡಿ ಮಾರ್ಗಮಧ್ಯದಲ್ಲೇ ಅವಳನ್ನು ಊಟಕ್ಕೆಂದು ಕೂರಿಸಿ, ಹೊಟ್ಟೆ ಸೀಳಿ ಮಗುವನ್ನು ತೆಗೆದು ಅಲ್ಲೆ ಬಿಟ್ಟು ಬರುತ್ತಾನೆ. ಮುಂದೆ ಇದಕ್ಕೆಲ್ಲ ಬಳೆಗಾರ ತಾನೇ ಕಾರಣನೆಂದು, ಯಾವ ತಪ್ಪನ್ನೂ ಮಾಡದೆ ಇಂಥ ಶಿಕ್ಷೆಗೆ ದುಂಡಮ್ಮ ಗುರಿಯಾದಳೆಂದು ದುಃಖಿಸಿ, ದುಂಡಮ್ಮನ ಅತ್ತೆ ಹಾಕಿದ ಶಾಪವನ್ನು

ತಡೆಯಲಾರದೆ ದುಂಡಮ್ಮನನ್ನು 'ಕಡಿದಾಕಿರೋ ಜಾಗವ ತಡಿಕಂಡು ಹೋದನು' ಗುಳಗುಳನೆ ಅತ್ತನು, ಶೋಕಿಸಿದನು. ಇವನ ಶೋಕವನ್ನು ಕಿಚ್ಚನ್ನೂ ಕೇಳಲಾರದೆ ಆಕಾಶಮಾರ್ಗದಲ್ಲಿ ಹೋಗುತ್ತಿದ್ದ ಶಿವಪಾರ್ವತಿಯರು ಬಳೆಗಾರಿಯ ಶೋಕಕ್ಕೆ ಕಾರಣ ತಿಳಿದುಕೊಂಡು ದುಂಡಮ್ಮನನ್ನು ಬದುಕಿಸಿ, ಅರಮನೆಯೊಂದನ್ನು ನಿರ್ಮಿಸಿ ಮತ್ತೆ ಬಾಳ್ವೆಗೆ ದಾರಿ ತೋರುತ್ತಾರೆ. ಬಹುಕಾಲ ಒಂಟಿಯಾಗಿ ಮಗನೊಂದಿಗೆ ಜೀವಿಸುತ್ತಿರುವಾಗ

ನನ್ನೆಡ್ತಿಯ ಕಡುದಾರೆ
ಇಂದಿಗನ್ನೆರಡು ವರ್ಷ
ಕಡ್ದ ಜಾಗ ನೋಡಬೇಕು [೯]

ಎಂದುಕೊಂಡು ಮಲ್ಲಿಗೆರಾಯ ಕೆರೆ ಏರಿಮ್ಯಾಲೆ ಬರುತ್ತಾನೆ. ಅಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಬದಲಾವಣೆಗಳಾಗಿವೆ. ಅದನ್ನು ಕಂಡು ಆಶ್ಚರ್ಯಚಕಿತನಾಗಿ

ಇಲ್ಲೆಲ್ಲ ಮಾಳುವಲ್ಲೊ
ಮಾಗಡೇಯು ಆಗದಲ್ಲೊ
ನನ್ನ ಮಂಟಪದಂಗೆ ಆಗದಲ್ಲೊ
ಮಕ್ಕಳಾಡೋ ವಟುವದೆ
ಬಟುನುಗ್ಗೆ ಮರವದೆ
ನಾನಲ್ಲಿಗೆ ಹೋಗಬೇಕು
ನೋಡಿ ತಿಳ್ದು ಬರಬೇಕು [೧೦]

ಎಂದುಕೊಂಡು ಅರಮನೆಯ ತನಕ ಹೋದವನಿಗೆ ಮತ್ತೊಂದು ಆಶ್ಚರ್ಯ ಕಾದಿರುತ್ತದೆ. ಮಗುವನ್ನು ತೂಗುತ್ತಾ ದುಂಡಮ್ಮ ತನ್ನ ಹಿಂದಿನ ಎಲ್ಲಾ ಕಥೆಯನ್ನು ಮಗುವಿಗೆ ಜೋಗುಳದ ರೀತಿಯಲ್ಲಿ ಹೇಳುತ್ತಾಳೆ:

ನಾ ಮಾಡಿದ ನ್ಯಾಯ ದುರಿದುರ್‍ಯೋ
ನೀ ಕೇಳಪ್ಪ ಕಂದಯ್ಯ ದುರಿದುರ್‍ಯೋ
ಮದುವ್ಯಾಗಿ ಎಂಟು ಜನ ದುರಿದುರ್‍ಯೋ
ಚೆನ್ನಾಗಿ ಮೂರು ಜನ ದುರಿದುರ್‍ಯೋ
ಮಲ್ಲಿಗುರಾಯನ್ನಾಕೆ ದುರಿದುರ್‍ಯೋ
ದಂಡಿಗುತ್ತಾರ ಬಂತು ದುರಿದುರ್‍ಯೋ [೧೧]

ದುಂಡಮ್ಮ ಮಗನಿಗೆ ಹೇಳುತ್ತಿದ್ದ ಕಥೆಯನ್ನು ಆಲಿಸಿ, ತಾನು ಮಾಡಿದ ಅನ್ಯಾಯಕ್ಕೆ ಪಾಪಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟುಕೊಂಡು, 'ನೀ ಯಾರಯ್ಯ' ಎಂದು ತಿರಸ್ಕಾರದಿಂದ ನುಡಿದ ದುಂಡಮ್ಮನಿಗೆ

ನಾ ಮಲ್ಲಿಗುರಾಯ
ನಿನ ಸತ್ಯಕೆ ಮೆಚ್ಚುದಿ
ನಮ ಅರಮನ್ಗೆ ಹೋಗುಮ
ನಡಿ ಹೆಣ್ಣೆ [ºº]

ಎಂದು ಕ್ಷಮೆಯನ್ನು ಯಾಚಿಸುತ್ತಾ ಪುನಃ ದುಂಡಮ್ಮನನ್ನು ಮಗನೊಂದಿಗೆ ಸೇರುತ್ತಾನೆ. ಹೀಗೆ ಕಥೆ ಸುಖಾಂತದಿಂದ ಕೊನೆಗೊಳ್ಳುತ್ತದೆ.

ಒಟ್ಟಾರೆ ಭಾರತೀಯ ಜಾನಪದ ಬದುಕು ವೈವಿಧ್ಯಮಯವಾದ ಜೀವನ ಚಿತ್ರಣಗಳನ್ನು ಕಟ್ಟಿಕೊಡುತ್ತದೆ. ಒಪ್ಪಿತ ಸಮಾಜದ ಚೌಕಟ್ಟಿಗೆ ಬಂಧಿಯಾಗಿ ಬದುಕುವಂತೆಯೇ ಚೌಕಟ್ಟನ್ನು ಮೀರಿ ಬದುಕಿ ತೋರಿದ ಕಥನಗಳಿವೆ. ಮಾತೃಮೂಲ ಕುಟುಂಬದ ಲಕ್ಷಣಗಳು ಹೆಣ್ಣಿಗೆ ಸ್ವಾತಂತ್ರ್ಯವನ್ನು ಗೌರವಗಳನ್ನು ನೀಡಿರುವುದು ನಮಗೆ ಕಂಡುಬರುತ್ತವೆ. ಆದರೆ ವೈದಿಕ ಸಂಸ್ಕೃತಿ ಮತ್ತು ಸಮಾಜಗಳು ಪಿತೃತ್ವದ ಕಲ್ಪನೆಯನ್ನು ಶ್ರೇಷ್ಠವೆಂದು ನಂಬಿರುವುದು ಹಾಗೆಯೇ ಈ ನಂಬಿಕೆಗಳನ್ನು ನಿಧಾನವಾಗಿ ಮಾತೃಪ್ರಧಾನ ಕುಟುಂಬಗಳು ಒಪ್ಪುತ್ತಾ ಬಂದು ಅದನ್ನು ತಮ್ಮ ಬದುಕಿನ ಭಾಗವಾಗಿ ಸ್ವೀಕರಿಸಿವೆ. ಇಲ್ಲಿನ ಸುಖಾಂತದಿಂದ ಕೊನೆಗೊಳ್ಳುವ ಕಥಾನಾಯಕಿಯರು ಪುರುಷ ಪ್ರಧಾನ ಸಾಮಾಜಿಕ ಚೌಕಟ್ಟುಗಳನ್ನು ಮೀರಿ ವರ್ತಿಸದಂತೆ ಕಾಣಬರುತ್ತಾರೆ. ಈ ದೃಷ್ಟಿಯಿಂದ ಉತ್ತರದೇವಿ, ಹೊನ್ನಮ್ಮ, ಗುಣಸಾಗರಿ, ದುಂಡಮ್ಮ ಮುಂತಾದವರು ಎಲ್ಲಾ ಬಗೆಯ ನಿಂದನೆಗಳನ್ನು, ಅಪಮಾನಗಳನ್ನು, ಅವಮಾನಗಳನ್ನು ಸಹಿಸಿಕೊಳ್ಳುತ್ತಲೇ ತಮ್ಮ ಬದುಕನ್ನು ಗಟ್ಟಿಗೊಳಿಸಿಕೊಳ್ಳುತ್ತಾರೆ. ಕಥನ ಗೀತೆಗಳಲ್ಲಿ ಉತ್ತರದೇವಿ, ಬಸವಿಯೆಂಬ ಆರೋಪ ಹೊತ್ತುಕೊಂಡು ಅದರಲ್ಲೇ ಕರಗಿ ಹೋಗುವುದಿಲ್ಲ. ಬದಲಾಗಿ ಇತರ ಪಾಠಾಂತರಗಳಲ್ಲಿ ಚಿತ್ರಣಗೊಂಡಂತೆ ತನ್ನ ಬದುಕಿನ ಹೊಸದಾರಿಯನ್ನು ಕಂಡುಕೊಳ್ಳುತ್ತಾಳೆ. ಪುರುಷ ನಿರ್ಮಿತ ನೀತಿ-ಅನೀತಿ, ಮೌಲ್ಯ ಅಪಮೌಲ್ಯಗಳೆಂಬ ಅಮೂರ್ತ ಕಲ್ಪನೆಗಳಿಗೆ ಹೊಸ ವ್ಯಾಖ್ಯಾನ ಬರೆಯುತ್ತಾಳೆ.

ಹೊನ್ನಮ್ಮನೂ ಸಹ ಶಿವಪಾರ್ವತಿಯರೆಂಬ ಅತಿಮಾನುಷ ಶಕ್ತಿಯ ಪ್ರವೇಶದಲ್ಲಿ ಸಂತಾನ ಭಾಗ್ಯ ಪಡೆಯುತ್ತಾಳೆ. ಧಿಕ್ಕರಿಸಿದವರು ಸೋತಾಗ ಅಸಹಾಯಕರಾದಾಗ, ಮನೆಗೆ ಕರೆದು ಪುರಸ್ಕರಿಸುತ್ತಾಳೆ. ಅಷ್ಟರಮಟ್ಟಿಗೆ ಹೊನ್ನಮ್ಮ ತನ್ನ ಜೀವನದಲ್ಲಿ ಯಶ ಪಡೆಯುವ ಪಾತ್ರವಾಗುತ್ತಾಳೆ. ಇಂಥದ್ದೆ ಇನ್ನೊಂದು ಕಥೆ 'ದುಂಡಮ್ಮ' ನದು. ಶೀಲ ಶಂಕೆಯೇ ಮುಖ್ಯವಾಗಿ ಗಂಡನಿಂದ ಹತಳಾದರೂ ಬಳೆಗಾರಶೆಟ್ಟಿಯ ಮೂಲಕ ಪುನರ್ಜನ್ಮ ಪಡೆದಂತೆ ಕಥೆಯಲ್ಲಿ ಕಂಡು ಬರುತ್ತದೆ. ಆದರೆ ನಿಜವಾಗಿಯೂ ಬಳೆಗಾರಶೆಟ್ಟಿಯ ಮೂಲಕವೇ ಪುನರುದ್ಧಾರಗೊಂಡು ಪ್ರತ್ಯೇಕವಾಗಿ ಬಾಳುತ್ತಲೇ ತನ್ನ ಗಂಡನ ಪಾಪವನ್ನು ತೆರೆದು ತೋರಿಸಿದ್ದಾಳೆ. ಅಂತೆಯೇ ಪುನಃ ಗಂಡ 'ಮಲ್ಲಿಗುರಾಯನೇ ' ಸೋತು ಬಂದು ಮಡದಿ ದುಂಡಮ್ಮನನ್ನು ಕೂಡಿಕೊಳ್ಳುತ್ತಾನೆ. ಹೀಗೆ ಗುಣಸಾಗರಿಯೂ ಕೂಡ ಸಮಾಜದ ಕಣ್ಣಿನಲ್ಲಿ ನೀಚಳಾಗಿ ಕಂಡು ಬಂದರೂ ಅಂತಿಮವಾಗಿ ತನ್ನ ಪಾವಿತ್ರ್ಯತೆಯನ್ನು ಸಾಬೀತು ಪಡಿಸುತ್ತಲೇ ಗಂಡು ಕುಲವನ್ನು ಗೆಲ್ಲುತ್ತಾಳೆ. ಗೆದ್ದು ಬದುಕು ಬಾಳುತ್ತಾಳೆ. ಅನ್ಯಪುರುಷ ಮಡಿವಾಳನ ಮನೆಯಲ್ಲಿ ಉಳಿದು ತಿರಸ್ಕರಿಸಿದ ತನ್ನ ಮನೆಯವರೇ ಸ್ವೀಕಾರ ಮಾಡುವಂತ ಹಠ ತೊಟ್ಟು ಬಾಳಿದಂತಿದೆ.

ಹೀಗೆ ಸುಖಾಂತಗೊಳ್ಳುವ ಕಥನಗೀತೆಗಳು ಒಂದು ಬಗೆಯ ಆಧುನಿಕ ಚಲನ ಚಿತ್ರಗಳ ತಂತ್ರಗಳ ಮಾದರಿಯಲ್ಲಿ ರಚನೆಗೊಂಡಂತಿವೆ. ಅಂದರೆ ಈ ಜನಪದ ಕಥಾನಕಗಳು ನಮ್ಮ ಸಾಮಾಜಿಕ ಸಂದರ್ಭಗಳಲ್ಲಿರುವ ವ್ಯವಸ್ಥೆಯ ಕಟ್ಟುಪಾಡುಗಳನ್ನು, ರೀತಿ ರಿವಾಜುಗಳನ್ನು ಸಾಂಪ್ರದಾಯಿಕ ಗಡಿ ಗೆರೆಗಳನ್ನು ತುಂಬಾ ಅರ್ಥಪೂರ್ಣವಾಗಿ ಬಿಂಬಿಸುತ್ತವೆ. ಬದುಕಿನ ನೈಜ ಚಿತ್ರಣಗಳಂತೆ ರಚಿತವಾದರೂ ಕಲ್ಪನೆ, ಊಹೆ, ವರ್ಣನೆಗಳು ತುಂಬಾ ರೋಚಕವಾಗಿ ಕಾಣಿಸುತ್ತವೆ. ಈ ಕಥಾನಕಗಳನ್ನು ನಿರೂಪಿಸುವ ವಕ್ತೃಗಳು ಅತ್ಯಂತ ಶ್ರದ್ಧೆ ಮತ್ತು ಆಸಕ್ತಿಗಳನ್ನು ಹೊಂದಿ ರಚಿಸಿದಂತೆ ಕಾಣಬರುವ ಈ ಗೀತೆಗಳು ನಮ್ಮ ಜನಪದ ಸಮಾಜಗಳ ಅಪೇಕ್ಷೆಗಳನ್ನು, ಬೇಕು ಬೇಡಗಳನ್ನು ರುಚಿ, ಅರುಚಿಗಳನ್ನು ಅಭಿಪ್ರಾಯಗಳನ್ನು ತುಂಬಾ ಧ್ವನಿಪೂರ್ಣವಾಗಿ ಕಟ್ಟಿಕೊಡುತ್ತವೆ.

ಸುಖ-ದುಃಖಗಳ ಪರಿಕಲ್ಪನೆಗಳು ತುಂಬಾ ಸಂಕೀರ್ಣವಾದ ವಿಷಯಗಳು. ಈ ಸುಖ-ದುಃಖಗಳು ತಮಗೆ ತಾವೇ ಸ್ವತಂತ್ರವಲ್ಲ ಮತ್ತು ಅವು ಪ್ರತ್ಯೇಕವೂ ಅಲ್ಲ. ಮನುಷ್ಯ ಜೀವನದ ಒಂದು ನಾಣ್ಯದ ಎರಡು ಮುಖಗಳು. ಹೀಗಾಗಿ ಸುಖ-ದುಃಖದ ಬೆನ್ನಿಗಿರುವಂತೆ ದುಃಖ ಸುಖದ ಬೆನ್ನಿಗಿರುತ್ತದೆ ಎನಿಸುತ್ತದೆ. ಯಾಕೆಂದರೆ ಸಾವು ಮಾತ್ರವೇ ದುಃಖವಲ್ಲ, ಜೀವಿಸಿದ ಅವಧಿಯಲ್ಲಿ ಅನುಭವಿಸುವ ಯಾವುದೇ ನೋವು ಅಥವಾ ಹಿಂಸೆಯನ್ನು ದುಃಖವೇ ಎನ್ನಬೇಕು. ಅಂತೆಯೇ ಸುಖವೂ ಕೂಡ. ಆದ್ದರಿಂದ ಸಾಮಾನ್ಯ ತಿಳುವಳಿಕೆಯಲ್ಲಿ ನಾವಿರುವ ವಾಸ್ತವಿಕ ಜೀವನದಲ್ಲಿ ಪಡೆಯಬಹುದಾದ ಸುಖ ಭೌತಿಕ ವಸ್ತು ವಿಷಯಗಳಿಂದಲೇ ಸಾಧ್ಯವಾಗುವಂಥದ್ದು. ಆದರಂತೆ ಕಥನಗೀತೆಗಳಲ್ಲಿ ಬರುವ ಸುಖಾಂತದ ಹಿನ್ನೆಲೆಗಳನ್ನು ಈ ದೃಷ್ಟಿಯಿಂದಲೇ ನಾವು ಗಮನಿಸಬೇಕು. ಹಾಗಾಗಿ ಹಿಂಸೆಯ ಜಗತ್ತಿನೊಳಗೆ ಜೀವ ಚೈತನ್ಯದಂತೆ, ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ, ನಿರ್ಧಾಕ್ಷಿಣ್ಯವಾಗಿ ಸಾಮಾಜಿಕ ಕಟ್ಟುಪಾಡುಗಳನ್ನು ಮುರಿದು ಪುಟಿದೇಳುವ ಉತ್ತರದೇವಿ, ಹೊನ್ನಮ್ಮ, ದುಂಡಮ್ಮ ಮತ್ತು ಗುಣಸಾಗರಿಯಂಥ ಕಥಾನಕಗಳು ನಿಜವಾಗಿಯೂ ಜೀವಪರವಾದ ಕಾಳಜಿಗಳನ್ನು ಮಾನವೀಯ ನೆಲೆಗಳನ್ನು ವಿಸ್ತರಿಸುತ್ತವೆ. ಈ ಮೂಲಕ ಓದುವ, ಅಥವಾ ಕೇಳುವ ಸಹೃದಯಲೋಕವನ್ನು ಬೆರಗುಗೊಳಿಸುತ್ತವೆ.

ಅಡಿ ಟಿಪ್ಪಣಿಗಳು:

ಜನಪದ ಕಥನ ಗೀತೆಗಳು ಮತ್ತು ಸುಖಾಂತದ ಪರಿಕಲ್ಪನೆ :

೧. ಜನಪದ ಸಾಹಿತ್ಯದಲ್ಲಿ ಸ್ತ್ರೀ ಮಾದರಿಗಳ ಶೋಧ - ಶಾಲಿನಿ ರಘುನಾಥ, ಮಹಿಳಾ ಜಾನಪದ - ಪ್ರಧಾನ ಸಂ. ಪ್ರೊ. ಹಿ.ಶಿ. ರಾಮಚಂದ್ರೇಗೌಡ, ಸಂ. ಡಾ|| ಕೆ.ಆರ್.ಸಂಧ್ಯಾರೆಡ್ಡಿ, ಪುಟ-೧೯0, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೨. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೧೭

೩. ಅದೇ, ಪುಟ-೧೭

೪. ಅದೇ, ಪುಟ-೧೭

೫. ಸಮಗ್ರ ವಿಮರ್ಶೆ : ಡಾ|| ಗಿರಡ್ಡಿ ಗೋವಿಂದರಾಜ, ಪುಟ - ೨೨೧

೬. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೫೨

೭. ಜನಪದ ಖಂಡ ಕಾವ್ಯಗಳು - ಡಾ|| ಜೀ.ಶಂ. ಪರಮಶಿವಯ್ಯ, ಪುಟ-೫೨

೮. ಜನಪದ ಸ್ವರೂಪ ಮತ್ತು ಸಾಹಿತ್ಯ - ಪ್ರೊ. ಡಿ.ಲಿಂಗಯ್ಯ, ಡಾ|| ಕೆ.ಆರ್.ಸಂಧ್ಯಾರೆಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ - ೧೯೬

೯. ಅದೇ, ಪುಟ - ೨೦೧

೧೦. ಅದೇ, ಪುಟ - ೨೦೧

೧೧. ಅದೇ, ಪುಟ - ೨೦೧

೧೨. ಜನಪದ ಸ್ವರೂಪ ಮತ್ತು ಸಾಹಿತ್ಯ - ಪ್ರೊ. ಡಿ.ಲಿಂಗಯ್ಯ, ಡಾ|| ಕೆ.ಆರ್.ಸಂಧ್ಯಾರೆಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ - ೨೦೨

ಉಪ ಸಂಸಾರ :

ಜನಪದ ಕಥನಗೀತೆಗಳು ಮೂಲತಃ ನೀತಿಯನ್ನು ಕುರಿತ ಸಾಮಾಜಿಕ ವಸ್ತು ವಿಷಯಗಳನ್ನು ಹೊಂದಿವೆ. ಒಂದು ಸಮಾಜದ ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳು ಈ ಕಥನಗಳಲ್ಲಿ ಅಡಕವಾಗಿರುತ್ತವೆ. ಇವು ಆ ಸಮಾಜದ ಮಾನಸಿಕ ಅಭಿವ್ಯಕ್ತಿಯಾಗಿರುತ್ತವೆ. ಇವು ಸಹಜವಾಗಿಯೇ ಒಂದು ಸಮಾಜದ ಬೇಕುಬೇಡಗಳನ್ನು ನೀತಿ ನಿರೂಪಣೆಗಳನ್ನು ಪರೋಕ್ಷವಾಗಿಯಾದರೂ ಬಿಂಬಿಸುತ್ತವೆ ಎನ್ನಬೇಕು. ಒಂದು ನೆಲದಲ್ಲಿ ಬದುಕುತ್ತಿರುವ ಪರಿಸರ, ಸಂಸ್ಕೃತಿಯ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ. ಕೆರೆಕಟ್ಟೆಗಳು, ದೇವಸ್ಥಾನಗಳು ಅಲ್ಲಿ ಬೆಳೆಯುವ ದವಸ ಧ್ಯಾನಗಳು ಸಹ ನಮ್ಮ ಜೀವನ ಪದ್ಧತಿಗಳನ್ನು ರೂಪಿಸುತ್ತಿರುತ್ತವೆ. ಅಂತೆಯೇ ಆ ಸಾಮಾಜ ಇತರ ಸಮಾಜಗಳ ಜೊತೆಗೆ ಹೊಂದಿರುವ ಸಂಬಂಧಗಳೂ ಕಾರಣವಾಗುತ್ತವೆ. ಸಹಜವಾಗಿಯೇ ಪರಸ್ಪರ ಕೊಡುಕೊಳ್ಳುವ ಸಾಂಸ್ಕೃತಿಕ ವಿನಿಮಯ ನಿರಂತರವಾಗಿ ನಡೆಯುತ್ತದೆ. ಅಂತೆಯೇ ಇಲ್ಲಿಯ ಕಥನಕಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಭಾರತದ ಚಾರಿತ್ರಿಕ ಅಧ್ಯಯನದಲ್ಲಿ ಕೆಲವು ವಿದ್ವಾಂಸರು ಗುರುತಿಸುವಂತೆ ದ್ರಾವಿಡ ಸಮಾಜ ಸಂಸ್ಕೃತಿಯ ಮೇಲೆ ಆರ್ಯ ಸಮಾಜದ ಪ್ರಭಾವ ನಿಃಸಂಶಯವಾಗಿ ಆಗಿದೆ ಎನ್ನಬೇಕು. ಇಲ್ಲಿಯ ಕಥಾನಗೀತೆಗಳಲ್ಲಿ ಸ್ತ್ರೀಪಾತ್ರಗಳು ಮತ್ತು ಪುರುಷ ಪಾತ್ರಗಳನ್ನು ಗಮನಿಸಿದಾಗ ಈ ಸಂಗತಿ ಎದ್ದು ಕಾಣುತ್ತದೆ. ಕುಟುಂಬದಲ್ಲಿ ಪುರುಷನ ಪ್ರಾಧಾನ್ಯತೆ ಅಥವಾ ಯಜಮಾನಿಕೆ ಇಲ್ಲವೇ ಯಜಮಾನನ ಪಾತ್ರ ನಿರ್ವಹಿಸುವ ಅತ್ತೆಯರಿಂದ ಇಲ್ಲಿಯ ಬಲಿದಾನ, ತ್ಯಾಗ ಮಾಡುವ ಹೆಣ್ಣುಗಳ ಮೇಲೆ ಶೋಷಣೆ ಜರುಗಿದೆ. ಈ ಶೋಷಣೆಯ ಮನೋಧರ್ಮಕ್ಕೆ ಪಿತೃಪ್ರಧಾನ್ಯತೆಯುಳ್ಳ ಆರ್ಯಸಮಾಜದ ಸಾಮಾಜಿಕ ಲಕ್ಷಣಗಳು ಇವೇ ಆಗಿವೆ. ಆದ್ದರಿಂದ ಇಲ್ಲಿ ನಡೆಯುವ ದುರಂತಗಳು ಸಹಜವಾಗಿಯೇ ಯಜಮಾನ ಸಂಸ್ಕೃತಿಯ ವಿಧಾನದಲ್ಲಿಯೇ ನಡೆಯುತ್ತದೆ.

ಯಾವುದೇ ಸಮಾಜದ ಸಾಹಿತ್ಯ, ಕಲೆ, ಏಕಕಾಲಕ್ಕೆ ಸ್ಥಳೀಯತೆಯನ್ನು ಧರಿಸಿ ವಿಶ್ವಾತ್ಮಕವಾದ ದೃಷ್ಟಿ ಸಹಜವಾಗಿಯೇ ಇರುತ್ತದೆ. ಅಂತೆಯೇ ಜನಪದ ಕಥನಗೀತೆಗಳಲ್ಲಿ ಅನಕ್ಷರಸ್ಥ ಸಮಾಜದ

ಮಧ್ಯಮ ವರ್ಗದ ಹೆಣ್ಣುಗಳು ಬಾಯಿ ಮುಚ್ಚಿಕೊಂಡು ವ್ಯವಸ್ಥೆಯ ಬಂಧಿಗಳಾಗಿ ತಮ್ಮ ಕೊರಳೊಪ್ಪಿಸುತ್ತಾರೆ. ಹಾಗೆ ಒಪ್ಪಿಸುವಂತಹ ಮನಸ್ಥಿತಿಯನ್ನು ರೂಪಿಸಲಾಗುತ್ತದೆ. ಈ ಬಗೆಯ ಮನೋಧರ್ಮ ರೂಪಗೊಳ್ಳುವುದಕ್ಕೆ ಹುಸಿ ಮೌಲ್ಯಗಳನ್ನು ಸಮಾಜದಲ್ಲಿ ವಿಜೃಂಬಿಸಲಾಗಿದೆ. ಮತ್ತು ಹಾಗೆ ಬಲಿಯಾದ ತ್ಯಾಗಮಯಿಗಳ ಹೆಸರಿನಲ್ಲಿ ದೈವತ್ವದ ಕಲ್ಪನೆ ನಿರೂಪಿಸುವುದರಿಂದ ಭಾವುಕತೆ ಬಂದುಬಿಡುತ್ತದೆ. ಹೀಗೆ ಭಾವಪರವಶರಾದ ನಾಗವ್ವ ಈರೋಬಿ, ಮುಂತಾದವರು ಬದುಕುವ ಸಣ್ಣ ಅವಕಾಶಗಳನ್ನು ನಿರಾಕರಿಸಿಬಿಡುತ್ತಾರೆ. ಮತ್ತಾವಲ್ಲ ಈರೋಬಿಯಂತವಳು, ಪುನರ್ ವಿವಾಹಕ್ಕೆ ಮುಂದಾದ ಚೆನ್ನಪಟ್ಟಣದ ನಿಂಗೇಗೌಡನ ಪ್ರಸ್ತಾವನೆಯನ್ನು ನಿರಾಕರಿಸಿ ಅವನಿಗೆ ಹಿಡಿಶಾಪಹಾಕುತ್ತಾಳೆ. ಇದು ಮೇಲು ನೋಟಕ್ಕೆ ಈರೋಬಿಯ ಸ್ವಂತ ನಿರ್ಧಾರದಂತೆ ಕಂಡುಬಂದರೂ ಅಂತಹ ಭಾವನೆಗಳು ಮೂಡಲು ಕಾರಣವಾಗುವ ಸಂಗತಿಗಳನ್ನು ನಾವು ಅರಿಯಬಹುದು.

ಇಲ್ಲಿಯ ಸ್ತ್ರೀಯರ ಜೀವನವನ್ನು ನಿರ್ದೇಶಿಸುವವರು ಪುರೋಹಿತಶಾಹಿಗಳೇ ಆಗಿರುತ್ತಾರೆಂಬುದು ನಿರ್ವಿವಾದ. ಆದ್ದರಿಂದ ಇಂತಹ ಕಥನಗೀತೆಗಳನ್ನು ಅಧ್ಯಯನ ಮಾಡುವಾಗ ಪರಂಪರೆಯ ಬೇರುಗಳು ಮುಖ್ಯವಾಗುತ್ತವೆ. ಅಂತೆಯೇ ತಮ್ಮ ಸ್ವಾರ್ಥಕ್ಕಾಗಿ ಸ್ವಪೋಷಣೆಗಾಗಿ ಕೂತು ತಿನ್ನುವ ಭೂರ್ಷ್ವ ವ್ಯವಸ್ಥೆಯನ್ನು ಶತಮಾನಗಳಿಂದ ಪೋಷಿಸಿಕೊಂಡು ಬರಲಾಗಿದೆ. ಆದ್ದರಿಂದಲೇ ಅಮಾಯಕ ಹೆಣ್ಣುಗಳನ್ನು ಮಾತ್ರವೇ ಬಲಿಗಿಟ್ಟು ಸಮಾಜದ ಕಣ್ಣಲ್ಲಿ ದೊಡ್ಡವರಾಗಿ, ಗೌಡರಾಗಿ, ಪಟೇಲರಾಗಿ ಮೆರೆಯುತ್ತಾರೆ. ಹೆತ್ತವರು ಹೆಣ್ಣುಕೊಟ್ಟು ಮದುವೆ ಮಾಡಿದ ಮೇಲೆ ಅವಳು ಕುಲದಿಂದ ಹೊರಗೆ ಎಂಬ ಭಾವನೆ ಅಂತೆಯೇ ಕಟ್ಟಿಕೊಂಡವರು ಅವಳನ್ನು ಒಂದು ಭೋಗ ವಸ್ತುವಿನಂತೆ ಬಳಸಿಕೊಳ್ಳಬಹುದೆಂಬ ಆಲೋಚನೆಯೇ ತುಂಬಾ ವಿಕೃತವಾದದ್ದು. ಮಾತ್ರವಲ್ಲ ಅಮಾನವೀಯವಾದದ್ದು ಹೌದು. ಈ ಬಗೆಯ ಆಲೋಚನೆಗಳು ದುಷ್ಟಮನೋಭಾವದ ಪ್ರತೀಕವೆನ್ನದೆ ವಿಧಿಯಿಲ್ಲ. ಅದರ ಕರಾಳಕೂಪ ಇನ್ನೂ ಮುಂದುವರೆದು ಮೌಢ್ಯದಲ್ಲಿಯೇ ತನ್ನ ಆತ್ಮಾರ್ಪಣೆಗೆ ಸಿದ್ಧಳಾಗುವ ಹೆಣ್ಣೆನದು.

ಇಲ್ಲಿ ಬಲಿಯಾಗುವ ಹೆಂಗಸರು ತಮ್ಮ ಅಮೂಲ್ಯವಾದ ಜೀವ ಮತ್ತು ಜೀವನವನ್ನು ನಾಶಮಾಡಿಕೊಳ್ಳುತ್ತಿದ್ದೇವೆ ಎಂಬ ಅರಿವು ಇಲ್ಲದವರು ಮತ್ತು ಕಥಾನಕದಲ್ಲಿ ಇವರ ಪಾತ್ರ ಬೇರೆ ಯಾವ ಬದುಕಿನ ಸಂದರ್ಭಗಳಲ್ಲೂ ಕಾಣಿಸಿಕೊಳ್ಳುವುದಿಲ್ಲ. 'ಕೊಟ್ಟರೆ ಕೊಡಲೇಳು ಇಟ್ಟಾಂಗ ಇರಬೇಕು ' ಎಂಬ ತತ್ವ ಅಚ್ಚಳಿಯದೇ ಬೇರೂರಿದೆ. ಈ ತತ್ವವಲ್ಲದೆ ಅವರಿಗೆ ಬೇರೇನೂ ತಿಳಿದಿಲ್ಲ. 'ಕೆಟ್ಟು ತವರು ಸೇರು ' ಎಂಬ ಗಾದೆ ಇದ್ದರೂ ವಾಸ್ತವವಾಗಿ ತವರಿನಲ್ಲೂ ಅವಳಿಗೆ ಬದುಕಿನ ಅವಕಾಶ ಇಲ್ಲ ಎಂದೇ ಹೇಳಬೇಕು. ತನ್ನ ಪಾಲಿಗೆ ಬೆನ್ನ ಕಟ್ಟಬಹುದಾದ ಅಣ್ಣತಮ್ಮಂದಿರು ಕೊನೆಯಲ್ಲಿ ನೆರವಾಗುವುದಿಲ್ಲ. ಆದ್ದರಿಂದ ಇದ್ದು (ಬದುಕಿ) ದುರ್ಮಾರ್ಗಿ, ಗಂಡ ಬಿಟ್ಟವಳು, ವ್ಯವಸ್ಥೆಯ ಧಿಕ್ಕರಿಸಿದವರಳು. ನೀಚೆ, ಕುಲಟೆ, ಮುಂತಾದ ಚುಚ್ಚು ನುಡಿಗಳಿಂದ ನಿತ್ಯಸಾಯುವುದಕ್ಕಿಂತ ಒಮ್ಮೆ ಬಲಿಯಾಗಿ ಜೀವ ತ್ಯಾಗ ಮಾಡಿ ಇಡೀ ಸಮಾಜದ ಕಣ್ಣಲ್ಲಿ ದೇವರಾಗಿ ನೆಲೆ ನಿಲ್ಲುವುದೇ ಹೆಚ್ಚು ಹಿತವೆಂಬ ಅಸಹಾಯಕತೆಯನ್ನು ಇಲ್ಲಿ ಸೃಷ್ಟಿಸಲಾಗಿದೆ. ಈ ಬಗೆಯ ಸಂದರ್ಭದ ಸೃಷ್ಟಿಗೆ ಪ್ರಕೃತಿಯೂ ಕಾರಣವೆಂಬಂತೆ ಹೊನ್ನಮ್ಮನಂಥ ಕಥಾನಕ ಕಥೆಯಲ್ಲಿ ಕಂಡು ಬರುತ್ತದೆ.

ಇಂತಹ ಸ್ತ್ರೀಪುರಷರೆಂಬ ಅಸಮಾನ ಸಮಾಜದಲ್ಲಿ ಬದುಕುವ ಸ್ತ್ರೀಯರು ಅನಿವಾರ್ಯವಾಗಿ ವ್ಯವಸ್ಥೆಯ ಭಾಗವಾಗಿ ಬದುಕುವುದು ಸರಿಯೆಂದೇ ಭಾವಿಸಿರುವಂತೆ ಕಾಣುತ್ತದೆ. ಆದರೆ ಇಂತಹ ಕಠೋರ ಹಿಂಸೆಯ ಮಧ್ಯೆಯೂ ವಿರಳವಾಗಿ ಕೆಲವು ಸ್ತ್ರೀ ಪಾತ್ರಗಳು ವ್ಯವಸ್ಥೆಯ ಕ್ರೌರ್ಯಕ್ಕೆ ಸೆಡ್ಡು ಹೊಡೆದು ನಿಲ್ಲುವುದನ್ನು ಕಾಣುತ್ತೇವೆ. ಉತ್ತರದೇವಿ ಅಂತಹ ಪಾತ್ರವಾಗಿ ಕಥನಗೀತೆಯಲ್ಲಿ ಕಾಣುತ್ತಾಳೆ. ತನ್ನ ಬಂಧುಬಳಗದವರಿಂದ ದೂರ ಉಳಿದು ಸಮಾಜದ ಒಪ್ಪದ ಸಂಬಂಧವನ್ನು ಹೊಂದಿ ಬದುಕು ಸಾಗಿಸುವ ಕಥಾನಕವೂ ಕಂಡುಬರುತ್ತದೆ. ನಿಜವಾಗಿಯೂ ಈ ಕಥಾನಕ ಅತ್ಯುತ್ತಮ ಪಾಠಾಂತರವೆಂದೇ ಹೇಳಬೇಕು. ಉಸಿರುಗಟ್ಟಿಸುವ ವಾತಾವರಣದಲ್ಲಿಯೂ ತನ್ನ ಬದುಕನ್ನು ಹುಡುಕಿಕೊಳ್ಳುವ ಪಾತ್ರವಾಗಿ ಉತ್ತರೆ ಕಾಣಿಸುತ್ತಾಳೆ. ಇದು ಮೆಚ್ಚಲೇಬೇಕಾದ ಅಪರೂಪದ ಸಂಗತಿ.

ಸುಖಾಂತಗೊಳ್ಳುವ ಕಥನಗೀತೆಗಳು ಕೂಡ ಪೂರ್ಣವಾಗಿ ನೋವು, ನಿರಾಸೆಗಳಿಲ್ಲದ ಕಥಾನಕಗಳೇನಲ್ಲ. ಉತ್ತರದೇವಿಯ ಹಾಡು, ಮಲ್ಲಿಗೆರಾಯ, ಗುಣಸಾಗರಿ, ಹೊನ್ನಮ್ಮನಂಥ ಕಥೆಗಳಲ್ಲಿ

ಕಥನಗಳುದ್ದಕ್ಕೂ ಹಿಂಸೆ, ನೋವು, ಆತಂಕ, ಬೇಸರ, ಕಣ್ಣೀರಿನ ಮೂಲಕವೇ ಕತೆ ಸಾಗುತ್ತದೆ. ಜೀವಿತದುದ್ದಕ್ಕೂ ಇನ್ನಿಲ್ಲದ ಚಿತ್ರಹಿಂಸೆಯನ್ನು ಅನುಭವಿಸಿ ಕೊನೆಗಳಿಯಲ್ಲಿ ಸುಖಾಂತಗೊಂಡಂತೆ ಚಿತ್ರಣವಿದೆ. ಇಲ್ಲಿಯೂ ಕೂಡ ಈ ಪಾತ್ರಗಳಿಗೆ ಸಾವು ನೋವುಗಳ ಬಿಡುಗಡೆ ಸಿಗುತ್ತದೆಯೇ ಹೊರತು ಅವರೇನೂ ಸರ್ವ ಸ್ವಾತಂತ್ರ್ಯವನ್ನು ಪಡೆದವರಾಗಿ ಕಾಣಬರುವುದಿಲ್ಲ. ತತ್‌ಕಾಲದಲ್ಲಿ ಮಾತ್ರವೇ ಬಿಡುಗಡೆ ದೊರೆಯುತ್ತದೆಂಬುದನ್ನು ಮನಗಾಣಬೇಕು. ದುರಾದೃಷ್ಟವೆಂದರೆ ಭಾಗೀರತಿ, ಉತ್ತರದೇವಿಯರ, ಮದಗದ ಕೆಂಚವ್ವನ ಅತ್ತೆಯಂದಿರು ಹೆಣ್ಣೇ ಆಗಿದ್ದರೂ ಈ ಬಲಿಯಾಗುವ ಪಾತ್ರಗಳ ನೆರವಿಗೆ ಬರುವುದಿಲ್ಲ. ಬದಲಾಗಿ ಜೋಯಿಸ ಹೇಳಿದ ಭವಿಷ್ಯಕ್ಕೆ ತಲೆಯಾಡಿಸುವ ತಮ್ಮ ಗೌಡಗಂಡಂದಿರ ಪರವಾಗಿಯೇ ನಿಂತುಬಿಡುತ್ತಾರೆ. ಈ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ನಮ್ಮ ಭಾರತೀಯ ಕುಟುಂಬದಲ್ಲಿ ಅತ್ತೆಯಂದಿರೂ ತಮ್ಮ ಗಂಡಂದಿರ ಕಣ್ಣಳತೆಯಲ್ಲಿಯೇ ಇದ್ದು ಅವರಿಗೆ ಪೂರಕವಾಗಿ ವರ್ತಿಸಲೇಬೇಕಾದ ಅನಿವಾರ್ಯತೆಗೆ ಸಿಕ್ಕಿಕೊಳ್ಳುತ್ತಾರೆ. ಯಾಕೆಂದರೆ ಅವರೂ ಈ ಪುರಷ ಅಧೀನರಾಗಿರುವುದರಿಂದ ಸ್ವಾತಂತ್ರ್ಯ ಕಳೆದುಕೊಂಡವರೇ ಹೌದು.

ಜನಪದ ಸಾಹಿತ್ಯ ಜನಪದರ ಜೀವನದ ಬಹುಮುಖ್ಯ ಅಭಿವ್ಯಕ್ತಿ ಪ್ರಕಾರ. ಇಲ್ಲಿಯ ಕಥಾನಕಗಳು ಉದ್ದೇಶಪೂರ್ವಕ ಸಾಹಿತ್ಯದ ಅನುಭವವನ್ನು ಕಟ್ಟಿಕೊಡುವುದಿಲ್ಲ. ಅವು ಸಹಜ ಬದುಕಿನ ಅಭಿವ್ಯಕ್ತಿಗಳೇ ಆಗಿರುತ್ತವೆ. ಅಂತೆಯೇ ಸುಶಿಕ್ಷಿತರಲ್ಲದ ಜನಪದರ ಮುಂದೆ ಶಿಷ್ಟ ಕಾವ್ಯಗಳ ಘಟನೆಗಳು ಪ್ರಭಾವ ಬೀರದಂತೆ ಕೆಲವೊಮ್ಮೆ ಕಾಣಿಸುತ್ತವೆ. ''ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತ'' ರಾದ್ದರಿಂದ ಎಲ್ಲೋ ಕೇಳಿದ ಆಲಿಸಿದ. ಶಿಷ್ಟ ಪುರಾಣಗಳು ಸಹಜವಾಗಿಯೇ ಅಲ್ಲಲ್ಲಿ ಹೋಲಿಕೆಯಂತೆ ಕಾಣುತ್ತವೆ. 'ಮಲ್ಲಿಗೆರಾಯ' ಮತ್ತು 'ಗುಣಸಾಗರಿ', ಹೊನ್ನಮ್ಮ ಇಂಥ ಕಥನ ಗೀತೆಗಳಲ್ಲಿ ಶಾಕುಂತಲದಂತ ಕತೆಯ, ಭಕ್ತ ಸಿರಿಯಾಳ ಕಥೆಯ ಪುರಣಾದ ಛಾಯೆ ಕಾಣಿಸುತ್ತದೆ. ಹಾಗಾಗಿ ಒಂದು ಸಮಾಜದ ಇಡಿಯಾದ ಬದುಕಿನ ರೂಪ ಸ್ವರೂಪಗಳು ತುಂಬಾ ಅರ್ಥಪೂರ್ಣವಾಗಿ ಕಾಣಬರುತ್ತವೆ. ಈ ದೃಷ್ಟಿಯಿಂದ ಇಲ್ಲಿಯ ಕಥನಗೀತೆಗಳು ಅಪೂರ್ವ ರಚನೆಗಳು ಎನಿಸಿಕೊಳ್ಳುತ್ತವೆ.

ನನ್ನ ಅಧ್ಯಯನದ ಫಲಶೃತಿಯಾಗಿ ಒಟ್ಟಾರೆ ಆಯ್ಕೆ ಮಾಡಿಕೊಂಡ ಕಥನಗೀತೆಗಳಲ್ಲಿ ಗಮನಿಸಿದ್ದೇನೆಂದರೆ -

ಇಲ್ಲಿಯ ಕಥನಗೀತೆಗಳಲ್ಲಿ ಶೋಷಣೆಗೊಳಗಾದ, ಸತಿ ಹೋದ, ಅಥವಾ ಬಲಿಯಾದ ಹೆಣ್ಣುಗಳೆಲ್ಲ ಸ್ವ ಇಚ್ಛೆಯಿಂದ ಬಲಿಯಾದಂತೆ ಕಂಡುಬರುವುದಿಲ್ಲ. ಬೇರೆ ಬೇರೆ ಪ್ರಕ್ರಿಯೆಯ ಮೂಲಕ ನಿರಾಕರಣೆ ಮಾಡುವ ಅಥವಾ ಪ್ರತಿಭಟಿಸುವ ಒಳಾಸೆಯನ್ನು ಹೊಂದಿರುವಂಥವರೆಂದು ಸೂಕ್ಷ್ಮವಾಗಿ ಗಮನಿಸಬೇಕು. ಹೆಚ್ಚಿನ ಕಾವ್ಯಗಳಲ್ಲಿ ಗಂಡನ ಅನುಪಸ್ಥಿತಿಯಲ್ಲಿ ಅಂದರೆ ಗಂಡಂದಿರು ದಂಡಿಗೆ ಇಲ್ಲ ವ್ಯಾಪಾರಕ್ಕೆ ಹೋಗಿರುವ ಸಂದರ್ಭದಲ್ಲೇ ಹೆಣ್ಣಿಗೆ ಅನ್ಯಾಯವಾದದ್ದು ಕಂಡುಬರುತ್ತದೆ. ಒಂದು ವೇಳೆ ಗಂಡ ಇದ್ದರೂ ಅವನ ಮಾತಿಗೆ ಯಾವುದೇ ಮನ್ನಣೆಯಿಲ್ಲ. ತಂದೆ ಅಥವಾ ತಾಯಿಯ ಮಾತಿಗೆ ಕಟ್ಟುಬಿದ್ದವರು. ಬಲಿಯಾಗುವ ಹೆಣ್ಣುಗಳೆಲ್ಲ ನವವಧುಗಳು ಹಾಗೂ ವಯಸ್ಸಿನಿಂದ ಚಿಕ್ಕವರೇ ಆಗಿರುತ್ತಾರೆ. ಅತ್ತೆ ಸೊಸೆಯರ ಜಗಳ, ಒಳ ಲೈಂಗಿಕ ಸಂಬಂಧಗಳ ಅನುಮಾನವಿರುವುದು ಕಂಡು ಬರುತ್ತವೆ. ಎಲ್ಲಾ ಕತೆಗಳಲ್ಲೂ ಬಲಿಯಾದವಳು ಸೊಸೆಯೇ ಆಗಿರುವುದು ಇನ್ನಿಲ್ಲದ ಪ್ರಶ್ನೆಗಳಿಗೆ ಅನುಮಾನಕ್ಕೆ ದಾರಿಮಾಡಿಕೊಟ್ಟಿದೆ. 'ಕೆರೆಗೆ ಹಾರ ' ದಂಥ ಗೀತೆಗಳನ್ನು ಹೊರತುಪಡಿಸಿ ಉಳಿದಂತೆ ಮಾವನ ಪಾತ್ರ ಗೌಣ. ಗಮನಿಸಲಾದ ಇನ್ನೊಂದು ಸಂಗತಿಯೆಂದರೆ ಮಧ್ಯಮವರ್ಗದ ಕೌಟುಂಬಿಕ ಚಿತ್ರಣವೇ ಹೆಚ್ಚಾಗಿ ಕಂಡು ಬರುವಂಥದ್ದು. ಬಲಿದಾನವೆಂಬ ಆದರ್ಶಕ್ಕೆ ಬಲಿಯಾಗುವುದು ಆ ಕಾಲ ಘಟ್ಟದ ಸಾಮಾಜಿಕ ಪರಿಸ್ಥಿತಿಯನ್ನು ಸೂಚಿಸುತ್ತದೆ. ಅಷ್ಟೇ ಅಲ್ಲ ಹೆಣ್ಣಿನ ಪಾವಿತ್ರ್ಯಕ್ಕೆ ಶೀಲಕ್ಕೆ ಹೆಚ್ಚು ಮಹತ್ವಕೊಟ್ಟಂತಿದೆ. ಹೆಣ್ಣು ಪವಿತ್ರಳಾದುದರಿಂದ ಆಕೆ ಮಹಾಸತಿಯಾಗುತ್ತಾಳೆ. ದೇವತೆಯಾಗುತ್ತಾಳೆ. ದೇವರನ್ನು ಒಲಿಸಿಕೊಳ್ಳುತ್ತಾಳೆ. ಇಂಥದ್ದೊಂದು ಕಲ್ಪನೆಯಿಂದಲೇ ಅನ್ಯಾಯವಾಗಿ ಮುಗ್ಧ ಹೆಣ್ಣುಮಕ್ಕಳು ಬಲಿಯಾದದ್ದು ಹಾಗಾದರೆ ಗಂಡಿಗೆ ಪಾವಿತ್ರ್ಯತೆ ಬೇಡವೆ ? ಹೆಣ್ಣಿಗೆ ಶೀಲವಿದ್ದಂತೆ ಗಂಡಿಗೆ ಶೀಲವಿಲ್ಲವೇ ? ಕಥೆಗಳ ಉದ್ದಕ್ಕೂ ಹೆಣ್ಣು ಮಾತ್ರ ಶೀಲಕ್ಕೆ ಪಾತಿವ್ರತ್ಯದ ಶಂಕೆಗೆ ಗುರಿಯಾಗಿ ಪರೀಕ್ಷೆಗೆ ಒಪ್ಪಿಕೊಂಡವಳು. ಬಲಿಯಾದವಳು. ದಂಡಿಗೆ ಹೋದ ಗಂಡು ಸತಿಗೆ ನಿಷ್ಠನಾಗಿದ್ದಾನೆಯೇ ? ಅದನ್ನೆಂದೂ ಪುರುಷ ಪ್ರಧಾನ ಸಮಾಜ ಪ್ರಶ್ನಿಸುವುದಿಲ್ಲ. ಹಾಗೆಯೇ ಅವರನ್ನು ಬಲಿ ಕೇಳುವುದೂ

ಇಲ್ಲ. ‘ಉತ್ತರದೇವಿ ’ ಕಾವ್ಯದ ಇನ್ನೊಂದು ಪಾಠಾಂತರದಲ್ಲಿ ಉತ್ತರದೇವಿಯೆ ಇನ್ನೊಬ್ಬ ಪುರುಷನೊಂದಿಗೆ ಇದ್ದು ಗಂಡನ ಕರೆಯನ್ನೇ ನಿರಾಕರಿಸಿ ಗಂಡನನ್ನೇ ಪ್ರಶ್ನಿಸುವುದು ನಿಜಕ್ಕೂ ಕುತೂಹಲಕಾರಿಯಾದುದು. ಎಷ್ಟೇ ಪ್ರತಿಭಟಿಸಿದರೂ ಆ ಪ್ರತಿಭಟನೆಗೆ ನ್ಯಾಯ ಎಲ್ಲೂ ಸಿಕ್ಕಿಲ್ಲ, ಸಿಕ್ಕಿಲ್ಲ ಎನ್ನುವುದಕ್ಕಿಂತ ಕೊಟ್ಟಿಲ್ಲವೆಂದುಕೊಂಡಿದ್ದೇನೆ.

ಪರಾಮರ್ಶನ ಗ್ರಂಥಗಳು

೧. ಜಿ.ಎಸ್.ಭಟ್ಟ (ಸಂ) : ಜಾನಪದ ೧೯೯೧ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೩

೨. ಡಾ|| ನಂ ತಪಸ್ವೀಕುಮಾರ್ : ಕನ್ನಡ ಜನಪದ ಗೀತೆಗಳು ಸಾಂಸ್ಕೃತಿಕ ಅಧ್ಯಯನ

೩. ಡಾ|| ಜೀ.ಶಂ.ಪರಮಶಿವಯ್ಯ (ಸ) : ಜನಪದ ಖಂಡ ಕಾವ್ಯ ೧೯೯೬

೪. ಡಾ|| ತೀ ನಂ.ಶಂಕರನಾರಾಯಣ (ಪ್ರ.ಸಂ) : ಜನಪದ ಸಾಹಿತ್ಯ

೫. ಎನ್.ಗಾಯತ್ರಿ : ಮಹಿಳೆ ಬಿಡುಗಡೆಯ ಹಾದಿಯಲ್ಲಿ

೬. ಡಾ|| ಎಚ್.ಎಸ್.ಮೋಹನ ಚಂದ್ರಗುತ್ತಿ : ಸುರಗಿ ದಂಡ, ಬಡತಿ ಪ್ರಕಾಶನ, ಸಾಗರ ೨೦೦೫

೭. ಡಾ|| ಗಾಯತ್ರಿ ನಾವಡ : ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು

೮. ಡಾ|| ಕೆ.ಆರ್.ಸಂಧ್ಯಾ ರೆಡ್ಡಿ : ಮಹಿಳಾ ಜಾನಪದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೨೦೦೩

೯. ಡಾ|| ಹಾ.ಮಾ.ನಾಯಕ್ (ಪ್ರ.ಸಂ) : ಸಾಮಾಜಿಕ ಮಾನವಶಾಸ್ತ್ರ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ.

೧೦. ಡಾ|| ಡಿ.ಕೆ.ರಾಜೇಂದ್ರ : ಜಾನಪದ ಶಿಷ್ಟವಾದ

೧೧. ಡಾ|| ಎಚ್.ಜೆ.ಲಕ್ಕಪ್ಪಗೌಡ (ಪ್ರ.ಸಂ) : ಸುವರ್ಣ ಜಾನಪದ ಸಂಪುಟ-೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು - ೧೯೯೮

೧೨. ಪ್ರೊ. ಕಾಳೇಗೌಡ ನಾಗವಾರ (ಸಂ) : ಗಿರಿಜನ ಕಾವ್ಯ

೧೩. ಡಾ|| ಗಿರಡ್ಡಿ ಗೋವಿಂದ ರಾಜ : ಸಮಗ್ರ ವಿಮರ್ಶೆ

೧೪. ಡಾ|| ಹಿ.ಶಿ. ರಾಮಚಂದ್ರೇಗೌಡ : ಜಾನಪದ ಸಾಂಸ್ಕೃತಿಕ ಆಯಾಮಗಳು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

೧೫. ಡಾ|| ಎಚ್.ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ

೧೬. ಡಾ|| ಶೈಲಜ ಹಿರೇಮಠ : ಮಾತೃಪ್ರಧಾನ ಪರಿಕಲ್ಪನೆ

೧೭. ಡಾ|| ಸರಸ್ವತಿ ವಿಜಯಕುಮಾರ್ : ರತ್ನತ್ರಯರು ಮತ್ತು ಜಾನಪದ

೧೮. ಡಾ|| ಅರವಿಂದ ಮಾಲಗತ್ತಿ (ಸಂ) : ಜಾನಪದ ತತ್ವಗಳು

೧೯. ಡಾ|| ಮೊಗಳ್ಳಿ ಗಣೇಶ : ಮೌಖಿಕ ಕಥನ ಪ್ರಸಾರಾಂಗ ಕನ್ನಡ ವಿ.ವಿ.ಹಂಪಿ

೨೦. ಬರಗೂರು ರಾಮಚಂದ್ರಪ್ಪ (ಸಂ) : ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೧. ವಿವಿಧ ಲೇಖಕರು : ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ೧೯೯೨

೨೨. ಪ್ರೊ. ಡಿ.ಲಿಂಗಯ್ಯ, ಡಾ||.ಕೆ.ಆರ್.ಸಂಧ್ಯಾರೆಡ್ಡಿ : ಜಾನಪದ : ಸ್ವರೂಪ ಮತ್ತು ಸಾಹಿತ್ಯ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೨೩. ವೈ.ಬಿ.ಹಿಮ್ಮಡಿ : ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ

೨೪. ಡಾ|| ತೀ.ನಂ.ಶಂಕರನಾರಾಯಣ : ಜಾನಪದ ಸಮೀಕ್ಷೆ, ವಿಶ್ಲೇಷಣೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು - ೧೯೯೯

೨೫. ಡಾ|| ಎಸ್.ಕೆ. ಕರೀಂಖಾನ್ : ಜಾನಪದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೮೯

೨೬. ಡಾ|| ಎಚ್.ಜೆ.ಲಕ್ಕಪ್ಪಗೌಡ : ಸುವರ್ಣ ಜಾನಪದ ಸಂಪುಟ - ೨ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೮೯

೧೭. ರಹಮತ್ ತರೀಕೆರೆ : ಮರದೊಳಗಣ ಕಿಚ್ಚು ಬೆಳ್ಳಿಚುಕ್ಕೆ ಬುಕ್ ಟ್ರಸ್ಟ್, ಮೈಸೂರು, ೨೦೦೨.

೧೮. ವಿವಿಧ ಲೇಖಕರು : ಕನ್ನಡ ಶಿಷ್ಟ ಸಾಹಿತ್ಯದಲ್ಲಿ ಜಾನಪದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳುರು ೧೯೯೩

೧೯. ವಿವಿಧ ಲೇಖಕರು : ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳುರು ೧೯೯೩

೨೦. ಡಾ॥ ದೇ.ಜ.ಜವರೇಗೌಡ : ಜಾನಪದ ಅಧ್ಯಯನ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು ೧೯೭೬

೨೧. ವಾಲೀಕಾರ ಚೆನ್ನಣ್ಣ : ಜಾನಪದ ಲೋಕ, ದಲಿತ ಬಂಡಾಯ ವಿಚಾರ ಪ್ರಚಾರ ಸಮಿತಿ, ಗುಲ್ಬರ್ಗ, ೧೯೯೩

೨೨. ಜಿ.ಎಸ್.ಶಿವರುದ್ರಪ್ಪ(ಸಂ) : ಕರ್ನಾಕ ಜಾನಪದ ಪ್ರಾಸಾರಾಂಗ, ಬೆಂಗಳೂರು ವಿ.ವಿ. ೧೯೮೧, ಬೆಂಗಳೂರು

೨೩. ವ.ನಂ.ಶಿವರಾಮು : ಹಗೇವು ತುಂಬ್ಯಾವ ಹದಿನಾರು, ಸ್ವಾಗತ ಸಮಿತಿ, ಮಂಡ್ಯ ಜಿಲ್ಲಾ ಜಾನಪದ ಕಲಾಮೇಳ, ಮಂಡ್ಯ, ೧೯೯೭.

೨೪. ಡಾ॥ ಎಚ್.ಎಸ್.ಮೋಹನ ಚಂದ್ರಗುತ್ತಿ : ಮಲೆನಾಡಿನ ದೀವರ ಸಾಂಸ್ಕೃತಿಕ ಅಧ್ಯಯನ, ೨೦೦೫ ಅಪ್ರಕಟಿತ